ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧಕರು

ಪವಿತ್ರಾ ಎಸ್. ಪಾಟೀಲ್

ಮಾರ್ಗದರ್ಶಕರು

ಶ್ರೀಮತಿ ಶಾರದಾದೇವಿ ಎಸ್. ಜಾಧವ

ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು

ಸರಕಾರಿ ಪ್ರಥಮ ದರ್ಜೆ ಕಾಲೇಜು

ಫರಹತಾಬಾದ, ಕಲಬುರಗಿ

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಮಾನ್ಯತಾ ಕೇಂದ್ರ ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರ

ಕಲಬುರಗಿ

೨೦೧೭-೧೮

ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧಕರು
ಪವಿತ್ರಾ ಎಸ್. ಪಾಟೀಲ್

ಮಾರ್ಗದರ್ಶಕರು
ಶ್ರೀಮತಿ ಶಾರದಾದೇವಿ ಎಸ್. ಜಾಧವ
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಫರಹತಾಬಾದ, ಕಲಬುರಗಿ

ಭಾಷಾನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
ಮಾನ್ಯತಾ ಕೇಂದ್ರ ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರ
ಕಲಬುರಗಿ

೨೦೧೭-೧೮

ಸಂಶೋಧಕನ ಪ್ರಮಾಣ ಪತ್ರ

"ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ" ಎಂಬ ನಿಬಂಧವನ್ನು **ಡಾ. ಶಾರದಾದೇವಿ ಎಸ್. ಜಾಧವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮಾನ್ಯತಾ ಕೇಂದ್ರ, **ಡಾ. ಬಿ.ಡಿ.ಜತ್ತಿ** ವಚನ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕಲಬುರಗಿಯಿಂದ ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಕಲಬುರಗಿ
ದಿನಾಂಕ : 31-8-2018

ಪವಿತ್ರಾ ಎಸ್. ಪಾಟೀಲ್
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಡಾ.ಬಿ.ಬಿ.ಜತ್ತಿ ವಚನ ಅಧ್ಯಯನ ಮತ್ತು
ಸಂಶೋಧನ ಕೇಂದ್ರ, ಕಲಬುರಗಿ

ಮಾರ್ಗದರ್ಶಕರ ದೃಢೀಕರಣ ಪತ್ರ

"ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಡಾ. ಶಾರದಾದೇವಿ ಎಸ್. ಜಾಧವ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಕಲಬುರಗಿ
ದಿನಾಂಕ : 31-8-2018

ಶ್ರೀಮತಿ ಶಾರದಾದೇವಿ ಎಸ್. ಜಾಧವ
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಫರಹತಾಬಾದ, ಕಲಬುರಗಿ

ಪರಿವಿಡಿ

ಅಧ್ಯಾಯ--೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೇಯ ಶತಮಾನ ವೈಶಿಷ್ಟ್ಯಪೂರ್ಣವಾದುದು. ಏಕೆಂದರೆ ಈ ಕಾಲಘಟ್ಟದಲ್ಲಿ ಕನ್ನಡ ವಿಶಿಷ್ಟ ಸಾಹಿತ್ಯ ಪ್ರಕಾರವು ರಚನೆಯಾಗಿದೆ. ಇದು ಯಾವುದೇ ಅನ್ಯ ಭಾಷೆಗಳ ಯಾವುದೇ ಮಾದರಿಯನ್ನು ಯಾವುದೇ ದೃಷ್ಟಿಯಿಂದಲೂ ಅನುಕರಿಸದ ಅಥವಾ ಆದರ್ಶವಾಟ್ಟುಕೊಳ್ಳದೆ ಕೇವಲ ಅನುಭವದಿಂದಲೇ ಮೂಡಿ ರೂಪಿತವಾಗಿದೆ. ಮತ್ತು ಇದು ವಿಶ್ವಸಾಹಿತ್ಯಕ್ಕೆ ಕನ್ನಡವು ಸಲ್ಲಿಸಿರುವ ಕಾಣಿಕೆಯಾಗಿದೆ. ಅಲ್ಲಿ ಶರಣರು ಮೂಢನಂಬಿಕೆ ಕಂದಾಚಾರ ಮುಂತಾದ ಸಾಂಪ್ರದಾಯಿಕ ಆಚರಣೆಗಳಿಗೆ ವಿದಾಯ ಹೇಳಿ ಬದುಕಿಗೆ ಹೊಸ ಆಯಾಮ ನೀಡಿದವರು. ಮಾನವೀಯ ಸಂಭಂದಗಳನ್ನು ಗಟ್ಟಿಗೊಳಿಸಿ ಪದಗಟ್ಟ ಬದುಕಿಸಗೆ ಭರವಸೆ ತುಂಬಿದವರು.

ವಚನಗಳಲ್ಲಿ ಸಾಮಾಜಿಕ ಕಳಕಳಿಯಿದೆ ಧಾರ್ಮಿಕ ಚಿಂತನೆಯಿದ ರಾಜಕೀಯ ಸುಧಾರಣೆಯ ಹಂಬಲವಿದೆ ಎಲ್ಲದಕ್ಕಿಂತ ಮೇಲಾಗಿ ಜನರ ಆಡು ಮಾತಿನ ಸೊಗಡಿದೆ. ಜನಸಾಮಾನ್ಯರು ಓದಿದರೂ, ಕೇಳಿದರೂ ಅಹುದು, ಅಹುದು ಎನ್ನುವ ರೀತಿಯಲ್ಲಿ ಮನಸ್ಸಿಗೆ ಮುಟ್ಟಿ ನಮ್ಮ ದಿನನಿತ್ಯದ ಬದುಕಿನಲ್ಲಿ ಆಚರಣೆ ತರುವ ರೀತಿಯಲ್ಲಿ ತಿಳಿದು ನಡೆಯುವ ವಿಧಾನದಂತಿದೆ. ವಚನಗಳು ಅನುಭವ ಸಾಹಿತ್ಯವೇ ಆಗಿದೆ. ವಚನಗಳು ಪ್ರಮುಖವಾಗಿ ಸಮಾಜ ಸುಧಾರಣೆ, ವ್ಯಕ್ತಿಸುಧಾರಣೆ, ಸರಳ ಜೀವನ ಬದುಕಿನ ಮಾರ್ಗವನ್ನು ತೋರಿಸುತ್ತದೆ. ಇಂತಹ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಕನ್ನಡದಲ್ಲಿರುವ ಒಂದು ಹೆಮ್ಮೆಯ ಸಂಗತಿಯಾಗಿದೆ. ಈ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ರಚಿಸಿದವರು ಇಲ್ಲಿ ನಾನು ವಿಶೇಷವಾಗಿ ಗಮನಿಸಬೇಕಾದದ್ದು ಈ ವಚನಗಳ ರಚನೆ ಕೇವಲ ಪುರುಷ ವಚನಕಾರರು ಮಾತ್ರವಲ್ಲ ವಚನಕಾರ್ತಿಯರು ಮಾಡಿದ್ದಾರೆ. ನಾವು ಇತಿಹಾಸದ ಪುಟಗಳನ್ನು ತಿರುಚಿದಾಗ ಕನ್ನಡ ಸಾಹಿತ್ಯ ಚರಿತ್ರಯನ್ನು ಗಮನಿಸಿದಾಗ ಕಂಡು ಬರುವದು ಕೇವಲ ಪುರುಷರು ರಚಿಸಿದ ಸಾಹಿತ್ಯಗಳು ಮತ್ತು ಪುರುಷಕೇಂದ್ರಿತ ಸಾಹಿತ್ಯವಾಗಿತ್ತು. ಈ ಸಾಹಿತ್ಯವನ್ನು ಓದಬೇಕಾದರೆ ಅರಿತುಕೊಳ್ಳಬೇಕಾದರೆ ಶಿಕ್ಷಣದ ಅವಶ್ಯಕತೆ ಇತ್ತು. ಹಳೆಗನ್ನಡ ಪಂಡಿತ ಮುಖಿಸಾಹಿತ್ಯ ಪಂಡಿತರಿಂದ ಪಂಡಿತರಿಗಾಗಿ, ಪಂಡಿತಿಗೋಸ್ಕರ ರಚನೆಯಾದ ಸಾಹಿತ್ಯ ಜನ ಸಾಮಾನ್ಯರಿಗೂ ಸಾಹಿತ್ಯಕ್ಕೂ ಸಂಬಧವೇ ಇರಲಿಲ್ಲ. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ಹಳೆಗನ್ನಡವು ಕಬ್ಬಿಣದ ಕಡಲೆಯಂತೆ ತುಂಬ ಕ್ಲಿಷ್ಟವಾಗಿದೆ. ಅದರಲ್ಲಿ ಸಂಸ್ಕೃತ ಭೂಯಿಷ್ಟ ಪದಗಳ ರಚನೆಯನ್ನು ಒಳಗೊಂಡಿದೆ ಅದನ್ನು ಓದುವದು ತಿಳಿದುಕೊಳ್ಳವುದು ಕೇವಲ ಸಂಸ್ಕೃತ ಪಂಡಿತರೆ ಆಗಿದ್ದರು.

ಪ್ರಾಚೀನ ಕಾಲದಲ್ಲಿ ಶಿಕ್ಷಣವು ಕೇವಲ ಮೇಲ್ವರ್ಗದ ಮಕ್ಕಳು, ರಾಜರ ಮಕ್ಕಳುಗಳಿಗೆ ಮಾತ್ರವಾಗಿತ್ತು ಎಲ್ಲರು ಎಲ್ಲಾ ವರ್ಗದವರು ಶಿಕ್ಷಣ ಪಡೆಯುವಂತಿರಲಿಲ್ಲ. ಹಾಗಾಗಿ ಆಗಿನ ಸಾಹಿತ್ಯ ಕೇವಲ ಓದಿದವರಿಗೆ ಮತ್ತು ಬೆರಳಣಿಕೆಯ ಶಿಕ್ಷಣ ಪಡೆದವರಿಗೆ ಸೀಮಿತವಾಗಿದೆ. ಪ್ರಾಚೀನ ಸಾಹಿತ್ಯ ಅಥವಾ ಹಳೆಗನ್ನಡ ಇವು ಸರಳ ಮತ್ತು ಸಾಮಾನ್ಯ ಸಾಹಿತ್ಯವಾಗಿರಲಿಲ್ಲ. ಅಲ್ಲದೆ ರಾಜರ ಮೇಲೆ ಅವರ ವಂಶಾವಳಿಯ ಕುರಿತು ಅವರ ಪರಾಕ್ರಮವನ್ನು ಕುರಿತು ಸಾಹಿತ್ಯ ರಚನೆಗಳಾಗುತ್ತಿದ್ದವು. ಅಷ್ಟದಶ ವರ್ಣನೆಗಳ ಪಾಲನೆಯಿತ್ತು

ಇದನೆಲ್ಲ ಧಿಕ್ಕರಿಸಿ ಹೊಸ ಕಾಂತ್ರಿಯೊಂದಿಗೆ ರಚನೆಗೊಂಡ ಸಾಹಿತ್ಯ ಇಂತಹ ಪಂಡಿತ ಮುಖಿಯಾದ ಸಾಹಿತ್ಯವನ್ನು ಜನ ಸಾಮಾನ್ಯರಿಗೆ ನಿಲುಕುವ ಹಾಗೆ ಮಾಡಿ ಜನಮುಖಿಯಾಗಿಸಿದ ಶ್ರೇಯಸ್ಸು ವಚನಕಾರರಿಗೆ ಸಲ್ಲುತ್ತದೆ.

ಇಲ್ಲಿನ ವಚನಕಾರರು ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ಕೊಟ್ಟು ಅವರನ್ನು ಗೌರವಿಸಿದರು. ಅನುಭವ ಮಂಟಪದಲ್ಲಿ ಪುರುಷರು ಜೊತೆಯಲ್ಲಿ ಮಹಿಳೆಯರು ಭಾಗವಹಿಸುವ ತಮ್ಮ ಆಲೋಚನೆಗಳು ಅಭಿವ್ಯಕ್ತಿಸವು ಅವಕಾಶ ಒದಗಿಸಿಕೊಟ್ಟರು. ಆಕಾರಣದಿಂದ ಅನೇಕ ವಚನಕಾರ್ತಿಯರು ವಚನರಚನೆಯಲ್ಲಿ ತೊಡಗಿಸಿಕೊಂಡರು. ಆ ಮೂಲಕ ಮಹಿಳೆಯರಿಗೆ ಅವಕಾಶ ಕೊಟ್ಟರೆ ಅವಳು ಕೂಡ ಉತ್ತಮ ಸಾಹಿತ್ಯ ರಚನೆ ಮಾಡಬಲ್ಲಳು ಎಂಬುದನ್ನು ತೋರಿಸಿಕೊಟ್ಟರು ಹೆಣ್ಣು ಮಾಯೆಯಲ್ಲ, ಮೋಹವಲ್ಲ. ಅವಳು ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಗೌರವಿಸಿದರು. ಈ ರೀತಿ ಹೆಣ್ಣು ಗಂಡಿನಂತೆ ಸಮಾನುಳು ಎನ್ನುವ ಭಾವ ಅಲ್ಲಿಯವರೆಗೆ ನಮಗೆ ಎಲ್ಲಿಯೂ ಕಂಡು ಬರುತ್ತಿಲ್ಲ.

ಪೆಣ್ಣು ಎಂದರೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲದವಳು ಎನ್ನುವ ಮನೋಭಾವನೆಯೇ ನಮ್ಮ ಸಮಾಜದಲ್ಲಿದೆ. ವೇದಕಾಲದಲ್ಲಿ ಕೆಲವು ಮಹಿಳೆಯರು ಶಿಕ್ಷಣವನ್ನು ಪಡೆದಿದ್ದರು ಎನ್ನುವದನ್ನು ಬಿಟ್ಟರೇ ೧೨ನೇ ಶತಮಾನದವರೆಗೆ ಎಲ್ಲಿಯೂ ಸ್ತ್ರೀ ಅಭಿವ್ಯಕ್ತಿ, ಅನಿಸಿಕೆ, ಅಭಿಪ್ರಾಯ ಎನ್ನುವಂತಹ ಮಾತು ಎಲ್ಲಿಯೂ ಕೇಳಿ ಬರುವುದಿಲ್ಲ. ಏಕೆಂದರೆ ಸ್ತ್ರೀಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇಲ್ಲ. ಸ್ತ್ರೀ ಕೇವಲ ಅಡುಗೆ ಮನೆಗೆ ಸೀಮಿತಗೊಳಿಸಿರುವ ಪುರುಷನ ಭೋಗದ ವಸ್ತು ಒಡವೆಯಾಗಿದ್ದಳು. ಇದಕ್ಕೆ ಉದಾಹರಣೆಯಂತೆ ಮಹಾಭಾರತದಲ್ಲಿ ದ್ರೌಪದಿಯನ್ನು ಪಾಂಡವರು ಜೂಜಿನಲ್ಲಿ ಪಣಕ್ಕಿಟ್ಟ ಪಾಂಡವರೆಲ್ಲ ಪುರುಷರು, ಪಡೆದವರು ಪುರುಷರೇ ಆದರೆ ಮಹಾಭಾರತದಂತ ಯುದ್ಧ ನಡೆಯಲು ಮಾತ್ರ ಸ್ತ್ರೀ. ಕಾರಣಳಾದಳು.

ರಾಮಾಯಣದಲ್ಲೂ ಅಷ್ಟೇ ಸೀತೆಯನ್ನು ಮೋಹಿಸಿ ಅವಳನ್ನು ಅಪಹರಿಸಿದವನು ಪುರುಷನೇ ಆದರೆ ರಾಮಾಯಣಕ್ಕೆ ಸೀತೆಯೆ ಕಾರಣ. ಒಂದು ರೀತಿಯಲ್ಲಿ ಸ್ತ್ರೀ–ಶೋಷಣಗೆ ಅಪಮಾನಗಳಿಗೆ ಕೇಂದ್ರಬಿಂದುವಾಗಿದ್ದಾಳೆ. ಸ್ತ್ರೀ ಇಂತಹ ನಮ್ಮ ಸಮಾಜದಲ್ಲಿ ಹೆಣ್ಣು ಮಾತನಾಡುವದು ಎಂದರೆ ಕಲ್ಪನೆಗೂ ನಿಲುಕಳಾರದ ಸಂಗತಿ. ಈ ಪುರುಷಕೇಂದ್ರಿತ ಸಮಾಜದಲ್ಲಿ ಹೆಣ್ಣು ಕೆಳವರ್ಗದ ಜನರಷ್ಟೆ ಶೋಷಿತಳು, ಸ್ತ್ರೀ ಇಲ್ಲಿ ಹೆಣ್ಣು ದೇವತೆ, ಲಕ್ಷ್ಮೀ, ಸರಸ್ವತಿ, ತಾಯಿ, ಎಂದಲ್ಲ ಪೂಜಿಸಿದರು. ಆದರೆ ಹೆಣ್ಣನ್ನು ಒಂದು ಜೀವಿಯೆಂದು ಗೌರವಿಸಲಿಲ್ಲ. ಅವಳಿಗೂ ಮನಸ್ಸಿದೆ ಭಾವನೆಗಳಿಲ್ಲವೇ? ಎಂದು ಪರಿಗಣಿಸಲಿಲ್ಲ. ಅವಳನ್ನು ಪಶುವಿನಂತೆ ಸತತವಾಗಿ ದುಡಿಸಿಕೊಳ್ಳಲಾಯಿತು.

ಈ ರೀತಿಯಾಗಿದ್ದ ಸಾಮಾಜಿಕ ಪರಿಸರ ಪರಿಸ್ಥಿತಿಯಿಂದ ಹೊರ ಬಂದಿರುವದು ಕಾಣಲು ಸಿಗುವ ೧೨ನೇ ಶತಮಾನದಲ್ಲಿ ಮಾತ್ರ ಅಲ್ಲಿಯವರೆಗೆ ಸ್ತ್ರೀಯರ ಕರ್ತವ್ಯಗಳ ಬಗ್ಗೆ ಅವರೇ ಕಾನೂನುಗಳನ್ನು ರಚಿಸಿ ಸ್ತ್ರೀ ಸ್ವಾತಂತ್ರವನ್ನು ಭದ್ರವಾಗಿ ತಿಜೋರಿಯಲ್ಲಿಟ್ಟು ಬಿಗಮುದ್ರೆ ಹಾಕಿದರು. ಈ ಹಿನ್ನೆಲೆಯಲ್ಲಿ ನೋಡಿದಾಗ ವಚನಕಾರರ ಆಲೋಚನೆ ಅತ್ಯಂತ ಆಧುನಿಕವೂ ದೂರ ದೃಷ್ಟಿಯದೂ ಆಗಿದೆ. ಸ್ತ್ರೀ ಮತ್ತು ಶೂದ್ರ ಇಬ್ಬರೂ ಬೌದ್ಧಿಕ ಸಮಾನರು ಇದು ನಮ್ಮ ಸಮಾಜದಿಂದ ನಿರ್ಣಯಿಸಲ್ಪಟ್ಟಿತು. ಶೂದ್ರ ಮತ್ತು ದಲಿತರ ಉತ್ಥಾನವನ್ನೆ ತನ್ನ ಗುರಿಯಾಗಿ ಎತ್ತಿಕೊಂಡ ವಚನಕಾರರ ದೃಷ್ಠಿ ಸ್ತ್ರೀಯರ ಕಡೆಗೂ ಹೊರಳಿದೆ. ಗಂಡು ಹೆಣ್ಣಿನ ಭೇದ

ಭೌತಿಕ ಚಿಹ್ನೆಗಳಲ್ಲಿ ಮಾತ್ರ ಆದರ ಸ್ವತಃ ಇಬ್ಬರು ಒಂದೇ ಬಗೆಯ ಸಾಮರ್ಥ್ಯವನ್ನು ಪಡೆದಿರುವರು. ಸಮಾಜದ ಉನ್ನತಿಯಾಗಬೇಕಾದರೆ ಅದರ ಅರ್ಧಭಾಗವಾದ ಸ್ತ್ರೀ ಸಮೂಹವನ್ನು ಹೊರಗಿಡುವುದು ವಿವೇಕವಲ್ಲ ವ್ಯವಹಾರಿಕವೂ ಅಲ್ಲ. ಇದಕ್ಕೆ ಅವರಿಗೆ ಹೊಳೆದ ಪರಿಹಾರ ತೀರ ಸರಳ ಹೆಣ್ಣನ್ನು ಗಂಡಿನಂತೆ ಕಾಣುವದಾಗಿತ್ತು ಶರಣರು ನಿರ್ಮಿಸಿದ ಅಂದಿನ ಹೊಸ ಪರಿಸರದ ಪ್ರಭಾವ ಪ್ರೇರಣೆ ಪಡೆದು ತಮಗೆ ಸಮಾಜವು ಹಾಕಿದ್ದ ಬಂಧನಗಳನ್ನೇಲ್ಲ ಮೀರಿ ಸ್ತ್ರೀಯರು ಧೈರ್ಯವಂತರಾಗಿ ಸ್ವಾತಂತ್ರರಾಗಿ ಅನುಭಾವಿಗಳಾಗಿ ತಮ್ಮ ಮನಸ್ಸಿನ ಭಾವನೆ ಚಿಂತನೆ ಸಂವೇದನೆಗಳನ್ನೆಲ್ಲ ವಚನಗಳ ಮೂಲಕ ಅಭಿವ್ಯಕ್ತ ಪಡಿಸಿದ್ದಾರೆ. ಹೀಗೆ ವಚನಗಳನ್ನು ರಚಿಸಿದ ವಚನಕಾರ್ತಿಯರು ನಮ್ಮಗೆ ೩೩ ಜನ ಕ್ಕಿಂತಲೂ ಹೆಚ್ಚಿನ ದೊರೆಯುತ್ತಾರೆ. ಇವರಲ್ಲಿ ಸಮಾಜದ ಅತ್ಯಂತ ಕೆಳವರ್ಗದ ಸ್ತ್ರೀಯರೂ ಕೂಡ ವಚನಗಳನ್ನು ರಚಿಸಿರುವುಮ ಗಮನಾರ್ಹ. ಇದು ವಚನಕಾರರು, ಶರಣರು ಹೆಣ್ಣಿಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹಿಡಿದ ಕನ್ನಡಿಯು ಆಗಿವೆ. ಇಲ್ಲಿ ವಚನಕಾರ್ತಿಯರು ಪುರುಷ ಪ್ರಧಾನ ವ್ಯವಸ್ಥೆಯ ನೆರಳಿನಿಂದ ಹೊರಬಂದು ತನ್ನದೆ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳಲು ಮಾಡಿದ ಪ್ರಯತ್ನಗಳಲ್ಲಿ ಆಕೆ ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದು ಬರವಣಿಗೆಯೇ ಅಕ್ಕಮಹಾದೇವಿ ಜೊತೆ ಅನೇಕ ವಚನಕಾರ್ತಿಯರು ೧೨ ನೇ ಶತಮಾನದಲ್ಲಿ ಬರವಣಿಗೆಯನ್ನೆ ತನ್ನ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡು ಸಾವಿರಾರು ವಚನಗಳನ್ನು ಬರೆದು ಆ ಮೂಲಕ ಹೆಣ್ಣಿನ ತುಮಲು ಹಾಗೂ ಒಳಹತೋಟಿಗಳನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ.

ಉದ್ದೇಶ :

ನಾನು "ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ' ಎಂಬ ಸಂಪ್ರಬಂಧದಲ್ಲಿ ಮಹಿಳಾ ವಚನಕಾರ್ತಿಯರ ಸಮಗ್ರ ವಚನಗಳನ್ನು ತೆಗೆದುಕೊಂಡಿದ್ದೇನೆ. ಶರಣೆಯರ ವಚನಗಳಲ್ಲಿ ಸ್ತ್ರೀಪರ ಸಂವೇದನೆಗಳು ಇದೆಯೇ ಇಲ್ಲವೋ ಎಂಬುದನ್ನು ಶೋಧ ಮಾಡುವ ಉದ್ದೇಶ ಹೊಂದಿದ್ದೇನೆ. ಅದಕ್ಕಾಗಿ ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿರುವ ತೃತೀಯ ಆವೃತಿ (ಬೈಬಲ್ ಮುದ್ರಣದ ಮಾದರಿಯು) ಪುಸ್ತಕವಾದ ಬಸವಯುಗದ ವಚನ ಮಹಾಸಂಪುಟ-೧ ರಲ್ಲಿ ಪ್ರಕಟವಾದ ಶಿವಶರಣೆಯರ ವಚನ ಸಂಪುಟ-೫ ಡಾ. ವೀರಣ್ಣ ರಾಜೂರ ಸಂಪಾದಿಸಿದ ಭಾಗವನ್ನು ನನ್ನ ಅಧ್ಯಯನದ ಆಕರ ಗ್ರಂಥವಾಗಿಸಿಕೊಂಡಿದ್ದೇನೆ. ಸ್ತ್ರೀವಾದಿ ಚಿಂತನೆಯ ಸೈದ್ಧಾಂತಿಕ ಹಿನ್ನೆಲೆಯ ಆಲೋಚನೆಗಳಿಗೆ ವಚನಕಾರ್ತಿಯರ ವಚನಗಳನ್ನು ಅನುಬಂಧದ ಆಧಾರದ ಮೇಲೆ ಅಧ್ಯಯನಕ್ಕೆ ತೊಡಗಿಸಿದ್ದೇನೆ.

ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ ಎಂಬ ಅಧ್ಯಯನದಲ್ಲಿ ವಚನಕಾರ್ತಿಯರ ಸಂವೇದನೆ ಹೇಗಿವೆ ಎನ್ನುವುದನ್ನು ಗುರುತಿಸುವ ಉದ್ದೇಶದಿಂದ ನಾನು ಈ ಅಧ್ಯಯನ ಮಾಡಿಕೊಂಡಿದ್ದೇನೆ ಇದರಲ್ಲಿ ನಾನು ವಚನಗಳಲ್ಲಿ ಸ್ತ್ರೀ ಸಂವೇದನೆಯ ಶೀಷಿಕೆ ಉದ್ದೇಶದಂತೆ ವಿಭಾಗಗಳನ್ನು ಮಾಡಿಕೊಂಡಿದ್ದೇನೆ. ಅವುಗಳೆಂದರೆ;

೧. ಹೆಣ್ತುತನದ ಸೀಮೆಯನ್ನು ದಾಟಿದ ವಚನಕಾರ್ತಿಯರು

೨. ವ್ರತನಿಯಮ ಆರಾಧನೆಗಳನ್ನು ಸಂಸ್ಕಾರ ನೀಡಿದ ವಚನಕಾರ್ತಿಯರು

೩. ವಿಚಾರ ಪತ್ನಿಯರು

೪. ಶರಣೆಯರ ವಚನಗಳು ಮತ್ತು ಡಾಂಭಿಕತೆಯ ನಿರಾಕರಣೆ.

೫. ಜಾತಿ ಸೂಚಕಗಳನ್ನು ಜಾಲಾಡಿದ ವಚನಕಾರ್ತಿಯರು

ಎಂದು ಅಧ್ಯಯನಗಳನ್ನು ವಿಂಗಡಿಸಿಕೊಂಡಿದ್ದೇನೆ. ಅದರ ಅಡಿಯಲ್ಲಿ ವಚನಗಳನ್ನು ಆಯ್ದುಕೊಂಡು ಈ ಅಧ್ಯಯಗಳಿಗ ತಕ್ಕಂತೆ ಹೊಂದಿಸಿಕೊಂಡು ಸ್ತ್ರೀ ಸಂವೇದನೆಗಳಿಗೆ ಹೇಗೆ ಸ್ಪಂದಿಸುತ್ತವೆ ಮತ್ತು ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದನ್ನು ನನ್ನ ವಿಚಾರ ವ್ಯಾಪ್ತಿಯಲ್ಲಿ ಶೋಧಿಸುವ ಪ್ರಯತ್ನ ಉದ್ದೇಶವನ್ನು ಹೊಂದಿದ್ದೇನೆ.

ವ್ಯಾಪ್ತಿ :

ನಾನು ಈ ಅಧ್ಯಯನದ ವ್ಯಾಪ್ತಿಯೆನೆಂದರೆ ಸಿದ್ಧವಾದ ಸಾಹಿತ್ಯವನ್ನು ಆರಿಸಿಕೊಂಡು ಸ್ತ್ರೀವಾದಿ ಹಿನ್ನೆಲೆಯಿಂದ ಅಭ್ಯಾಸ ಮಾಡುವುದು ಅಧ್ಯಯನ ವಿಧಾನವಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಬಸವಯುಗದ ವಚನ ಮಹಾಸಂಪುಟ-೧ ರಲ್ಲಿ ಶಿವಶರಣೆಯರ ವಚನ ಸಂಪುಟ-೫ ಆಕರ ಗ್ರಂಥವಾಗಿಸಿಕೊಂಡು ವಚನಗಳ ಆಧಾರದಲ್ಲಿ ಸ್ತ್ರೀಸಂವೇದನೆಯನ್ನು ಶೋಧಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಸ್ತ್ರೀ ಸಂವೇದನೆಯ ಸಿದ್ಧಾಂತವನ್ನು ರೂಪಿಸಿಕೊಳ್ಳುವುದಕ್ಕೆ ಸ್ತ್ರೀ ವಾದಿ ಹಿನ್ನೆಲೆಯ ಸೈದ್ಧಾಂತಿಕ ಕೃತಿಯನ್ನು ಆಧರಿಸಲಾಗಿದೆ. ಈ ಉದ್ದೇಶ ಸಾಧನೆಗಾಗಿ ನಾನು ಈ ಕೆಳಕಂಡ ಅಧ್ಯಯನಗಳನ್ನು ವಿಂಗಡಿಸಿಕೊಂಡಿದ್ದೇನೆ.

೧. ಹೆಣ್ತುತನದ ಸೀಮೆಯನ್ನು ದಾಟಿದ ವಚನಕಾರ್ತಿಯರು

೨. ವ್ರತನಿಯಮ ಆರಾಧನೆಗಳನ್ನು ಸಂಸ್ಕಾರ ನೀಡಿದ ವಚನಕಾರ್ತಿಯರು

೩. ವಿಚಾರ ಪತ್ನಿಯರು

೪. ಶರಣೆಯರ ವಚನಗಳು ಮತ್ತು ಡಾಂಭಿಕತೆಯ ನಿರಾಕರಣೆ.

೫. ಜಾತಿ ಸೂಚಕಗಳನ್ನು ಜಾಲಾಡಿದ ವಚನಕಾರ್ತಿಯರು.

ಅದರಲ್ಲಿ ವಚನಗಳನ್ನು ಮೇಲ್ವರ್ಗದ ವಚನಕಾರ್ತಿಯರು ಮತ್ತು ಕೆಳವರ್ಗದ ವಚನಕಾರ್ತಿಯರ ಈ ಮೇಲಿನ ಅಧ್ಯಾಯಗಳ ವ್ಯಾಪ್ತಿಯೊಳಗೆ ತೊಡಗಿಸುವ ಪ್ರಯತ್ನ ಮಾಡಿದ್ದೇನೆ. ಹೀಗೆ ನಾನು ಸಂಶೋಧನೆಗೆ ಕಂಡುಕೊಂಡ ಅಧ್ಯಯನ ವಿಷಯ ವ್ಯಾಪ್ತಿಗೆ ಸೀಮಿತಗೊಳಿಸಿಕೊಂಡಿದ್ದೇನೆ. ಈ ವಿಷಯವನ್ನು ಇನ್ನಷ್ಟು ವಿಭಿನ್ನವಾಗಿ ಆಲೋಚಿಸುವ ಮತ್ತು ವಿಸ್ತಾರಗೊಳಿಸುವ ಅಂಶಗಳನ್ನು ಒಳಗೊಂಡಿವೆ ಎಂದು ಹೇಳಲು ಇಚ್ಛಿಸುತ್ತೇನೆ.

ಅಧ್ಯಾಯ--೨

ವೇದನೆ ಮತ್ತು ಸ್ತ್ರೀ ಸಂವೇದನೆ

ವೇದನೆ:

ಮಾನವ ಸಮಾಜ ಜೀವಿ. ಸಮಾಜವನ್ನು ಬಿಟ್ಟು ಬದುಕಲಾರ. ಏನೇ ಸಮಸ್ಯೆ ಕಷ್ಟಗಳು ಬಂದರೂ ಅವನು ಈ ಸಮಾಜದಲ್ಲಿ ಇದ್ದುಕೊಂಡೇ ಬಗೆಹರಿಸಿಕೊಳ್ಳಬೇಕು ಮತ್ತು ಜಯಿಸಬೇಕು. ಸಮಸ್ಯೆ ಎಂದರೆ ಅದಕ್ಕೆ ಪರಿಹಾರವು ಇರುತ್ತದೆ. ಸಮಸ್ಯೆ ಎದುರಾಗಿನಿಂದ ಪರಿಹಾರ ಕಂಡುಕೊಳ್ಳುವವರೆಗಿನ ಮಾನವನ ಮನಸ್ಸಿನ ಸ್ಥಿತಿ, ನೋವು, ಸಂಕಟ, ಯಾತನೆ ಮುಂತಾದ ಭಾವನೆಗಳ ವ್ಯಕ್ತಿಗೊಳ್ಳುತ್ತಿರುತ್ತವೆ. ಅದನ್ನೇ ವೇದನೆ ಎಂದು ಕರೆಯಲಾಗುತ್ತದೆ.

ವೇದನೆ ಎಂದರೆ ಯಾವುದೇ ಅಹಿತಕರ ಅನಿಸಿಕೆ, ನೋವು, ಪೀಡೆ, ಚಿಂತೆ, ಸಂಕಟ ಬೇನೆ ಮುಂತಾದ ಸಾಮಾನ್ಯ ಅರ್ಥಗಳನ್ನು ಹೊಂದಿದೆ. ವೇದನೆಯು ಮನುಷ್ಯನ ಭಾವನಾತ್ಮಕ ವಿದ್ಯಾಮಾನಗಳ ನಕಾರಾತ್ಮಕ ಮೌಲ್ಯದ ಮೂಲ ವಸ್ತುವಾಗಿದೆ. ವೇದನೆಯು ಹಲವು ವೇಳೆ ದೈಹಿಕ ವೇದನೆ ಮತ್ತು ಮಾನಸಿಕ ವೇದನೆ ಎಂದು ವರ್ಗೀಕರಿಸಲಾಗುತ್ತದೆ. ದೈಹಿಕ ವೇದನೆ ಸಂಕುಚಿತ ಅರ್ಥವನ್ನು ಮಾನಸಿಕ ವೇದನೆಯು ವಿಶಾಲ ಅರ್ಥವನ್ನು ಒಳಗೊಂಡಿದೆ. ಹಲವು ವೇಳೆ ನಿರ್ದಿಷ್ಟ ಪ್ರಕಾರಗಳ ನೋವು ಅಥವಾ ವೇದನೆಯನ್ನು ಸೂಚಿಸಲು ಬಳಸಲಾಗುತ್ತದೆ. ಉದಾಃ ಪ್ರಸವ ವೇದನೆ. ಮಾನಸಿಕ ವೇದನೆ... ಮುಂತಾದವು.

ಇಂತಹ ಅನೇಕ ವೇದನೆಗಳನ್ನು ನಮ್ಮ ಪುರುಷಕೇಂದ್ರಿತ ಸಮಾಜದಲ್ಲಿ ಸ್ತ್ರೀಯು ತಲತಲಾಂತರದಿಂದ ಅನುಭವಿಸಿಕೊಂಡು ಬಂದಿದ್ದಾಳೆ, ನಮ್ಮ ಸಮಾಜದಲ್ಲಿ ಹೆಣ್ಣನ್ನು ಸಾಮಾಜಿಕವಾಗಿ ಅನೇಕ ರೀತಿಯಿಂದ ಕಟ್ಟಳೆಗೆ ಒಳಪಡಿಸಲಾಗಿದೆ. ಹೆಣ್ಣೆಂದರೆ ಅಧೀನವಾಗಿರುವವಳು, ಕೋಮಲತೆ, ಮೃದುತ್ವ, ಅಬಲೆ ಮುಂತಾದ ಆರೋಪಗಳೊಂದಿಗೆ ಅವಳನ್ನು ನಾಲ್ಕು ಗೋಡೆಗಳ ಮಧ್ಯೆ ಜೀವಿಸುವ ವಾತಾವರಣ ನಿರ್ಮಾಣಗೊಂಡಿತು. ಅವಳು ನಾಲ್ಕು ಗೋಡೆಗಳ ಮಧ್ಯೆ ಜೀವಿಸುತ್ತಾ ತನ್ನ ಭಾವನೆಗೆ ಹೊಸ ಆಲೋಚನೆಗೆ ಅವಕಾಶಗಳಿಲ್ಲದಂತೆ ಕೇವಲ ಹೆರುವ ಯಂತ್ರವಾದಳು. ಮತ್ತು ಅಡುಗೆ ಮನೆಗೆ, ಮಕ್ಕಳ ಪಾಲನೆಗೆ ಮಾತ್ರ ಸೀಮಿತವಾದಳು, ಅಷ್ಟೇ ಅವಳ ಪ್ರಪಂಚವಾಯಿತು. ಸಮಾಜದಲ್ಲಿ ಸ್ವತಂತ್ರ್ಯವಾಗಿ ಓಡಾಡುವ ಮಾತನಾಡುವ ಅವಕಾಶವೇ ತಪ್ಪಿ ಹೋಯಿತು. ಕೆಲವೊಮ್ಮೆ ಮನೆಯಲ್ಲಿಯೇ ಎಲ್ಲರೂ ಕುಳಿತ ಸ್ಥಳದಲ್ಲಿ ಕುಳಿತುಕೊಳ್ಳುತ್ತಿರಲ್ಲಿಲ್ಲ. ಗಂಡನ ಹೊರತು ಬೇರೆ ಪರ ಪುರುಷನೊಂದಿಗೆ ಮಾತನಾಡುಡುವುದು ಅಕ್ಷಮ್ಯ ಅಪರಾಧವಾಗಿತ್ತು. ಹೊಸ್ತಿಲ ಹೊರಗೆ ಒಂಟಿಯಾಗಿ ಕಾಲು ಇಟ್ಟರೆ ಗಂಡು ಬೀರಿ ಎನ್ನುವ ಬಿರುದು ಬರುತ್ತಿತ್ತು. ಇಂತಹ ಅನೇಕ ವೇದನೆಗಳನ್ನು ಸ್ತ್ರೀಯು ಯುಗಯಗಾಂತರಗಳಿಂದ ಸಹಿಸಿಕೊಂಡು ಬಂದಿದ್ದಾಳೆ.

ಮಹಿಳೆಯೆಂದರೆ ಅಳುಮುಂಜಿ ಎಂದು ಗುರುತಿಸುವ ಸಮಾಜ. ಅದಕ್ಕಿರುವ ಕಾರಣ ಅರಿಯುವ ಪ್ರಯತ್ನ ಮಾಡುವದಿಲ್ಲ. ಅದಕ್ಕಾಗಿ ನಮ್ಮ ದೇಶದಲ್ಲಿರುವ ಎಲ್ಲಾ ನದಿಗಳಿಗೂ ಮಹಿಳೆಯರ ಹೆಸರು ಇರುವುದು. ನೀರಿಗೂ–ಹೆಣ್ಣಿಗೂ ಅತಿ ಹತ್ತಿರ ಸಂಬಂಧವಿದೆ. ಏಕೆಂದರೆ ನದಿಯ ನೀರು ಹೇಗೆ

ಬತ್ತುವದಿಲ್ಲವೋ ಹಾಗೆ ಹೆಣ್ಣಿನ ಕಣ್ಣಲ್ಲಿರುವ ನೀರು ಬತ್ತುವುದಿಲ್ಲ. ಹಾಗಾಗಿದೆ ಹೆಣ್ಣು ಮಕ್ಕಳ ಪರಿಸ್ಥಿತಿ ಅದಕ್ಕೆ ಹಿಂದಿಯಲ್ಲಿ ಒಂದು ಮಾತು ಹೀಗಿದೆ :

"ಭಾರತ ಕೀ ನಾರಿ ಕೀ ದುಃಖದ ಕಹಾನಿ

ಆಂಖೋಮೇ ಆಂಸೂ ಆಚಲ ಮೇ ಪಾನಿ ಎಂದು

ಹೇಳುವಂತೆ ನಮ್ಮ ಭಾರತೀಯ ಮಹಿಳೆಯರ ಕಣ್ಣಿನಲ್ಲಿ ಸದಾ ನೀರು ಹರಿಯುತ್ತಲೆ ಇರುತ್ತದೆ. ನಮ್ಮ ಮಹಿಳೆಯರು ಎಷ್ಟು ಗಟ್ಟಿ ಗಿತ್ತಿಯರೋ ಅಷ್ಟೆ ಮೃದು ಮನಸ್ಸಿನವರು. ಭಾವನಾ ಜೀವಿಗಳು ಅವರ ಯಾವುದೇ ಆಲೋಚನೆ, ಕೆಲಸ ಏನೇ ಮಾಡಿದರೂ. ಹೃದಯದಿಂದ ಮಾಡುತ್ತಾರೆ. ಅದರ ಲಾಭ-ನಷ್ಟ ಒಳಿತು-ಕೆಡಕುಗಳು ನೋಡುವದಿಲ್ಲ. ಒಬ್ಬ ವ್ಯಕ್ತಿ ಕಷ್ಟದಲ್ಲಿ ಇದ್ದಾನೆ ಎಂದು ಸುಳ್ಳು ಹೇಳಿದರು. ಅವರು ನಂಬಿ ಬಿಡುತ್ತಾರೆ. ಹಾಗಾಗಿ ಅತಿಹೆಚ್ಚು ಮೋಸಹೋಗುವರು ಹೆಣ್ಣು ಮಕ್ಕಳೆ, ಮಹಿಳೆಯರ ನಂಬಿಸಿ ತಮ್ಮ ಮನವಲಿಸಿಕೊಳ್ಳುವದು ತುಂಬಾ ಸುಲಭ. ಆದ್ದರಿಂದಲೇ ಅವಳು ಬೇಗ ಕಷ್ಟಕ್ಕೆ ದುಃಖಕ್ಕೆ ಧುಮುಕುತ್ತಾಳೆ, ಮತ್ತು ಆ ದುಃಖವನ್ನೇ ತುಂಬಾ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಾಳೆ ಇದು ಅವಳ ದೌರ್ಬಲ್ಯವು ಹೌದ. ಹೆಣ್ಣು ಎಲ್ಲರಿಗೂ ತನ್ನ ಕೈಲಾದ ಸಹಾಯ ಮಾಡುತ್ತಾಳೆ. ಹೀಗೆ ಸಹಾಯ ಮಾಡಲು ಹೋಗಿಯೇ ಮೋಸಗಾರರ ಜಾಲದಲ್ಲಿ ಸಿಕ್ಕು ನಲುಗಿ ಹೋಗುತ್ತಾಳೆ. ಹಾಗಾಗಿ ಇವರ ಕಣ್ಣಲ್ಲಿ ಸದಾ ನೀರು ಮಡಿಲಲ್ಲಿ ನೀರು ತುಂಬೀ ಕೊಂಡಿರುತ್ತದೆ. ಹೆಣ್ಣು ಕಣ್ಣೀರು ಹಾಕಲು ಒಂದೇ ಕಾರಣವಿಲ್ಲ. ಇಂತಹ ಅನೇಕ ಕಾರಣಗಳು ನಮಗೆ ದೊರೆಯುತ್ತವೆ.

ನಮ್ಮ ದೇಶದಲ್ಲಿ ಹೆಣ್ಣೆಂದರೆ ತುಂಬಾ ಗೌರವವಿದೆ, ಅದಕ್ಕಾಗಿ ಸೃಷ್ಠಿಯ ಮೂಲ ಎನ್ನಲಾಗುತ್ತದೆ. ಅದಕ್ಕಾಗಿ ಅವಳು ಸಂತಾನೋತ್ಪತ್ತಿಯ ಯಂತ್ರವಾಗಿದ್ದಾಳೆ, ಹೆಣ್ಣು ಸಹಾನಾಮೂರ್ತಿ, ಕ್ಷಮಯಾ ಧರಿತ್ರೆ ಹೀಗೆ ಅವಳ ಗುಣಗಳೇ ಅವಳಿಗೆ ಮುಳ್ಳುವಾಗಿದೆ. ಗಂಡು ಮಾಡುವ ಯಾವುದೇ ರೀತಿಯ ಶೋಷಣೆಯನ್ನು ಅವಳು ಕ್ಷಮಿಸಬೇಕು ಮತ್ತು ಸಹಿಸಿಕೊಳ್ಳಬೇಕು. ಅವಳು ಎಷ್ಟೇ ಕ್ಷಮೆ ನೀಡಿದರು ಅವನು ಅವನ ತಪ್ಪು ಅರಿತು ತಿದ್ದಿಕೊಳ್ಳವದು ಕಡಿಮೆ. ಅವಳಿಗೂ ಮನಸ್ಸಿದೆ, ಭಾವನೆಗಳಿವೆ, ಅವಳಿಗೂ ನೋವು ಆಗುತ್ತದೆ ಎಂದು ತಿಳಿದು ನಡೆದು ಕೊಳ್ಳುವ ಗುಣ ಪುರಷನಲ್ಲಿ ಕಾಣುವದಿಲ್ಲ.

ಪುರುಷ ಪ್ರಧಾನ ಸಮಾಜಕ್ಕೆ "ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ" ಎಂದು ನೋವು ಪಡುವ ನಮ್ಮ ಸಮಾಜ ಹೆಣ್ಣನ್ನು ಎಷ್ಟೇ ಕೀಳು ದೃಷ್ಟಿಯಿಂದ, ಭಾವನೆಯಿಂದ ನೋಡುತ್ತದೆ ಎನ್ನುವದಕ್ಕೆ ಸಾಕ್ಷಿಯಾಗಿದೆ. ಅದಕ್ಕಾಗಿ ಹೆಣ್ಣು ಹುಟ್ಟಿದ್ದರೆ ನೋವುಗಳು ಹೆಚ್ಚಾಗುತ್ತವೆ. ಎನ್ನುವುದು ಗಂಡಿನ ಕಲ್ಪನೆ. ಅವಳಿಗೆ ಶಾಲೆಗೆ ಕಳುಹಿಸಿ ವಿದ್ಯಾಭ್ಯಾಸ ಕೊಡಿಸಿ ಮದುವೆಮಾಡಲು ಹಣವೆಲ್ಲ ವ್ಯರ್ಥ ಎನ್ನುವುದು ಪುರುಷನ ಲೆಕ್ಕಾಚಾರ. ಅದಕ್ಕಾಗಿ ಇಷ್ಟೆಲ್ಲಾ ಸಹ ಖರ್ಚು ಮಾಡಿ ಅವಳಿಗೆ ಸಾಕುವ ಜಂಜಾಟಕ್ಕೆ ಹೋಗಬಾರದು ಎನ್ನುವ ಕಾರಣಕ್ಕಾಗಿಯೇ ಹೆಣ್ಣನ್ನು ಗರ್ಭದಲ್ಲಿ ಚಿವುಟಿ ಹಾಕುವ ಎಲ್ಲಾ ಸರ್ವವಿಧವಾದ ವಿಧಾನಗಳು ಕಂಡುಹಿಡಿದಿದ್ದಾರೆ. ಈ ಪುರುಷ ಸಮಾಜಕ್ಕೆ ಹೆಣ್ಣು ತನ್ನ ಎಲ್ಲಾ ಕಾರ್ಯಕ್ಕೂ ಬೇಕು. ಪುರುಷನ ಬಾಳಲ್ಲಿ ಹೆಣ್ಣು ಇಲ್ಲದಿದ್ದರೇ ಅವನ ಬದುಕು ನಡೆಸಲು ಸಾಧ್ಯವಾಗುವುದಿಲ್ಲ. ಇದನ್ನು ಅರಿತುಕೊಂಡು ಹೆಣ್ಣು ಹುಟ್ಟುದರೆ ಸಂತೋಷ ಪಡದ ಸ್ವಾರ್ಥ ಬುದ್ಧಿ ಬಂದಿದೆ.

ಪುರುಷನಿಗೆ ಹೆಣ್ಣು ತಾಯಿಯಾಗಿ ಬೇಕು.ಹೆಣ್ಣು ಪತ್ನಿಯಾಗಿ ಬೇಕು.

ಹೆಣ್ಣು ಸಹೋದರಿಯಾಗಿ ಬೇಕು. ಆದ್ರೆ ಹೆಣ್ಣು ಮಗಳಾಗಿ ಏಕೆ ಬೇಡ?

ಎನ್ನುವ ಪ್ರಶ್ನೆಗೆ ಉತ್ತರ ಹುಡುಕುವುದು ತುಂಬಾ ಕಷ್ಟವಾಗಿದೆ.

ಈ ಪ್ರಶ್ನೆಯೇ ನಮ್ಮ ೧೬ನೇ ಶತಮಾನದ ಸಂಚಿ ಹೊನ್ನಮ್ಮಳು ಹೇಳಿದ್ದಾಳೆ. ಅದು ಹೀಗಿದೆ.

ಹೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ

ಹೆಣ್ಣಲ್ಲವೆ ನಮ್ಮನ್ನೆಲ್ಲ ಪೊರೆದವಳು

ಹೆಣ್ಣು ಹೆಣ್ಣೆಂದೇತಕೆ ಬೀಳುಗರೆಯುವಿರಿ

ಕಣ್ಣು ಕಾಣದ ಗಾವಿಲರೇ

ಕುವರನಾದೊಡೆ ಬಂದ ಗುಣವೇನದರಿಂದ

ಕುವರಿಯಾದೊಡೆ ಬಂದ ಕುಂದೇನು?

ಆ ಕಾಲದಿಂದಲೂ ಇಲ್ಲಿಯವರೆಗೂ ಈ ಪ್ರಶ್ನೆ ಸಮಾಜಕ್ಕೆ ಹಾಗೇ ಕಾಡುತ್ತಲೇ ಬಂದಿದೆ.

ಹೆಣ್ಣು ಹೆತ್ತರೆ ಜವಾಬ್ದಾರಿ ಜಾಸ್ತಿ ಎಂದು ಮೇಲ್ನೋಟಕ್ಕೆ ಕಂಡರೂ ಸೂಕ್ಷ್ಮವಾಗಿ ನೋಡಿದಾಗ ಆಳವಾಗಿ ಗಮನಿಸಿದಾಗ ಹೆಚ್ಚು ಜವಾಬ್ದಾರಿಗಳನ್ನು ಹೊರುವವಳು ಹೆಣ್ಣು. ಅಂತಕರಣವಿರುವದು ಹೆಣ್ಣಿನಲ್ಲಿ ಇದು ಏನೇ ಇದ್ದರೂ ಹೆಣ್ಣೆಂದರೆ ಪುರುಷರಿಗೆ ಅಭದ್ರತೆ ಕಾಡುತ್ತದೆ.

ಹೆಣ್ಣು ಹುಟ್ಟತ್ತಿರುವಾಗಲೇ ಬೇಡವಾದ ಸಮಾಜಕ್ಕೆ ಹುಟ್ಟಿದ ಮೇಲೆ ಬೇಕಾಗುವಳೇ? ಬೆಳೆಯುವಾಗಲು ಗಂಡಿಗೆ ಹೆಚ್ಚು ಹೆಣ್ಣಿಗೆ ಕಡಿಮೆ ಹೀಗೆ ಪ್ರತಿಯೊಂದರಲ್ಲೂ ಮಾಡಿಕೊಂಡು ಬರುತ್ತದೆ. ಆಹಾರ, ಬಟ್ಟೆ, ವಸ್ತು ಶಿಕ್ಷಣ, ಹೀಗೆ ಯಾವುದನ್ನು ಕೊಟ್ಟರು ಹೆಣ್ಣಿಗೆ ಕಡಿಮೆಯಾಗುತ್ತದೆ. ಅದು ಬಾಹ್ಯ ಸೌಕರ್ಯವಾಗಿರಬಹುದು. ಆಂತರಿಕ ಪ್ರೀತಿ ವಿಶ್ವಾಸವೇ ಆಗಿರಬಹುದು. ಗಂಡಿಗೆ ಸಿಗುವಷ್ಟು ಸ್ವಾತಂತ್ರ್ಯ ಸಂತೋಷವಷ್ಟೆ. ಪ್ರೀತಿ ಹೆಣ್ಣಿಗೆ ಸಿಗುವುದಿಲ್ಲ. ಸ್ವಾತಂತ್ರ್ಯ ಈ ಪದವಂತೂ ಅವಳಿಗೆ ಬೆಳೆದಂತೆ ಮಾಯವಾಗುತ್ತಾ ಹೋಗುತ್ತದೆ. ಹೀಗೆ ದಿನೇ ದಿನೇ ಶೋಷಣೆಗೆ ಗುರಿಯಾಗುತ್ತಾನೆ ಹೋಗುತ್ತಾಳೆ ಅದಕ್ಕಾಗಿಯೇ ಹೆಣ್ಣಿನ ಶೋಷಣೆ ಎಲ್ಲಿಂದ ಎಲ್ಲಿಯವರೆಗೆ ನಡೆಯುತ್ತದೆ ಎನ್ನುವದಕ್ಕೆ ಇಂಗ್ಲೀಷನಲ್ಲಿ ಒಂದು ವಾಕ್ಯ ಹೀಗಿದೆ.

From womb to tomb or

From Cradle to grave

Women have been facing various

Problems.

ಹೀಗೆ ಹೆಣ್ಣನ್ನು ತಾರತಮ್ಯ ಭಾವದಿಂದ ನೋಡಿದರೇ ಶೋಷಣೆಗೆ ಗುರಿ ಮಾಡುತ್ತಿದ್ದರೆ ಹೇಗೆ ತಾನೇ ಹೆಣ್ಣು ಗರ್ಭದಿಂದ ಗೋರಿಯವರೆಗೆ ಸಮಸ್ಯೆಗಳು ಎದುರಿಸದೇ ಬದುಕಲು ಅವಳಿಗೆ ಸಾಧ್ಯವಾಗುತ್ತದೆ.?

ಅವಳು ಒಂದು ಸಮಸ್ಯೆ ಎದುರಿಸುತ್ತಿದ್ದಾಳೆ ಎಂದರೆ ಅದಕ್ಕೆ ಸಮಾಜವೇ ಕಾರಣ. ಏಕೆಂದರೆ ಅವಳನ್ನು ಬೆಳೆಸುವುದು ಎಷ್ಟೇ ಸಮಸ್ಯೆ ಬಂದರು ಬಗೆಹರಿಸುವ ಮನೋಶಕ್ತಿ ತುಂಬುವ ಮೂಲಕ ಬೆಳೆಸುವದಿಲ್ಲ. ಏಕೆಂದರೆ ಅವಳು ದುರ್ಬಲಳು, ಅಶಕ್ತಳು, ಎಂದು ಮೊದಲಿನಿಂದಲು ಅವಳ ಮನದಲ್ಲಿ ಬೀಜ ಬಿತ್ತಿರುವುದು ಹಾಗಾಗಿಯೇ ಅವಳು ಅನೇಕ ನೋವುಗಳನ್ನು ಸಂಕಷ್ಟಗಳು ಅಳುವಿನೊಂದಿಗೆ ಎದುರಿಸುತ್ತಾಳೆ.

ಮೂಟೆ ಮೂಟೆಗಟ್ಟಲೆ ಅವಳಿಗೆ ನಿರ್ಬಂಧನೆಗಳು ಇವೆ. ಕಷ್ಟ ಬಂದರೆ ಸಹಿಸಿಕೊಳ್ಳಬೇಕೆಂದು ಹೆಣ್ಣಿಗೆ ಕಲಿಸಲಾಗುತ್ತದೆಯೇ ಹೊರತು ಅದನ್ನು ಎಮರಿಸುವ ಛಲ ಅವಳಲ್ಲಿ ಕುಟುಂಬವಾಗಲಿ ಸಮಾಜವಾಗಲಿ ತುಂಬುವದಿಲ್ಲ ಗಂಡನ ಶೋಷಣೆ, ಗಂಡನ ಮನೆಯವರ ಶೋಷಣೆ ಕಿರುಕುಳಗಳು ತವರುಮನೆಯ ಮರ್ಯಾದೆ, ಹೀಗೆ ಅನೇಕ ನಿಯಮದೊಂದಿಗೆ ಪೆಣ್ಣ ಮಾಡನಾಡಲು ಅವಕಾಶವಿಲ್ಲದಂತೆ ಭದ್ರಬೀಗ ಜಡಿಯಲಾಗುತ್ತದೆ. ಆಡಿದರೆ ಗಂಡು ಬೀರಿ, ಜಗಳಗಂಟಿ, ಎಂಬ ಮುಂತಾದ ಬಿರುದುಗಳು ಅವಳ ಹೆಗಲೇರುತ್ತವೆ. ಹಾಗಾಗಿಯೇ ಹೆಣ್ಣು ಸಮಾಜದಲ್ಲಿ ಅನೇಕ ರೀತಿಯ ವೇದನೆಗಳು ಅನುಭವಿಸುತ್ತಾಳೆ ಅದರಲ್ಲೂ ಮಾನಸಿಕ ವೇದನೆಗಳು ಅವಳಿಗೆ ಅತಿಯಾಗಿರುತ್ತದೆ.

ಸಂವೇ‌.ನೆ

ಸ್ತ್ರೀಯು ಅನೇಕ ಯುಗಗಳಿಂದ ಅನುಭವಿಸಿಕೊಂಡು ಬಂದ ನೋವುಗಳನನ್ನು ಅವಳು ತನ್ನ ಅನುಭವಗಳೊಂದಿಗೆ ಅಭಿವ್ಯಕ್ತಿಸುವ ರೀತಿಯನ್ನು ಸಂವೇದನೆ ಎನ್ನುಲಾಗುತ್ತದೆ. ಪುರುಷ ಕೇಂದ್ರಿತ ಸಮಾಜದಲ್ಲಿ ಅವಳು ಅನೇಕ ಯಾತನೆ, ನೋವು, ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಕಾಲುತೋಯದಂತೆ ಸಾಗರ ದಾಟ ಬಹುದಂತೆ ಆದರೆ ಕಣ್ಣೀರು ಹೊರ ಬರದೇ ಜೀವನದ ಪಯಣ ಮುಗಿಸಲು ಸಾಧ್ಯವಿಲ್ಲ. ಎನ್ನುವ ಒಂದು ಸಂದೇಶವಿದೆ. ಅದರಂತೆ ಒಂದು ಹೆಣ್ಣು ಜೀವ ಯಾವುದೇ ನೋವು ಸಂಕಟಗಳು ಯಾತನೆ. ಕೊಂಕುನುಡಿ ಅವಮಾನಗಳಿಗೆ ಸಿಲುಕದೇ ಜೀವನದ ಪಯಣ ಮುಗಿಸಲು ಸಾಧ್ಯವಿಲ್ಲ. ಏಕೆಂದರೆ ಹೆಣ್ಣಿಗೆ ಇರುವಷ್ಟು ಪರೀಕ್ಷೆಗಳು ಸಮಾಜದಲ್ಲಿ ಗಂಡಿಗೆ ಇಲ್ಲ. ಏಕೆಂದರೆ ಅವಳು ಸಮರ್ಥಳಿದ್ದರೂ ಪರಾವಲಂಬಿ ಜೀವಿಯಾಗಿದ್ದಾಳೆ, ಗಂಡಿನ ಆಸರೆಯಲ್ಲಿಯೇ ನೆರಳಿನಲ್ಲಿಯೇ ಬದುಕು

ಸವಿಸಬೇಕಾಗಿದೆ. ಒಂಟಿಯಾಗಿ ಸಮಾಜ ಅವಳನ್ನು ಬದುಕಲು ಬಿಡುವುದಿಲ್ಲ. ಬಿಟ್ಟರುಓರೆಗಣ್ಣಿನ ನೋಟಗಳು ಅವರ ಮೇಲೆ ನೆಟ್ಟಿರುತ್ತವೆ. ಇಂತಹ ಅನೇಕ ತಮಗಾದ ಅನುಭವಗಳು ವರ್ಣಿಸಿ

ಹೇಳುವದನೇ ಸಂವೇದನೆ ಎನಿಸಿಕೊಳ್ಳುತ್ತವೆ. ನಮ್ಮಲ್ಲಿ ಇಂತಹ ಅನೇಕ ಸಂವೇದನೆಗಳು ಹುಟ್ಟಿಕೊಂಡಿವೆ. ಉದಾಹರಣೆಗೆ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮುಂತಾದವುಗಳು ಅದರಲ್ಲಿ ಸ್ತ್ರೀ ಸಂವೇದನೆಯು ಒಂದು.

ಅಧ್ಯಾಯ-೩

ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ

೩.೧. ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ

ಪುರುಷ ಪ್ರಧಾನ ಸಮಾಜವಲ್ಲಿ ಸ್ತ್ರೀ ಪುರುಷರು ಇಬ್ಬರೂ ಜೈವಿಕವಾಗಿ ಭಿನ್ನರಾಗಿದ್ದಾರೆ ಎಂಬ ಅಂಶದಿಂದಲೇ ಅನೇಕ ರೀತಿಯ ತಾರತಮ್ಯ ಕಾಣುತ್ತೇವೆ. ಹೆಣ್ಣು ಎಂಬ ಶಬ್ದವು ಸಮಾಜದಲ್ಲಿ ಕಡೆಗಣೆಯ ಪದಗಳಾಗಿ ಮಾರ್ಪಾಡಾಗಿವೆ ಹೀಗೆ ಕಾಣುವುದು ಇಂದು ನಿನ್ನೆಯದಲ್ಲ. ಶತಶತಮಾನಗಳಿಂದ ಹೆಣ್ಣನ್ನು ಕಡೆಗಣಿಸಿ ಶೋಷಣೆಗೆ ಗುರಿಮಾಡಲಾಗಿದೆ. ರಾಮಾಯಣ ಮಹಾಭಾರತಗಳಿಂದಲೂ ಹೆಣ್ಣನ್ನು ಶೋಷಿತಳಾಗಿದ್ದಾಳೆ. ದ್ರಾವಿಡ ಸಂಸ್ಕೃತಿಯಲಿ ಮಾತೃ ಪ್ರಧಾನ ವ್ಯವಸ್ಥೆಯ ಪದ್ಧತಿ ಜಾರಿಯಾದಾಗಿನಿಂದ ಸ್ತ್ರೀ ಪರಾಧೀನಳಾದಳು. ವೈದಿಕ ಪರಂಪರೆಯ ಧರ್ಮ ಶಾಸ್ತ್ರಗಳು ಸ್ತ್ರೀಯರು ಆಚಾರ ವಿಚಾರ ಸಂಪ್ರದಾಯ ರೂಢಿ ವ್ರತ ಆಚರಣೆಗಳಂತಹ ನಿಯಮವನ್ನು ಪಾಲಿಸುವಂತೆ ಮಾಡಿ ಸ್ತ್ರೀಯರ ಮೇಲೆ ಇಲ್ಲಸಲ್ಲದ ನಿರ್ಬಂಧಗಳನ್ನು ಪಾಲಿಸುವಂತೆ ಮಾಡಿ ಸ್ತ್ರೀಯರ ಮೇಲೆ ಇಲ್ಲಸಲ್ಲದ ನಿರ್ಬಂಧಗಳನ್ನು ಹೇರಿ ಅವಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅವಳನ್ನು ದಾಸಿಯನ್ನಾಗಿ ಮಾಡಿದವು ಆದರಲ್ಲೂ ಹೆಣ್ಣಿನ ನೈಸರ್ಗಿಕ ಕ್ರಿಯೆಯಿಂದಾಗಿ ಅವಳನ್ನು ಅಪವಿತ್ರವೆಂದು ಸಾರಿ ಶೂದ್ರರ ಸಾಲಿಗೆ ಸೇರಿಸಿತು. ಇವುಗಳಿಂದ ಅವಳ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ನೈತಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಅವಕಾಶಗಳು ಕಿತ್ತುಕೊಂಡು ಅವಳನ್ನು ಅಧೋಗತಿಗೆ ತಳ್ಳಿತ್ತು ಇದರಿಂದ ಅವಳು ಅನೇಕ ತರಹದ ನೋವು. ಅಪಮಾನಗಳನ್ನು ಸಹಿಸಿಕೊಂಡು ಬಂದಳು. ಅವಳಿಗೆ ಆಗುವ ನೋವು ಯಾತನೆಗಳನ್ನು ಎಲ್ಲಿಯೂ ವ್ಯಕ್ತಪಡಿಸುವ ಸ್ವಾತಂತ್ರ್ಯ ಸಮಾಜದಲ್ಲಿ ಇರಲಿಲ್ಲ ಇಂತಹ ಸಂದರ್ಭದಲ್ಲಿ ಹೆಣ್ಣು ಮಾತನಾಡುವ ವಾತಾವರಣ ಕಲ್ಪಿಸಿಕೊಟ್ಟರು. ಶರಣರು. ಇಲ್ಲಿಯವರೆಗೆ ಮಹಿಳೆಗೆ ಇರುವ ಸಮಾನತೆ, ಸ್ವಾತಂತ್ರ್ಯ ಎಲ್ಲಿಯೂ ಕಂಡು ಬರುವುದಿಲ್ಲ. ಶತಮಾನಗಳಿಂದ ಶೋಷಿತಳಾದ ಹೆಣ್ಣನ್ನು ವಚನಕಾರರು ಮಾನವೀಯ ದೃಷ್ಟಿಯಿಂದ ನೋಡಿ ಸರಿಸಮಾನವಾದ ಸ್ಥಾನವನ್ನು ದೊರಕಿಸಿಕೊಟ್ಟರು.

ವಚನಕಾರರು ಅನುಭವ ಮಂಟಪದಲ್ಲಿ ಲಿಂಗ, ಜಾತಿ, ವರ್ಗ, ವೃತ್ತಿಯ ಭೇದವಿಲ್ಲ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದರು. ಇಲ್ಲಿ ದೊರೆತ ಅಭಿವ್ಯಕ್ತಿ ಸಾಹಿತ್ಯದಿಂದ ಅನೇಕ ಜನ ಮಹಿಳೆಯರು ಪುರುಷರಿಗೆ ಸಮಾನವಾಗುವಂತೆ ಅನೇಕ ವಚನಗಳನ್ನು ರಚಿಸಿದ್ದಾರೆ. ಮತ್ತು ಪುರುಷ ನಿರ್ಮಿತ ಸಮಾಜದ ಮೌಢ್ಯತೆ, ಆಚರಣೆ, ವೃತ್ತ, ನಿಷ್ಠೆ ಮೊದಲಾದ ವಿಷಯಗಳಿಗೆ ನಿರ್ಭಯದಿಂದ ವಚನದ ಮೂಲಕ ಉತ್ತರವನ್ನು ಕೊಟ್ಟಿದ್ದಾರೆ.

ಮಹಿಳೆ ಸ್ವತಂತ್ರ್ಯವಾಗಿ ವಿಭಿನ್ನವಾಗಿ ಆಲೋಚಿಸುವಳು, ಅವಳ ಆಲೋಚನೆಗಳು ಪುರುಷರ ಆಲೋಚನೆಗಿಂತ ಹೇಗೆ ಭಿನ್ನ ವ್ಯಕ್ತವಾಗಿದೆ ಎಂದು ನನ್ನ ದೃಷ್ಟಿಕೋನದಲ್ಲಿ ಹುಡುಕುವ ಅವುಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಮಹಿಳೆಯರ ಆಲೋಚನೆಗಳು ಪುರುಷರ ಆಲೋಚನೆಗಳಿಗಿಂತ ಭಿನ್ನವಾಗಿವೆ. ಮತ್ತು ಭಿನ್ನವಾಗಿರುತ್ತವೆ. ಇದಕ್ಕೆ ಅನೇಕ ಕಾರಣಗಳು ಇದೆ. ಅವಳು ಅನುಭವಿಸಿದ ನೋವು ಅವಮಾನ ನಿಂದನೆ,

ಸಾಮಾಜಿಕ ವಾತಾವರಣ ಮತ್ತು ಪರಿಸರ ಪರಿಸ್ಥಿತಿಗೆ ಸಿಕ್ಕಿ ಕಂಡುಕೊಂಡ ಅನುಭವ ಬೇರೆನೆಯಾಗಿರುತ್ತವೆ. ಏಕೆಂದರೆ ಈಗಲು ಮಹಿಳೆಯರ ಮಾತಿಗೆ ಮನ್ನಣೆಸಿಗುವುದು ನಂತರದ ಸ್ಥಾನದಲ್ಲಿಯೇ ಹಾಗಾಗಿ ಹನ್ನೆರಡನೇ ಶತಮಾನದಲ್ಲಿ ರೂಪಗೊಂಡ ವಚನಕಾರ್ತಿಯರ ವಚನಗಳಲ್ಲಿ ಸ್ತ್ರೀ ಸಂವೇದನೆ ಯಾವ ರೀತಿ ವ್ಯಕ್ತಗೊಂಡಿವೆ ಎಂದು ಹುಡುಕುವ ಪ್ರಯತ್ನ ಇಲ್ಲಿದೆ.

೧೨ನೇ ಶತಮಾನದ ವಚನಕಾರ್ತಿಯರ ಪಟ್ಟಿಯನ್ನು ಗಮನಿಸಿದಾಗ ನಮಗೆ ಸುಮಾರು ೩೩ಕ್ಕಿಂತ ಹೆಚ್ಚು ಜನ ವಚನಕಾರ್ತಿಯರು ದೊರೆಯುತ್ತಾರೆ. ಅದರಲ್ಲೂ ಅಕ್ಕಮಹಾದೇವಿ ಅಕ್ಕಮ್ಮ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಗಂಗಾಂಬಿಕೆ, ನೀಲಾಂಬಿಕೆ, ನಾಗಲಾಂಬಿಕೆ, ಮುಕ್ತಾಯಕ್ಕ, ಮೋಳಿಗೆ ಮಹಾದೇವಿ, ಸತ್ಯಕ್ಕ ಹಡಪದ ಲಿಂಗಮ್ಮ ಇವರ, ವಚನಗಳು ಇತರೆ ವಚನಕಾರ್ತಿಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಇನ್ನುಳಿದ ಗೊಗ್ಗವ್ವೆ, ದುಗ್ಗಳೆ, ಬೊಂತಾದೇವಿ, ಸೂಳೆಸಂಕವ್ವೆ, ಹಾದರ ಕಾಯಕದ ಗಂಗಮ್ಮ, ಕದಿರ ಕಾಯಕದ ಕಾಳವ್ವೆ, ಮುಂತಾದವರ ವಚನಗಳು ಅತಿ ಕಡಿಮೆ ಸಂಖ್ಯೆಯಲ್ಲಿ ದೊರೆಯುತ್ತಿವೆ. ಅವರು ಯಾವುದೇ ಕಾಯಕ ಮಾಡುತ್ತಿರಲಿ, ಅವರಿಗೆ ಅನುಭವ ಮಂಟಪದಲ್ಲಿ ಮುಕ್ತವಾಗಿ ಚರ್ಚೆಯಲ್ಲಿ ಪಾಲಗೊಳ್ಳುವ ಅವಕಾಶ ಮತ್ತು ಅಭಿವ್ಯಕ್ತಗೊಳಿಸಿದ ವಚನಗಳಿಂದ ಅವರ ವೈಚಾರಿಕ ಚಿಂತನೆಯ ಮಟ್ಟ ತಿಳಿದುಕೊಳ್ಳಬಹುದಾಗಿದೆ. ಜಗತ್ತಿನ ದೃಷ್ಟಿಯಲ್ಲಿ ಸ್ತ್ರೀ ಪುರುಷರ ನಡುವೆ ಯುಗಯುಗಗಳಿಂದಲೂ ಆಳವಾದ ಅಂತರಗಳಿವೆ. ಆದರೆ ಸ್ತ್ರೀಯರು ಅನುಭವಿಸಿಕೊಂಡು ಬಂದ ಶೋಷಣೆಗಳಲ್ಲಿ ಹೆಚ್ಚು ಕಡಿಮೆ ಯಾವ ಅಂತರವು ಇಲ್ಲ. ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಯ ವಿರುದ್ಧ ಮಾತನಾಡಿದರು. ಸ್ತ್ರೀ ಪುರುಷರ ಸಮಾನತೆಯ ಕುಟುಂಬ ಪದ್ಧತಿಯನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನಿಸಿದರು. ಇದಕ್ಕೆ ವಚನಕಾರ್ತಿಯರು ತಮಗೆ ಇಷ್ಟವಾದ ದೈವದ, ತಂದೆಯ, ಅಣ್ಣ, ಗಂಡನ, ಗುರುವಿನ, ಕಾಯಕದ ಹೆಸರನ್ನು ಮತ್ತು ಮುಂತಾದ ಹೆಸರನ್ನು ಅಂಕಿತವಾಗಿ ಮಾಡಿಕೊಂಡು ವಚನಗಳನ್ನು ರಚಿಸಿದ್ದಾರೆ.

ಸ್ತ್ರೀ ಎನ್ನುವ ಕಾರಣದಿಂದಲೇ ಶೋಷಣೆಗೆ ಒಳಗಾದಳು ಸ್ತ್ರೀ ಆದರೆ ಸಾಮಾಜಿಕ ನೆಲೆಯಲ್ಲಿ ಭಿನ್ನ ವ್ಯಕ್ತಿತ್ವ ಅಂತಸ್ತು ಹೊಂದಿರುವದರಿಂದ ಸಂವೇದನೆಗಳಲ್ಲಿ, ಭಿನ್ನತೆ ಕಾಣುತ್ತೇವೆ. ಈ ಸ್ತ್ರೀಯರು ವ್ಯಕ್ತಪಡಿಸುವ ದೃಷ್ಟಿಕೋನದಿಂದ ಅಧ್ಯಯನದ ಅನುಕೂಲಕ್ಕಾಗಿ ನಾನು ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಂಡಿದ್ದೇವೆ.

೧) ಮೇಲ್ವರ್ಗದ ವಚನಕಾರ್ತಿಯರ ಸ್ತ್ರೀ ಸಂವೇದನೆಗಳು

೨) ಕೆಳವರ್ಗದ ವಚನಕಾರ್ತಿಯರ ಸ್ತ್ರೀ ಸಂವೇದನೆಗಳು

೩.೧.೧. ಮೇಲ್ವರ್ಗದ ವಚನಕಾರ್ತಿಯರ ಸ್ತ್ರೀ ಸಂವೇದನೆ :

ಸಮಾಜ ಮಹಿಳೆಯರನ್ನು ತಾಯಿ ದೇವತೆಗಳೆಂದು ಗೌರವಿಸಿ ಪೂಜಿಸಿದರು ಆದರೆ ಮಹಿಳೆಯರನ್ನು ಸಹಗೂಡಿ ಬಾಳ್ವೆ ಮಾಡುವಾಗ ಜೈವಿಕ ಭಿನ್ನತೆಯಿಂದಾಗಿ ಕೀಳು ಅಬಲೆಯೆಂದು ಪರಿಗಣಿಸಿತು.

ಅವಳು ಸ್ವಾವಲಂಬಿ, ಸ್ವಾತಂತ್ರ್ಯ ಜೀವನಕ್ಕೆ ವಿರಾಮ ನೀಡಿತು. ಇದನ್ನು ಕುರಿತಾಗಿ ಮೇಲ್ವರ್ಗದ ವಚನಕಾರ್ತಿಯರು ತಮ್ಮ ವಚನಗಳ ಮೂಲಕ ಪ್ರತಿರೋಧಿಸುವ ಪ್ರಶ್ನಿಸುವ ಕೆಲಸ ಮಾಡಿದ್ದಾರೆ. ಹೆಣ್ಣು

ನೈಚಾರಿಕವಾಗಿ ಭಾವನಾತ್ಮಕವಾಗಿ ದೈಹಿಕವಾಗಿ ಸಮರ್ಥಗಳು, ನಿಸರ್ಗಸಹಜಕ್ರಿಯೆಯಿಂದಾಗಿ ಅವಳನ್ನು ಕೀಳಾಗಿ ಕಾಣುವ ಅವಶ್ಯಕತೆ ಇಲ್ಲ, ಅವಳ ಭಾವನೆಗೆ ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ, ಆಗುವ ಮಾನಸಿಕ ಹಿಂಸೆ, ಆಗುವ ಯಾತನೆ, ಕುರಿತಾದ ಅನೇಕ ವಿಷಯದ ಮೇಲೆ ಮೇಲ್ವರ್ಗದ ವಚನಕಾರ್ತಿಯರು ತಮ್ಮ ವಚನಗಳನ್ನು ರಚಿಸಿದ್ದಾರೆ.

೧) ಅಕ್ಕಮಹಾದೇವಿ
೨) ಅಕ್ಕಮ್ಮ
೩) ನೀಲಾಂಬಿಕೆ
೪) ಗಂಗಾಂಬಿಕೆ
೫) ಮೋಳಿಗೆ ಮಹಾದೇವಿ
೬) ನಾಗಲಾಂಬಿಕೆ
೭) ಮುಕ್ತಾಯಕ್ಕ

೩.೧.೨. ಕೆಳವರ್ಗದ ವಚನಕಾರ್ತಿಯರ ಸ್ತ್ರೀ ಸಂವೇದನೆಗಳು :

ಭಾರತೀಯ ಸಮಾಜ ವರ್ಣಾಶ್ರಮ ವ್ಯವಸ್ಥೆಯನ್ನು ಹೊಂದಿರುವಂತಹದು ಬ್ರಾಹಣ, ಕ್ಷತ್ರೀಯ, ವೈಶ್ಯರು, ಶೂದ್ರರು, ಈ ಸಮಾಜದ ಮುಖ್ಯ ಅಂಗಗಳು ಇವುಗಳಿಂದ ಸಮಾಜದಲ್ಲಿ ಕೆಳವರ್ಗದ ಮಹಿಳೆಯರು ಹೆಚ್ಚು ಶೋಷಣೆಗೊಳಗಾಗುತ್ತಾರೆ. ಕೆಳ ಸಮಾಜದಲ್ಲಿ ಕಟ್ಟ ಕಡೆಯ ತಳ ಸಮುದಾಯದ ಹೆಚ್ಚು ಸಮಸ್ಯೆ ಮತ್ತು ಸವಾಲುಗಲನ್ನು ಎದುರಿಸುತ್ತಿದ್ದಾರೆ. ಕುಟುಂಬದ ನಿರ್ವಹಣೆಗಾಗಿ ಕೆಲಸ ಮಾಡುತ್ತಾ ಮಕ್ಕಳನ್ನು ಪೋಷಿಸುವ ಜವಾಬ್ದಾರಿ ಹೊತ್ತಿರುತ್ತಾರೆ. ಕೆಳ ವರ್ಗದ ಮಹಿಳೆಯರಿಗೆ ಯಾವುದೇ ರೀತಿಯ ಸ್ವಾವಲಂಬನೆಯ ಬದುಕಿಗೆ ಅವಕಾಶವಿರುವುದಿಲ್ಲ. ಧರ್ಮ ಸಂಪ್ರದಾಯ ಮೂಢ ನಂಬಿಕೆಗಳ ಹೆಸರಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಶೋಷಣೆ ಅತಿಯಾಗಿರುತ್ತದೆ.

ಕುಟುಂಬದೊಳಗೆ ಹೊರಿಗನ ಪುರುಷ ಪ್ರಧಾನ ಸಮಾಜದಲ್ಲಿ ಪರಂಪರಾಗಾತವಾಗಿ ಬಂದ ಶೋಷಣೆಗಳನ್ನು ಪ್ರತಿಭಟಿಸಿ ತಮ್ಮ ಆತ್ಮ ಶಕ್ತಿ ಬೆಳೆಸಿಕೊಳ್ಳುವ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದ್ದನು ಕೆಳವರ್ಗದ ವಚನಕಾರ್ತಿಯರ ವಚನಗಳಲ್ಲಿ ಕಾರಣಬಹುದಾಗಿದೆ.

ಸಮಾಜದ ಕೆಳವರ್ಗದ ಹೆಣ್ಣು ಮಕ್ಕಳ ಮೇಲೆ ತೋರುವ ಅಗೌರವ ನಡೆಸುವ ದೌರ್ಜನ್ಯ ಶೋಷಣೆಗಳನ್ನು ಪ್ರತಿಭಟಿಸುತ್ತಾ ಗಂಡು ಹೆಣ್ಣಿನ ಬಗೆಗಿರುವ ತಾರತಮ್ಯದ ಕಲ್ಪನೆ ಹಾಗೂ ಸತಿಪತಿಯರಿಬ್ಬರಲ್ಲಿನ ಸಮಾಜ ಗೌರವ ಕರ್ತವ್ಯಗಳ ಬಗ್ಗೆ ಕೆಳ ವರ್ಗದ ವಚನಕಾರ್ತಿಯರು ದಿಟ್ಟವಾಗಿ ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ.

ವೇದಕಾಲವೇ ಇರಲಿ ಅಥವಾ ಇನ್ನಾವುದೇ ಕಾಲವಿರಲಿ ದೇವಪೂಜಾ ವಿಧಿಗಳನ್ನು ನಿರಾಕರಿಸುತ್ತಾ ಶುದ್ಧ ಚಾರಿತ್ರ್ಯದ ಬಗ್ಗೆ ಕಾಯಕತ್ವದಲ್ಲಿ ಬದ್ಧತೆಯನ್ನು ಈ ವಚನಕಾರ್ತಿಯರು ತೋರಿಸಿದ್ದಾರೆ.

ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ ಶೋಷಣೆಗಳನ್ನು ಕಂಡ ವಚನಕಾರ್ತಿಯರು ಸ್ತ್ರೀಪುರುಷರ ಭಿನ್ನತೆಯನ್ನು

ಹೋಗಲಾಡಿಸಿ ಸಮಾನ ಅವಕಾಶಗಳೊಂದಿಗೆ ಬದುಕಲು ಅನುವು ಮಾಡಿಕೊಳ್ಳಲು ಯತ್ನಿಸಿದ್ದಾರೆ. ಈ ಸಂದರ್ಭ ಹೊರಟ ಅವರ ಮಾತುಗಳು ತೀಕ್ಷ್ಣವಾಗಿ ಹೊರಬಂದಿವೆ.

೧) ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ

೨) ಕದಿರ ಕಾಯಕದ ಕಾಳವ್ವೆ

೩) ಕದಿರ ರೇಮ್ಮವ್ವೆ

೪) ಕನ್ನಡಿ ಕಾಯಕದ ರೇವಮ್ಮ

೫) ಕಾಟ ಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

೬) ಕಾಲ ಕಣ್ಣಿಯ ಕಾಮಮ್ಮ

೭) ಬಾಚಿ ಕಾಯತದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೮) ರೇವಣಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮ

೯) ಹಡಪದಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

೧೦) ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷಮ್ಮ

೧೧) ಸತ್ಯಕ್ಕ

೧೨) ಎಡೆ ಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಲಿಂಗಮ್ಮ

೧೩) ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

೧೪) ಸಿದ್ದ ಬುದ್ದಯ್ಯಾಗಳ ಪುಣ್ಯಸ್ತ್ರೀ ಕಾಳವ್ವೆ

೧೫) ಬೊಂತಾದೇವಿ

೧೬) ಕೊಟ್ಟಣದ ಸೋಮಮ್ಮ

೧೭) ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

೧೮) ಗೊಗ್ಗವ್ವೆ

೧೯) ಬತ್ತಲೇಶ್ವರ ಪುಣ್ಯಸ್ತ್ರೀ ಗುಡ್ಡವ್ವೆ

೨೦) ಸೂಳೆ ಸಂಕವ್ವೆ

೨೧) ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

೨೨) ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ–ಗಂಗಮ್ಮ

೨೩) ದುಗ್ಗಳೆ

೨೪) ಅಮುಗೆ ರಾಯಮ್ಮ

೨೫) ಆಯ್ದಕ್ಕಿ ಲಕ್ಕಮ್ಮ

೨೬) ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

೩.೨. ಹೆಣ್ತುತನದ ಸೀಮೆಯ ದಾಟದ ವಚನಕಾರ್ತಿಯರು:

ಸಮಾಜದಲ್ಲಿ ಮಹಿಳೆಯರ ಮೇಲೆ ನಡೆದ ಶೋಷಣೆಗಳು ಸ್ತ್ರೀಯರಿಗೆ ಇರುವ ನಿಯಮ ಕಟ್ಟಳೆಗಳು ಸಮಾನವಾಗಿದ್ದರು ಅವುಗಳನ್ನು ಅಭಿವ್ಯಕ್ತಿಸುವಲ್ಲಿ ಮೇಲ್ವರ್ಗದ ವಚನಕಾತಿಯರ ಸಂವೇದನೆಗಳು ಭಿನ್ನತೆ ಕಾಣುತ್ತವೆ. ನಮ್ಮ ಸಮಾಜದಲ್ಲಿ ವರ್ಗ ವರ್ಣಗಳು ಮಹಿಳೆಯರ ಜೀವನದ ಮೇಲೆ ಪರಿಣಾಮ ಬೀರುವಷ್ಟೆ ಮುಖ್ಯವಾಗಿ ಜಾತಿ, ಧರ್ಮ, ಆರ್ಥಿಕತೆ ಅಥವಾ ಅಂತಸ್ತುಗಳು ಪ್ರಮುಖವಾಗಿವೆ. ಅವು ಏಕ ರೂಪವಾಗಿರುವುದಿಲ್ಲ. ಈ ಕಾರಣದಿಂದ ಮಹಿಳೆಯ ಸಮಸ್ಯೆಗಳು ಒಂದೇ ರೀತಿಯಾಗಿರುವುದಿಲ್ಲ. ಇವುಗಳನ್ನು ಕಿತ್ತೊಗೆದು ಐಕ್ಯತೆ,ಸಮಾನತೆ ಅವಕಾಶಗಳಿಂದ ವಚನಕಾರ್ತಿಯರು ತಮ್ಮನ್ನು ಸುತ್ತಿಕೊಂಡಿದ್ದ ಸಂಕೋಲೆಗಳಿಂದ ಮುಕ್ತವಾಗಿ ಹೊರಬಂದು ತನ್ನ ವೈಚಾರಿಕ ಶಕ್ತಿಯಿಂದ ಬೆಳೆದರು. ಹಾಗಾಗಿಯೇ ಅವರು ತಾವು ಹೆಣ್ಣು ಎಂಬುವದನ್ನು ಮರೆತು ಸೀಮೆಯನ್ನು ದಾಟಿ ಹೆಣ್ತುತನ ಹೆಣ್ಣಿನ ಕುರುಹುಗಳನ್ನು ಕುರಿತು ಅನೇಕ ವಚನಗಳು ಬರೆದ್ದಿದಾರೆ.

ಅಕ್ಕಮಹಾದೇವಿಯು ಸ್ತ್ರೀ ಪರ ಹೋರಾಟಕ್ಕೆ ನಾಂದಿ ಹಾಡಿ ಭದ್ರ ಬುನಾದಿ ಹಾಕಿದಳು. ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಗಂಡ ಕೌಶಿಕನನ್ನೆ ಧಿಕ್ಕರಿಸಿ ಸಮಾಜಮುಖಿಯಾದ ಶರಣ ಸಮುದಾಯ ಸೇರುತ್ತಾಳೆ. ಅವಳ ಬದುಕನ್ನೆ ಬಂಡಾಯವಾಗಿಸಿ ಕೊಂಡು. ಸಮಾಜದ ಕಟ್ಟಳೆ ಮೀರಿ ಬದುಕಿದಳು.

ಅಕ್ಕಮಹಾದೇವಿ ಕೌಶಿಕನ ಅರಮನೆಯನ್ನು ಬಿಟ್ಟು ಹೋರಡುವಾಗ ತಂದೆ-ತಾಯಿ ಮನೆಗೆ ಹಿಂದಿರುಗಿ ಬಾ ಎಂದಾಗ

"ಮನ ಮನ ತಾರ್ಕಣೆಗೊಂಡು ಅನುಭವಿಸಲು ನೆನಹೆ
ಘನವಹುದೆಲ್ಲಿದೆ ಅದು ಹವಣದಲ್ಲಿ ನಿಲುವುದೇ?
ಎಲೆ ಅವ್ವಾ ನೀನು ಮರಳವ್ವೆ
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಗೊಲಿದು
ಸಲೆ ಮಾರು ಹೋದೆನು.
ನಿನ್ನ ತಾಯಿ ತನವನೊಲ್ಲೆ ಹೋಗಾ"[7]

ಎಂದು ತಾಯಿಗೆ ಉತ್ತರಿಸುತ್ತಾಳೆ. ಮನಸ್ಸು-ಮನಸ್ಸುಗಳ ನಡುವೆ ವಾದ-ವಿವಾದಗೊಂಡು ತಾಯಿ ಮಗಳ ಸಂಬಂಧ ಎಂಬುದು ನೆಪಕ್ಕೆ ಮಾತ್ರ ಗಟ್ಟಿಯಾಗಿ ಉಳಿದಿದೆ, ಹೊರತು ತೂಗಿ ಅಳೆದು ನೋಡಲು ಅಲ್ಲಿ ನಿಲ್ಲುವುದೇ? ತಾಯಿ. ನಾನು ನಿನ್ನ ತಾಯಿತನವನೊಲ್ಲೆ ಹೋಗು ಹೋರಡುತ್ತಾಳೆ.ಹೀಗೆ ಆತ್ಮ ವಿಶ್ವಾಸದಿಂದ ದಿಗಂಬರೆಯಿಂದ ದಿವ್ಯಾಂಬರವಾಗಿ ಮುನ್ನಡೆಯುತ್ತಾಳೆ. ಹೀಗೆ ಹೊರಡುವದು ನಮ್ಮ ಸಮಾಜದಲ್ಲಿ ಸಾಮಾನ್ಯವಾದ ಮಾತಲ್ಲ.

ನಮ್ಮ ಸಮಾಜ ದಿಗಂಬರ ರೂಪವನ್ನು ನೋಡಲು ಕಾಣಲು ಇಷ್ಟಪಡುವುದಿಲ್ಲ. ಮತ್ತುಭಾರತೀಯ ಧರ್ಮ ಶಾಸ್ತ್ರಗಳಲ್ಲಿ ಎಲ್ಲಿಯೂ ದಿಗಂಬರ ತತ್ವ ಭೊಧನೆಗಳು ಇಲ್ಲ. ಕೇವಲ ಜೈನ ಧರ್ಮದಲ್ಲಿ ದಿಗಂಬರದ ಪದ ಬಳಕೆ ಮತ್ತು ಪಾಲನೆ ಕೇಳುತ್ತೇವೆ. ಅದು ಕೇವಲ ಗಂಡಿಗೆ ಮಾತ್ರ. ಹೆಣ್ಣಿನ ನಿಜವಾದ ಸೌಂದರ್ಯ ಅಡಗಿರುವುದೇ ಅವಳ ಉಡುಪುಗಳಲ್ಲಿ ಮತ್ತು ಅಂಗಾಂಗಗಳನ್ನು ಮುಚ್ಚಿಕೊಳ್ಳುವುದರಲ್ಲಿ. ಇಲ್ಲಿ

ನಾವು ಮಹಾಭಾರತದ ಒಂದು ಪ್ರಸಂಗವನ್ನು ನೆನಪಿಸಿಕೊಳ್ಳಬಹುದು. ಕೌರವ ಪಾಂಡವರು ಜೂಜಿನ ಆಟದಲ್ಲಿ ಪಾಂಡವರು ದ್ರೌಪದಿಯನ್ನು ಪಣಕ್ಕಿಟ್ಟು ಸೋತಾಗ ದುರ್ಯೋಧನನು ಅವಳನ್ನು ತುಂಬು ಸಭೆಯಲ್ಲಿ ಕರೆತಂದು ಸೀರೆ ಸೆಳೆಯುವ ಪ್ರಸಂಗ. ಇಲ್ಲಿ ಧುರ್ಯೋಧನ ದ್ರೌಪದಿಯ ಸೀರೆ ಸೆಳೆದರೆ ಶ್ರೀಕೃಷ್ಣ ಅವಳಿಗೆ ಸೀರೆಯನ್ನು ಕರುಣಿಸುತ್ತಾನೆ. ಇಲ್ಲಿ ಸ್ತ್ರೀಯ ದೇಹದ ಮೇಲಿನ ವಸ್ತ್ರವನ್ನು ಸೆಳೆದರೆ ಅದು ಮಾಡುವ ಅಪಮಾನ ಮತ್ತು ತೋರುವ ಅಗೌರವವಾಗಿದೆ. ಸ್ತ್ರೀಯರಿಗೆ ದೇಹ ಮುಚ್ಚಿಕೊಳ್ಳಲು ವಸ್ತ್ರವನ್ನು ನೀಡುವುದು ಗೌರವದ ಸೂಚಕವೆನಿಸಿಕೊಳ್ಳುತ್ತದೆ. ಈಗಲೂ ಅಷ್ಟೇ ನಾವು ತಂತ್ರಜ್ಞಾನ ವೈಚಾರಿಕವಾಗಿ, ವೈಜ್ಞಾನಿಕವಾಗಿ, ಸಾಮಾಜಿಕವಾಗಿ ಎಷ್ಟೇ ಮುಂದುವರೆದರೂ ಸಾಮೂಹಿಕವಾಗಿ ಕುಳಿತು ತುಂಡು ಬಟ್ಟೆ ಧರಿಸಿದ ಸ್ತ್ರೀಯ ಚಿತ್ರಗಳನ್ನು ನೋಡುವುದಾಗಲೀ ಅವುಗಳ ಕುರಿತು ಮಾತನಾಡುವುದು,ಚರ್ಚೆ ಮಾಡುವುದಾಗಲೀ ಮಾಡುವುದಿಲ್ಲ. ಇಂತಹ ಭವ್ಯ ಸಂಸ್ಕೃತಿ ಇರುವ ಸಮಾಜದಲ್ಲಿ ೧೨ನೇ ಶತಮಾನದಲ್ಲಿಯೇ ತುಂಬು ಯವ್ವನದಲ್ಲಿದ್ದ ಒಬ್ಬ ಒಂಟಿ ಹೆಣ್ಣು ದಿಗಂಬರೆಯಾಗಿ ಹೋರಡುತ್ತಾಳೆ.

ಇಲ್ಲಿ ಅಕ್ಕಮಹಾದೇವಿ ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಎಷ್ಟೊಂದು ವೈರಾಗ್ಯ ತುಂಬಿಕೊಡಿದ್ದಳು ಎಂಬುವುದು ಸ್ಪಷ್ಟವಾಗುತ್ತದೆ. ಯಾವುದೇ ಸ್ತ್ರೀ ತನ್ನ ಅಂಗದ ಮೇಲಿನ ವಸ್ತ್ರವನ್ನು ಹಾಗೆ ಕಳಚಿ ಹೊರಡುವುದು ಇದೆಯಲ್ಲ ಅಷ್ಟು ಸುಲಭ ಮತ್ತು ಸಹಜದ ಮಾತಲ್ಲ. ನಡೆದುಕೊಳ್ಳುವ ರೀತಿಯು ಅಲ್ಲಲ್ಲ. ಈಲ್ಲಿ ಸಮಾಜ ಅವಳಿಗೆ, ಅವಳ ಸ್ತ್ರೀತ್ವದ ಅಸ್ಥಿತ್ವಕ್ಕೆ ಎಷ್ಟೊಂದು ಧಕ್ಕೆ, ನೋವುಂಟುಮಾಡಿರಬೇಕು ಎಂಬುದನ್ನು ಗಮನಿಸಬೇಕು. ಇಂತಹ ನೋವಿನಲ್ಲು ಅವಳು ಸಮಾಜದ ವಿರೋಧವನ್ನು ಎದುರಿಸಲು ಮಾನಸಿಕವಾಗಿ ಸಿದ್ದಳಾಗಿರುವುದು ವಿಶೇಷ. ಈ ಮಾನಸಿಕ ಸಿದ್ದತೆ ಮತ್ತು ಹೀಗೆ ಒಂಟಿಯಾಗಿ ಎದುರಿಸುವುದು ಇದು ಅವಳಿಗೆ ಮಾತ್ರ ಸಾಧ್ಯ. ಈ ಒಂದು ಒಂಟಿ ಹೆಣ್ಣಿನ ಗಟ್ಟಿತನಕ್ಕೆ, ಭಂಡ ಧೈರ್ಯಕ್ಕೆ ಅಕ್ಕಮಹಾದೇವಿಯನ್ನು ಈಗಲೂ ವಿಶ್ವ ನೆನಪಿಸಿಕೊಳ್ಳುತ್ತದೆ.

ಅಕ್ಕಮಹಾದೇವಿ ಎಲ್ಲಿಯೂ ತನ್ನ ನೋವನ್ನು ದೇಹದ ಅಂಗಾಂಗಗಳ ಮೂಲಕ ಹಾರಹಾಕದೇ ಶಬ್ದಗಳಲ್ಲಿ ನಾವು ಓದುವ /ಪದಗಳ ಮೂಲಕ ಭಾವವಿರಚನೆಯಿಂದ ಹೊರ ಹಾಕಿದ್ದಾಳೆ. ಅವೇ ನಮಗೆ ಕಂಡುಬರುವ ನಾವು ಓದುವ ವಚನಗಳು. ಸಮಾಜ ದೇಹದ ಅಂಗಾಂಗಗಳನ್ನು ಕುರಿತು ಮುಚ್ಚಿಟ್ಟು ಮಾತನಾಡುವ ಕೇಳುವ ಪ್ರಶ್ನೆಗಳಿಗೆ ತನ್ನ ದೇಹದ ಮೇಲಿನ ವಸ್ತ್ರಗಳನ್ನೇ ತೆಗೆದು ಉತ್ತರವನ್ನು ನೀಡಿದ ಏಕೈಕ ಮಹಿಳೆಯಾಗಿದ್ದಾಳೆ ಅಕ್ಕ.

ನಮ್ಮ ದೇಶದಲ್ಲಿ ಸನ್ಯಾಸಿ ಪದವಿರುವುದು ಕೇವಲ ಗಂಡಿಗೆ ಮಾತ್ರ, ಸನ್ಯಾಸಿ ಎಂದರೆ ಪ್ರಪಂಚದ ಮೋಹವನ್ನು ತ್ಯಜಿಸುವುದು. ಸನ್ಯಾಸಿ ಪದಕ್ಕೆ ತಮಿಳಿನಲ್ಲಿ ಒಂದು ಪದ್ಯದಲ್ಲಿ ಇನ್ನೂ ವಿವರವಾಗಿ ಹೇಳಲಾಗಿದೆ.

"ಹಸಿದರೇ ಮಾತ್ರ ಯಾವುದೇ ಆಹಾರವನ್ನು, ಉಣ್ಣುವುದು, ತಿನ್ನುವುದು, ಬದುಕುವುದಕ್ಕಲ್ಲ, ಬದುಕಿಗಾಗಿ ತಿನ್ನುವುದು. ಧಗೆಯಲ್ಲಿ ಬೆವೆತು ಮೈಯಲ್ಲಿ ಅಂಟುವ ಭಾವನೆ ಬಂದರೇ ಮಾತ್ರವೇ ಸ್ನಾನ ಮಾಡಬೇಕು. ದಿನಾಲೂ ಬೆಳಿಗ್ಗೆ ಸ್ನಾನವನ್ನು ಮಾಡಲೇಬೇಕೆಂದರೆ ಸನ್ಯಾಸಿ ಅದಕ್ಕೆ ಅಂಟಿಕೊಂಡಿದ್ದಾನೆಂದು ಅರ್ಥ. ಅವನಿಗೆ ಆಕಾಶವೇ ಛಾವಣಿಯಾಗಿರಬೇಕು, ಮನೆ,ಮಠ,ಆಶ್ರಮ ಎಂಬುದಿರಬಾರದು. ನೆಲದ

ಮೇಲೆಯೇ ಮಲಗಬೇಕು. ಕೈಯನ್ನು ದಿಂಬಿನಂತೆ ಇಡಬಾರದು, ಇಟ್ಟುಕೊಂಡರೆ ದೇಹವು ಸುಖವನ್ನು ಕೇಳುತ್ತಿದೆ ಎಂದರ್ಥ." ಗುರುತಿಗೆ ಒಂದು ಮರದ ಆಶ್ರಯವಿರಬೇಕು. ಕಾರಣ ಜನರಿಗೆ ಬುದ್ಧಿ ಮಾತು ಹೇಳಲು, ಸಮಸ್ಯೆಯನ್ನು ಕೇಳಲು ಬರುವ ಜನರಿಗೆ ಗುರುತಿಗೆ ಮರವಿರಬೇಕು ಹೀಗೆ ಬಾಳುವನು ನಿಜವಾದ ಸನ್ಯಾಸಿ. ಇದನ್ನೆಲ್ಲ ಓದಿದ ನಂತರ ಇಂದಿನ ಸನ್ಯಾಸಿಗಳ ಬಗ್ಗೆ ಹೇಳಲು ಇಚ್ಛಿಸುವುದಿಲ್ಲ. ಏಕೆಂದರ ಅವರಲ್ಲಿ ವೈರಾಗ್ಯಕ್ಕಿಂತ ವೈಭೋಗವೇ ಹೆಚ್ಚು. ಇದರ ಕುರಿತು ಚರ್ಚೆ ಇಲ್ಲಿ ಅಪ್ರಸ್ತುತವೆನಿಸುತ್ತದೆ. ಹೀಗೆ ಸನ್ಯಾಸಿಯಂತೆ ಎಲ್ಲವನ್ನೂ ತ್ಯಜಿಸಿ ಒಬ್ಬ ಒಂಟಿ ಹೆಣ್ಣು ಲೋಕ ಸಂಚಾರದಲ್ಲಿ ತೊಡಗಿರುವುದು ಅದು ಕೂಡ ೧೨ನೇ ಶತಮಾನದ ಅಕ್ಕಮಹಾದೇವಿಯಲ್ಲಿ ಮಾತ್ರ.

ಈ ಲೋಕ ಸಂಚಾರವು ಕೂಡ ನಮ್ಮ ಸಮಾಜದಲ್ಲಿ ಗಂಡಿಗೆ ಮಾತ್ರವಿದೆ,ಹೆಣ್ಣಿಗೆ ಇಲ್ಲ. ಇಲ್ಲಿ ಒಂದು ಗಾದೆಮಾತು ನೆನಪಿಸಿಕೊಳ್ಳಬಹುದು, "ಗಂಡು ಕುಳಿತು ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು". ಅಂದರೆ ಹೆಣ್ಣು ಸಮಾಜದಲ್ಲಿ ಎಲ್ಲಿಯೂ ತಿರುಗಾಡುವಂತಿಲ್ಲ. ಹೆಣ್ಣು ಒಂದೇ ಕಡೆ ನೆಲೆಯೂರುವುದು ಸಹಜ.ಅವಳಿಗೆ ಇದು ಅಂತಹ ದೊಡ್ಡ ಸಾಧನೆ ಅಲ್ಲ ಅವಳು ಆಗಿನಿಂದ ಇಗಲೂ ಇಂತಿಷ್ಟೇ ಚೌಕಟ್ಟಿನಲ್ಲಿಯೇ ಇರುತ್ತಾಳೆ. ಉದಾ: ಮನೆ. ಹೆಣ್ಣು ತಿರುಗಾಡುವ ಪ್ರದೇಶಗಳನ್ನು ಆಲೋಚಿಸಿದರೆ ಕೆಲವೇ ನಿರ್ದಿಷ್ಟ ಪ್ರದೇಶಗಳಲ್ಲಿಯೇ ತನ್ನ ಮನೆ,ತವರುಮನೆ ಅತಿ ಹತ್ತಿರದ ಕೆಲವು ಸಂಬಂಧಿಕರ ಮನೆಗಳು ಅವಳೊಂದಿಗೆ ಒಡನಾಡಿಗಳು ಎನಿಸಿಕೊಳ್ಳುವರು ಕೆಲವರೇ .ಅತಿ ಕಡಿಮೆ ಸಂಖ್ಯೆಯ ಜನರೊಂದಿಗೆ ಒಡನಾಟವಿದ್ದರು, ಅತಿ ಹೆಚ್ಚು ಮಾತನಾಡವವಳು ಹೆಣ್ಣೆಂದು ಕೇಳುತ್ತೇವೆ.ಅತಿಯಾಗಿ ಮಾತನಾಡುವುದಕ್ಕೆ ಮಹಿಳೆಯರಿಗೆ ಮಾತೇ ಎಂದು ಕರೆಯುತ್ತಾರೆ ಎಂಬ ಕೊಂಕು ನುಡಿಯು ಅವಳ ಮೇಲಿದೆ.ಅದೇನೇ ಇದ್ದರು ಗಂಡಿಗಿಂತ ಸೀಮಿತ ಚೌಕಟ್ಟಿನಲ್ಲಿ ಇರುವವಳು ಹೆಣ್ಣು.ಈ ಆಧುನಿಕ ಮಹಿಳೆಯರನ್ನು ತೆಗೆದುಕೊಂಡುರು ಅಷ್ಟೇ ಅವರು ಅತಿ ಹೆಚ್ಚು ಸಮಯ ಕಳೆಯುವುದು ಮನೆಯಲ್ಲಿ. ಹೊರಗಡೆ ಹೋದರು ಗೆಳತಿಯರ ಮನೆ, ನೆರೆಹೊರೆಯವರ ಮನೆ, ಸಂಬಂಧಿಕರ ಮನೆ, ವೃತ್ತಿಯಲ್ಲಿದ್ದರೇ ಆ ಸ್ಥಳ ಇತ್ಯಾದಿ ಕೊನೆಯಲ್ಲಿ ಮತ್ತೇ ಮತ್ತೆ ಮನೆ ಎಂದೇ ಕೇಳಿ ಬರುತ್ತದೆ.ಆದರೆ ಒಬ್ಬ ಗಂಡಿಗೆ ಈ ಪದಗಳು ಕೇಳಿ ಬರುವುದಿಲ್ಲ. ಯಾವುದಾದರೂ ರಸ್ತೆಯ ಕೊನೆಯಲ್ಲಿ ಕುಳಿತಿರುವುದು ಮತ್ತು ಕೆಲವು ಸ್ಥಳಗಳನ್ನು ತಮ್ಮ ಅಡ್ಡಗಳಾಗಿ ಮಾಡಿಕೊಂಡಿರುತ್ತಾನೆ.ಗಂಡಿಗೆ ಒಂದು ಕಡೆ ಕುಳಿತುಕೊಳ್ಳುವಂತೆ ಮಾಡುವುದಕ್ಕೆ ಸಮಾಜದಲ್ಲಿ ಸನ್ಯಾಸಿಯನ್ನಾಗಿ ಬೆಟ್ಟ ಗುಡ್ಡಗಳಲ್ಲಿ, ಗುಹೆಗಳಲ್ಲಿ, ಜಪ,ತಪ,ವೃತ ಹಿಡಿದು ಮೌನವಾಗಿ ಕುಳಿತುಕೊಳ್ಳುವಂತೆ ಮಾಡುತ್ತಾರೆ. ಹೆಣ್ಣಿಗೆ ಹೊರಗಡೆ ಹೋಗಿ ಬಾ ಎಂದರೇ ಜೊತೆಗೆ ಯಾರಾದರೂ ಒಬ್ಬರು ಬೇಕು, ಯಾರು ಸಿಗದಿದ್ದರೆ ಪಕ್ಕದ ಮನೆಯಲ್ಲಿರುವ ಮಗುವನ್ನಾದರೂ ಕರೆದುಕೊಂಡು ಹೋಗುವುದು ವಾಡಿಕೆಯಾಗಿ ಇಗಲೂ ಕಾಣಿಸುತ್ತದೆ. ಇಂತಹ ಅನೇಕ ವಿಷಯಗಳಿಗೆ ವಿರುದ್ದವಾಗಿ ನಿಂತವಳು ಶರಣೆ ಅಕ್ಕಮಹಾದೇವಿ.

ಅಭಿವ್ಯಕ್ತಿಯ ವಿಷಯದಲ್ಲೂ ಅಷ್ಟೇ ತನಗೆ ಇಷ್ಟವಿದುದ್ದನ್ನು ಇದು ತನಗೆ ಇಷ್ಟವೆಂದು ಮುಕ್ತವಾಗಿ ಹೇಳುವುದಾಗಲೀ ತನಗೆ ಇಷ್ಟವಿಲ್ಲದನ್ನು ತನಗೆ ಇದು ಇಷ್ಟವಿಲ್ಲ ಎಂದು ನಿರಾಕರಿಸುವ ಧೈರ್ಯವನ್ನು ಇಂದಿಗೂ ಹೆಣ್ಣುಮಕ್ಕಳಲ್ಲಿ ಕಾಣುವುದಿಲ್ಲ. ಹೀಗೆ ಅಭಿವ್ಯಕ್ತಿಯ ಸ್ವಾತಂತ್ರ್ಯವಾಗಲೀ ಪ್ರತಿಭಟಿಸುವ ಸಾಮರ್ಥ್ಯವಾಗಲಿ ಇಲ್ಲ. ಇಂದಿನ ಆಧುನಿಕ ಮಹಿಳೆಯರನ್ನು ತೆಗೆದುಕೊಂಡರೆ ತನಗೆ ಇಷ್ಟವಿಲ್ಲದ

ಹುಡುಗನನ್ನು ಮನೆಯಲ್ಲಿ ಮದುವೆ ಮಾಡಲು ಹೊರಟಾಗ ಆತ ತನಗೆ ಇಷ್ಟವಿಲ್ಲವೆಂದು ಹೇಳಿ ತಾನು ಇಷ್ಟಪಟ್ಟ ಹುಡುಗನನ್ನು ಮದುವೆ ಮಾಡಿಕೊಳ್ಳವ ಮಹಿಳೆಯರು ನಮ್ಮ ಸಮಾಜದಲ್ಲಿ ಎಷ್ಟು ಜನರು ಕಾಣ ಸಿಗುತ್ತಾರೆ? ತಮ್ಮ ಇಷ್ಟದಂತೆ ಬದುಕಿರುವ ಮಹಿಳೆಯರು ಎಷ್ಟು ಜನರಿದ್ದಾರೆ ಎಂಬುದನ್ನು ನಾವೇ ಅವಲೋಕಿಸಿಕೊಳ್ಳಬೇಕು. ಇಂತಹ ಅನೇಕ ವಿಷಯಗಳಿಗೆ ಅಕ್ಕಮಹಾದೇವಿ ಆಧುನಿಕ ಮಹಿಳೆಯರಿಗೆ ಪ್ರೇರಕಳಾಗಿದ್ದಾಳೆ, ಸ್ಫೂರ್ತಿದಾಯಕಳಾಗಿದ್ದಾಳೆ.

ಹೀಗೆ ಅಕ್ಕಮಹಾದೇವಿ ದಿಗಂಬರೆಯಾಗಿ, ವೈರಾಗಿಣಿಯಾಗಿ, ಲೋಕಸಂಚಾರಣಿಯಾಗಿ ಮತ್ತು ಮಹಿಳಾಪರ ಹೋರಾಟಗಾರ್ತಿಯಾಗಿ ಕಂಡುಬರುವ ಪ್ರಪ್ರಥಮ ಮಹಿಳೆ. ಹಾಗಾಗಿ ಇವಳು ಇಡೀ ಜಗತ್ತಿಗೇ ಆದರ್ಶ ಪ್ರಾಯಳಾದಳು. ತನ್ನ ಇಚ್ಛೇಯಂತೆ ಒಲ್ಲದ ಗಂಡ ಕೌಶಿಕನನ್ನು ಬಿಟ್ಟು ಚನ್ನಮಲ್ಲಿಕಾರ್ಜುನನೇ ಬೇಕೆಂದು ಅರಸಿ ಹೋರಟವಳು ಅಕ್ಕಮಹಾದೇವಿ. ಇವಳ ಹೋರಾಟದ ದಾರಿಯಲ್ಲಿ ತನ್ನ ಸಂವೇದನೆಗಳು, ಭಾವನೆಗಳು ವ್ಯಕ್ತಪಡಿಸುವ ನುಡಿಗಳು ಸಾಹಿತ್ಯದ ನೆಲೆಯಲ್ಲಿ ಪದಗಳ ಅದ್ಭುತ ಜೋಡಣೆಯಾಗಿರುವುದರಿಂದ ಅವಳು ಮೊಟ್ಟಮೊದಲ ಕವಯತ್ರಿಯಾಗಿದ್ದಾಳೆ. ಇಂತಹ ಅನೇಕ ವಿಷಯಗಳಿಗೆ ಅಕ್ಕಮಹಾದೇವಿ ಆದರ್ಶವಾಗಿ ನಿಲ್ಲುತ್ತಾಳೆ. ಆದರೆ ಅವಳಗೆ ಆದರ್ಶವಾಗಿ ನಿಂತವರು ಯಾರು? ಅವಳ ಜ್ಞಾನಕ್ಕೆ ವೈರಾಗ್ಯಕ್ಕೆ ಸಾಟಿಯಾಗಿ ನಿಲ್ಲುವವರು ಯಾರು? ಅದಕ್ಕಾಗಿಯೇ ಶರಣ ಚನ್ನಬಸವಣ್ಣನ ಒಂದು ಮಾತು ಸಾಕ್ಷಿಯಾಗಿ ನಿಲ್ಲುತ್ತದೆ. "ಆದ್ಯ ಅರವತ್ತು ವಚನಕ್ಕೆ ಮಹಾದೇವಿಯ ಒಂದು ವಚನ ನಿರ್ವಚನ" ಎನ್ನುವುದು ಅವಳ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಅಕ್ಕಮಹಾದೇವಿಯ ದಿವ್ಯಾಂಬರಕ್ಕೂ, ದಿಟ್ಟನಿಲುವಿಗೂ, ವೈಚಾರಿಕತೆಗೂ ಸಮಾಜ ಸ್ಪಂದಿಸದು ಎಂದು ಹೇಳಿದಕ್ಕೆ ಅಕ್ಕ

"ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯಮಾಡಿ
ನೊರೆತೊರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ?
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು
ಬಂದೆಡೆ ಮನದಲ್ಲಿ ಕೋಪವನ್ನು ತಾಳದೇ
ಸಮಾಧಾನಿಯಾಗಿರಬೇಕು."[5]

ಹೀಗೆ ನುಡಿಯುತ್ತಾಳೆ. ಈ ನುಡಿಗಳು ಅವಳ ಮಾನಸಿಕ ಗಟ್ಟಿತನಕ್ಕೆ, ಅವಳ ವೈಚಾರಿಕತೆಗೆ. ಉಪಮೇಯ ಮೂಲಕ ಉತ್ತರ ನೀಡಿ ಸಮಾಧಾನಪಡಿಸಿರುವ ಪರಿಗೆ ಸಾಕ್ಷಿಯಾಗಿದೆ.

ಈ ವಚನ ಎಷ್ಟು ಅರ್ಥವಾಗಿದೆಯೆಂದರೆ. ನಾವು ಯಾವುದೇ ಕೆಲಸ ಮಾಡಬೇಕಾದರು ಮೊದಲೇ ಯೋಚನೆ ಮಾಡಿ ಮುಂದು ವರೆಯಬೇಕೆಂದು ಹೇಳುತ್ತದೆ. ಅದಕ್ಕೆ ನಾವು ಯಾವರೀತಿ ಸಿದ್ಧರಾಗಿರಬೇಕೆಂದು ಸಾರಿದೆ.

ಬೆಟ್ಟದ ಮೇಲೆ ಮನೆ ಮಾಡುವದಕ್ಕಿಂತ ಮುಂಚಿತವಾಗಿ ಯೋಚನೆ ಮಾಡಬೇಕು ಅಲ್ಲಿ, ನಮ್ಮಗಾಗುವ ತೊಂದರೆಗಳು ಏನು? ಅಲ್ಲಿ ಕಾಡು ಮೃಗಗಳು ಬರುತ್ತವೆ ಇಲ್ಲ ಎನ್ನುವದು, ಬಂದರೆ ಅವುಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಶಕ್ತಿ ಇದೆಯೋ, ಇಲ್ಲವೋ, ಎನ್ನುವದು, ಕೇವಲ ಪ್ರಾಣಿಗಳಷ್ಟೆ ಅಲ್ಲ ಕತ್ತಲೆಗೆ, ಮಳೆಗೆ, ಗಾಳಿಗೆ, ನೈಸರ್ಗಿಕ, ವಿಕೋಪಗಳಿಗೆ ತಾವು ಸಿದ್ಧರಿದ್ದೇವೋ ಇಲ್ಲವೇ ಎನ್ನುವದು ಮೊದಲೇ ಯೋಚಿಸಬೇಕು. ಆಹಾರ, ಮತ್ತು ನೀರು, ಜೀವನಾವಶ್ಯಕ ವಸ್ತುಗಳಿಗೆ ತಮ್ಮ ದೇಹ ಸದೃಢವಾಗಿದೆಯೋ ಇಲ್ಲವೋ ಎನ್ನುವದು. ಇಂತಹ ಅನೇಕ ಯೋಚನೆಗಳು ಮೊದಲೇ ಮಾಡಿಕೊಳ್ಳಬೇಕು ಹೊರತು ಬೆಟ್ಟದ ಮೇಲೆ ಮನೆಯನ್ನು ಕಟ್ಟಿದ ಮೇಲೆಲ್ಲ ಕಟ್ಟಿದ ಮೇಲೆ ಹೀಗೆ ಹೇಳಿದರೆ ತನ್ನ ಅಜ್ಞಾನವನ್ನು ಬಿಚ್ಚಿಟ್ಟಿದಂತೆ ಆಗುತ್ತದೆ.

ಸಮುದ್ರದ ದಡಿಯಲೊಂದು ಮನೆಯ ಮಾಡಿ ಅಲ್ಲಿ ಬರುವ ನೊರೆ ತೊರೆಗಳು ಕಂಡು ಹೆದರಿಕೆ ಉಂಟಾಗುತ್ತದೆ ಎಂದು ಹೇಳುವುದು ಸರಿಯೇ? ಸಮುದ್ರ ಮತ್ತು ಅದರಲ್ಲಿ ಏಳುವ ಅಲೆಗಳು ಎರಡು ಒಂದೇ ನಾಣ್ಯದ ಎರಡು ಮುಖಗಳಂತೆ. ಸಮುದ್ರದ ಆಳ ಅಗಲ ಹೇಗೆ ಯಾರು ತಿಳಿದಲ್ಲವೋ ಹಾಗೆ ಅಲ್ಲಿ ಹುಟ್ಟುವ ಅಲೆಗಳ ರಭಸವು ಯಾರು ಅರಿತಿಲ್ಲ. ಸಮುದ್ರದ ರಭಸಕ್ಕೆ ಸುನಾಮಿಗಳು ಏಳುತ್ತವೆ. ಊರಿಗೆ ಊರೆ ಕೊಚ್ಚಿಕೊಂಡು ಹೋಗುತ್ತದೆ. ಹೀಗಾರುವಾಗಿ ಅಲ್ಲಿ ಮನೆಯೆ ಮಾಡಬೇಕೆಂದರೆ ಎಂತಹ ಮನೆ ಮಾಡಬೇಕು. ಅಲ್ಲಿನ ತೊಂದರೆಗಳು, ಸೌಲಭ್ಯಗಳು ಮೊದಲೇ ಅರಿತಿರಬೇಕು. ಮನೆಯ ಕಟ್ಟಿ ವಾಸ ಮಾಡಿದ ನಂತರ ಅಲ್ಲಿ ಮೀನು, ಮೋಸಳಸೆಗಳು ಇರುತ್ತವೆ. ಮೀನಿನ ವಾಸನೆ ಆಗುವದಿಲ್ಲ, ಇಂತಹ ಯಾವದೇ ತೊಂದರೆ ಹೇಳಬಾರದು ಏಕೆಂದರೆ ನಾವು ಇಷ್ಟ ಪಟ್ಟರೇ ಅಲ್ಲಿರುವ ಕಷ್ಟಗಳೀಗೂ ಹೊಂದಿಕೊಂಡು ಇರಬೇಕಾಗುತ್ತದೆ. ಎಂಬುವದು ಪೂರ್ವದಲ್ಲಿ ತಿಳಿದಿರಬೇಕು.

ಇಂತಹದ ಇನ್ನೊಂದು ಉಪಮೆಯವೆಂದರೆ ಸಂತೆಯೊಳಗೊಂದು ಮನೆಯ ಮಾಡಿ ಶಬ್ದಗಳಿಗೆ ಹೆದರಿದರೆ ಹೇಗೆ? ಶಾಂತವಾಗಿ ಇರುವದು ಧ್ಯಾನಮಂದಿರ, ಸದ್ದು ಇರುವದೇ ಸಂತೆ, ಶಾಂತವಾದ ಸಂತೆ ಎಲ್ಲಿಯಾದರೂ ನಡೆಯುವದೇ ಇಂತಹ ಸಂತೆಯಲ್ಲಿ ಮನೆಯ ಕಟ್ಟಬೇಕಾದರೆ ಮೊದಲೇ ಯೋಚನೆಮಾಡಬೇಕು. ಅಂದರೆ ಇಲ್ಲಿ ಹೇಳುವ ತಾತ್ಪರ್ಯವೆನೆಂದರೆ ಯಾವುದೇ ವಿಷಯವಾದರು ದುಡಿಕಿ ನಿರ್ಧಾರ ತೆಗೆದುಕೊಳ್ಳಬಾರದು. ಸಮಾಧಾನದಿಂದ ಯೋಚನೆ ನಿರ್ಧರಿಸಬೇಕು. ನಿರ್ಧರಿಸಿದ ನಂತರ ಯೋಚಿಸಬಾರದು ಎಂಬುವದನೇ ಅಕ್ಕಮಹಾದೇವಿ ತನ್ನ ಈ ವಚನದಲ್ಲಿ ಹೇಳಿದ್ದಾಳೆ.

ಹಾಗಾಗಿಯೇ ನಾವು ಈ ಲೋಕದಲ್ಲಿ ಹುಟ್ಟಿ ಬಂದಿದ ಮೇಲೆ ಸುತ್ತಿ ನಿಂದೆಗಳಿಗೆ, ಹೊಗಳಿಕೆ-ತೆಗಳಿಕೆಗಳಿಗೆ ಯಾವುದೇ ರೀತಿಯಲ್ಲಿ ಕಿವಿ ಗೊಂಡದೆ ನಾವು ಇವೆಲ್ಲವನ್ನು ಸಮಾಧಾನವಾಗಿ ಸ್ವೀಕರಿಸುತ್ತಾ ಮುನ್ನಡೆಯಬೇಕು ಎಂದು ಹೇಳಿದ್ದಾಳೆ. ಈ ಸಮಾಧಾನ ಎನ್ನುವ ಪದ ಇದೆಯಲ್ಲ ಅದು ಅಷ್ಟು

ಸುಲಭವಾಗಿ ಸರಳವಾಗಿ ನುಡಿದಷ್ಟು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆಯಲು ಸಾಧ್ಯವಾಗುವುದಿಲ್ಲ.

ಈ ಸಮಾಧನದ ಸ್ಥಿತಿ ಸ್ಥಾಪಿಸಿಕೊಳ್ಳುವುದಕ್ಕೆ ಯೋಗಧಾನ್ಯ, ಜಪ-ತಪಗಳಿಗೆ ಮೌನ ವ್ರತಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಆದರೂ ಸಮಧಾನ ಸ್ಥಿತಿ ಬರುತ್ತದೆಂದು ಹೇಳು ಬರುವದಿಲ್ಲ. ಈ ಗಟ್ಟಿತನದ ಮಾನಸಿಕ ಸ್ಥಿತಿಯನ್ನು ನಾವೇಲ್ಲೂ ಯಾವ ಪುರುಷನಲ್ಲೂ ಕಾಣಲು ಸಿಗುವುದಿಲ್ಲ. ಇದನ್ನು ಕಂಡು ಬರುವದು ಶರಣೆ ಅಕ್ಕಮಹಾದೇವಿಯಲ್ಲಿ ಮಾತ್ರ. ಅವಳು ಇಂತಹ ನಿಂದನೆಗಳು ಹೆಜ್ಜೆ ಹೆಜ್ಜೆಗೂ ಎದುರಿಸಿದ್ದಾಳೆ. ಆದರು ಅದಕ್ಕೆ ಉತ್ತರ ನೀಡಿರುವದಲ್ಲವೂ ಆತ್ಮಾವಿಶ್ವಾಸದಿಂದ ಆಡಿದ ಸಮಾಧಾನ ನುಡಿಗಳೇ. ಇಲ್ಲಿವರೆಗೆ ಅಕ್ಕಮಹಾದೇವಿ ೪೩೦ ವಚನಗಳನ್ನು ದೊರೆತಿವೆ. ಅವುಗಳೆಲ್ಲಿಯೂ ಸಮಾಜಕ್ಕೆ ಕೋಪದಿಂದ ನುಡಿದ ಕಠೋರದ ಒಂದು ಪದವಿಲ್ಲ. ಎಲ್ಲರನ್ನು ಅಪ್ಪ, ಅಣ್ಣಾಗಳಿರಾ ಎಂದು ಸಂಬೋಧಿಸಿರುವುದು ಕಾಣಿಸಿಗುತ್ತದೆ. ಸಮಾಜ ಹೆಣ್ಣನ್ನು ನಡೆಸುವ ರೀತಿ, ನುಡಿಸುವ ರೀತಿಗೆ ವಿರುದ್ಧವಾಗಿ ತಕ್ಕ ಉತ್ತರ ನೀಡಿದರು ಸಮಧಾನದ ಸಮಾಧಿ ಸ್ಥಿತಿಯಲ್ಲಿ ಉತ್ತರ ನೀಡುತ್ತಾ ಮುಂದೆ ನಡೆಯುತ್ತಾಳೆ. ಅಕ್ಕಮಹಾದೇವಿ ತಾನು ಹೆಣ್ಣಾಗಿರುವದಕ್ಕೆ ಅನೇಕ ತೊಂದರೆಗಳು, ತೊಡಕುಗಳು ಎದುರಿಸಿದ್ದಾಳೆ. ಸಮಾಜದಲ್ಲಿ ಅಸಮಾನತೆಯಿಂದ ಬೆಂದು ಬಳಲಿದ್ದಾಳೆ, ಎಂಬುವದನ್ನು ಅವಳ ಅನೇಕ ವಚನಗಳಲ್ಲಿ ವ್ಯಕ್ತವಾಗುತ್ತವೆ. ಅವಳಿಗೂ ಸಮಾಜದೊಳಗಿನ-ಹೆಣ್ಣುಗಂಡಿನ ಬೇಧವನ್ನು ಅವಳ ಮನಸ್ಸು ಕೆದಕಿದೆ, ಎಂಬುದನ್ನು ವಚನಗಳಲ್ಲಿ ವ್ಯಕ್ತವಾಗಿದೆ. ಆ ವಚನಗಳು ಹೀಗಿವೆ.

"ಹೆಣ್ಣು ಹೆಣ್ಣಾದರೆ ಗಂಡಿನ ಸೂತಕ
ಗಂಡು ಗಂಡಾದರೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದೆಡೆ
ತನುದಿನ ಸೂತಕ ತೆರಹುಂಟೆ?
ಅಯ್ಯಾ ಮೊದಲಿಲ್ಲದ ಸೂತಕ ಮರುಳಾಯಿತ್ತು ಜಗವೆಲ್ಲ
ಎನ್ನುದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ"[೩]

ಈ ವಚನನದಲ್ಲಿ ಅಕ್ಕ ಮಹಾದೇವಿಯ ಮನಸ್ಸನ್ನು ಕಾಡಿದ ಪ್ರಮುಖ ಅಂಶಗಳವೆಂದರೆ ಹೆಣ್ಣು ಗಂಡಿನ ಸೂತಕ. ಒಂದು ಜೈವಿಕತೆಯ ಭೋಗದ ನೆಲೆಯಲ್ಲಿ ಇದ್ದು ಮನುಷ್ಯನನ್ನು ಕಾಡಿರುವದು ಹೆಣ್ಣಿಗೆ-ಗಂಡು, ಗಂಡಿಗೆ-ಹೆಣ್ಣು ಇದನೇ ಅವಳು ಮನದ ಸೂತಕವೆಂದು ಹೇಳುತ್ತಾಳೆ.

ಸಾಮಾನ್ಯವಾಗಿ ಯಾರಲ್ಲಿ ಯಾವುದರ ಕೊರತೆಯಿದೆಯೋ ಅದನ್ನು ಅಪೇಕ್ಷಿಸಲಾಗುತ್ತದೆ. ಇದನ್ನೆ ಅವಳು ಸೂತಕ ಎನ್ನುತ್ತಾಳೆ. ಸೂತಕವೆಂದರೆ ಸಾಮಾನ್ಯವಾಗಿ ಮೈಲಿಗೆ, ಅಶುದ್ಧ, ದೋಷ ಎಂದು ಕರೆಯುತ್ತಾರೆ ಆದರೆ ಇಲ್ಲಿ ಹೆಣ್ಣಾದರೆ ಗಂಡಿನ ದೋಷ ಕಾಡುತ್ತದೆ. ಗಂಡದಾರೆ ಹೆಣ್ಣು ದೋಷ ಕಾಡುತ್ತದೆ. ಇವು ಎಲ್ಲಿ ಹುಟ್ಟಿಕೊಳ್ಳುವುದೆಂದರೆ ಮನದಲ್ಲಿ ಹುಟ್ಟುವ ದೋಷವಾಗಿದೆ. ಈ ಮನದ ದೋಷಗಳು ತಿಳಿದ

ನಂತರ ತನುವಿನ ದೋಷವಾಗಿ ಭಿನ್ನ ಭಾವದಲ್ಲಿ ತೆರೆದುಕೊಳ್ಳುತ್ತದೆ. ಈ ಮೊದಲಾದ ಸೂತಕಗಳಿಗೆ ಜಗವೆಲ್ಲ ಮರುಳಾಗಿದೆ ಎಂದು ಅಕ್ಕಮಹಾದೇವಿ ಹೇಳುತ್ತಾಳೆ.

ಅಂದಿನ ಕಾಲಘಟ್ಟ ಹಾಗೂ ಸಮಾಜವನ್ನು ದೃಷ್ಟಿಯಲ್ಲಿರಿಸಿ ನೋಡಿದ ಅಕ್ಕಮಹಾದೇವಿಯ ಈ ಮಾತುಗಳು ತುಂಬಾ ಗಮನಾರ್ಹವಾದವುಗಳು. ಏಕೆಂದರೆ ಗಂಡು ಹೆಣ್ಣೆನುವುದು ಮನಸ್ಥಿತಿ. ಈ ಮಾನಸಿಕ ಸ್ಥಿತಿಯನ್ನೇ ತಾರ್ಕಿಕ ನೆಲೆಯಲ್ಲಿ ಸ್ತ್ರೀಯಾಗಿ ಅಕ್ಕ ಎದುರಿಸಿದ ಮಾನಸಿಕ ತಲ್ಲಣ, ಸಮಸ್ಯೆ, ಹೊಯ್ದಾಟ ಮತ್ತು ಹೋರಾಟಗಳು ಆಕೆಯ ವಚನಗಳಲ್ಲಿ ಸಾಕಷ್ಟು ತೀವ್ರವಾಗಿ ಕಾಣಿಸಿಕೊಂಡಿವೆ. ಸಮಾಜ ಹೆಣ್ಣನ್ನು ಕೇವಲ ಹೆಣ್ಣು ದೇಹವಾಗಿ ಕಾಣಲಾಗುತ್ತದೆ. ಹಾಗೇ ನೋಡಿದರೆ ಹೆಣ್ಣು ಹುಟ್ಟುವಾಗ ಹೆಣ್ಣಾಗಿ ಹುಟ್ಟುವುದಿಲ್ಲ, ಸಮಾಜ ಅವಳನ್ನು ಹೆಣ್ಣಾಗಿ ಮಾರ್ಪಡಿಸುತ್ತದೆ.

ಒಂದು ಮಗು ಹುಟ್ಟಿದಾಕ್ಷಣ ಅದು ಹೆಣ್ಣೋ, ಗಂಡೋ ಎಂದು ಕೇಳಿ ತಿಳಿದುಕೊಳ್ಳಲಾಗುತ್ತವೆ. ಅದರಲ್ಲಿ ಯಾವುದೇ ಬೇಧವಿರುವುದಿಲ್ಲ, ಬೆಳೆ ಬೆಳೆಯುತ್ತಾ ಕೂಡ ಎರಡು ಮೂರು ವರ್ಷಗಳವರೆಗೂ ಯಾಪ ಬೇಧವೂ ಇರುವುದಿಲ್ಲ. ಮುಂದೆ ಬೆಳೆದಂತೆಲ್ಲ ಹೆಣ್ಣಿಗೆ ಬಟ್ಟೆ ಭಿನ್ನವಾಗುತ್ತವೆ. ನೀಡುವ ಆಟದ ಸಾಮಾನುಗಳು ಬೇರೆಯಾಗಿರುತ್ತವೆ. ಹೀಗೆ ಹಂತ ಹಂತವಾಗಿ ಅವಳ ಮೇಲೆ ಒಂದೊಂದೇ ನಿಯಮ ಚೌಕಟ್ಟನ್ನು ಹಾಕಿ ಅದಕ್ಕೆ ಹೊಂದಿಕೊಳ್ಳುವಂತೆ ಮಾರ್ಪಡಿಸಲಾಗುತ್ತವೆ. ಹೆಚ್ಚು ಮಾತನಾಡಬಾರದು, ನಗಬಾರದು, ಹೊರಗಡೆ ಹೋಗಬಾರದು ಇಂತಹದೇ ತೊಡಬೇಕು, ಕುಂಕುಮವೇ ಇಡಬೇಕು ಮುಂತಾದವು ಹೆಣ್ಣಿನ ಮೇಲೆ ಹೇರಲ್ಪಡುತ್ತವೆ. ಅವಳಲ್ಲಿ ಇರುವ ಜ್ಞಾನ, ಪ್ರತಿಭೆ, ಧೈರ್ಯ, ಸಾಮರ್ಥ್ಯಗಳನ್ನು ಕಡೆಗಣಿಸಲಾಗುತ್ತದೆ. ಹೀಗೆ ಹೆಣ್ಣನ್ನು ಅವಳ ವ್ಯಕ್ತಿತ್ವದ ಇತರ ಆಯಾಮಗಳನ್ನು ಮರೆತು ಗುರುತಿಸಲಾಗುತ್ತದೆ. ಎನ್ನುವುದಕ್ಕೆ ಅಕ್ಕಮಹಾದೇವಿಯ ಜೀವನ ವೃತ್ತಾಂತ ಉತ್ತಮ ಉದಾಹರಣೆಯಾಗಿದೆ.

ಸ್ತ್ರೀತ್ವ ಎನ್ನುವುದು ಹೆಣ್ಣಿನ ಸಾಧನೆಗೆ ಅಡ್ಡಿಯಾಗಬೇಕಾಗಿಲ್ಲ ಎನ್ನುವುದಕ್ಕೆ ಅಕ್ಕಮಹಾದೇವಿ ಸ್ಫೂರ್ತಿಯಾಗಿದ್ದಾಳೆ. ಹೀಗೆ ಹೆಣ್ತನಕ್ಕೆ ಸಮಾಜ ಹೊರಿಸಿದ ಇತಿಮಿತಿಗಳನ್ನು ಮೀರುವ, ಮೀರಿದ್ದನ್ನು ಹೇಳುವ ಪ್ರಯತ್ನವು ಅಕ್ಕನಲ್ಲಿದೆ. ಅದಲ್ಲದೇ ಸಮಾಜಕ್ಕೆ ಅಷ್ಟೊಂದು ಪರಿಚಯವಿಲ್ಲದ ಸ್ತ್ರೀ ಬದುಕಿನ ಹೊಸ ರೀತಿಯನ್ನು ಬಿಚ್ಚಿಡುವಲ್ಲಿ ಅಕ್ಕನ ಸತತ ಪ್ರಯತ್ನವಿದೆ. ಹೋರಾಟದ ಸಾಧನೆಯಿದೆ ಎಂದೇ ಹೇಳಬಹುದು.

"ಪುರುಷನ ಮುಂದೆ ಮಾಯೆ,
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು,
ಸ್ತ್ರೀಯ ಮುಂದೆ ಮಾಯೆ, ಪುರುಷನೆಂಬ
ಅಭಿಮಾನವಾಗಿ ಕಾಡಿತ್ತು
ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ
ಮರುಳಾಗಿ ತೋರುವುದು
ಚನ್ನಮಲ್ಲಿಕಾರ್ಜುನನೊಲಿದ ಶರಣರಿಗೆ ಮಾಯೆಯಿಲ್ಲ
ಮರೆಹಿಲ್ಲ ಅಭಿಮಾನವು ಇಲ್ಲ"[9]

ಇದುವರೆಗೆ ಸಾಹಿತ್ಯ ಅಧ್ಯಾತ್ಮ ಮುಂತಾದ ಕಡೆಗಳೆಲ್ಲ ಪುರುಷರೇ ಆವರಿಸಿಕೊಂಡಿದ್ದರು. ಇವರು ಜಗತ್ತನ್ನು ಮಾಯೆ ಎಂದರು ಹೊನ್ನು ಮಣ್ಣು ಜೊತೆಗೆ ಹೆಣ್ಣನ್ನು, ಸೇರಿಸಿ ಮಾಯೆ ಎಂದರು. ಹೆಣ್ಣು, ಹೊನ್ನು ಮಣ್ಣು ಪುರುಷನ ಆಸ್ತಿ ಅಥವಾ ಸ್ವತ್ತು ಎಂಬಂತೆ ಮಾತಾಡಿದರು. ಹೆಣ್ಣಿಗೊಂದು ಅಸ್ತಿತ್ವ ಮನಸ್ಸು ವಿಚಾರ ಸ್ವಾತಂತ್ರ್ಯ ಇದೆ ಂಬುದನ್ನು ಯಾರು ಆಲೋಚಿಸಲೇ ಇಲ್ಲ. ಹೊನ್ನು ಕಣ್ಣಳತೆಯಲ್ಲಿ ಹೆಣ್ಣು ತನ್ನ ಉಪಯೋಗದ ವಸ್ತು ಎಂಬಂತೆ ನಡೆದುಕೊಂಡರು ಹೆಣ್ಣನ್ನು ಆಸ್ತಿಯಂತೆ ಇತರರಿಗೆ ವರ್ಗಾಯಿಸಬಹುದು. ಹೆಣ್ಣನ್ನು ವಿಲೇವಾರಿ ಮಾಡಿದರು. ಗಂಡಸು ಎಷ್ಟು ಹೆಣ್ಣನ್ನು ಬೇಕಾದರೂ ಉಪಭೋಗ ಮಾಡಬಹುದು ಎಂದು ತಿಳಿದರು. ಇಂತಹ ಎಲ್ಲಾ ಆಲೋಚನೆಗಳನ್ನು ಪ್ರಶ್ನಿಸಿ, ಧಿಕ್ಕರಿಸಿ ಪುರುಷನಂತೆ ತನಗೂ ಒಂದು ಅಸ್ತಿತ್ವ, ಸ್ವಾತಂತ್ರ್ಯ, ಚಿಂತನೆ ಇದೆ ಎಂಬುದನ್ನು ತೋರಿಸಿಕೊಟ್ಟು ಪುರುಷನ ಕಪಿಮುಷ್ಠಿಯಿಂದ ಹೊರಬಂದು ಸ್ತ್ರೀಗೆ ಸ್ವಾತಂತ್ರ್ಯ ತಂದು ಕೊಟ್ಟ ಮಹಿಳೆ ಅಕ್ಕಮಹಾದೇವಿ.

ಸಮಜ ಹೆಣ್ಣನ್ನು ಕಾಮದ ದೃಷ್ಟಿಯಲ್ಲಿ ನೋಡುತ್ತದೆ. ತುಂಬು ಯವ್ವನದಲ್ಲಿ ದಿಗಂಬರೆಯಾಗಿ ಹೋರಟ ಅಕ್ಕಮಹಾದೇವಿ ಹೆಣ್ಣಿನ ಕಾಮವನ್ನು ಬಯಸಬೇಡಿ ಎಂದು ಹೇಳುವ ನುಡಿಗಳು ತುಂಬಾ ಮಾರ್ಮಿಕವಾಗಿವೆ.

"ವಿಷಯದ ಸುಖ ವಿಷವೆಂದರಿಯದ ಮರುಳೆ
ವಿಷಯಕ್ಕೆ ಅಂಗ ವಿಸದಿರಾ
ವಿಷಯದಿಂದ ಕೆಡನೆ ರಾವಣನು?
ವಿಷಯದಿಂದರು ಕೆಡರು ಮರುಳೆ?
ವಿಷಯ ನಿರ್ವಿಷಯವಾಯಿತ್ತೆನಗೆ ನಿನ್ನಲ್ಲಿ
ಚೆನ್ನಮಲ್ಲಿಕಾರ್ಜುನಂಗೆ ಒಲಿದವಳ ನೀನಪ್ಪಿಹೆನೆಂದೆಡೆ
ಒಣಗಿದ ಮರನಪ್ಪುವಂತೆ ಕಾಣಾ"[3]

ಇಲ್ಲಿ ಹೆಣ್ಣಿನ ಕಾಮ ಅಥವಾ ಭೋಗದಭಿಲಾಷೆಯ ಸುಖ ವಿಷವೆಂದು ತಿಳಿಯಿರಿ ತಿಳಿಗೇಡಿಗಳೇ ಈ ಕಾಮವನ್ನು ನೀವು ಬಯಸದಿರಿ. ಇದರಿಂದ ಸುಖವು ಸಿಗುವುದು ಕಡಿಮೆ, ಆದರೆ ಅದರಿಂದ ಆಗುವ ತೊಂದರೆಗಳೆ ಅನೇಕವಾಗಿವೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದು:ಖ ಕಾಣು ಎಂಬುವಂತೆ ಮುಂದೆ ಕಷ್ಟಗಳೇ ಹೆಚ್ಚಾಗಿ ಎದುರಿಸಬೇಕಾಗುತ್ತದೆ. ಈ ಸುಖವನ್ನೇ ಬಯಸಿದ ರಾವಣ ಏನಾದ ಏಂದು ನಿಮಗೆ ತಿಳಿದಿಲ್ಲವೇ. ಸೀತೆಯನ್ನು ಅಪಹರಿಸದಿದ್ದರೆ ರಾವಣ ಒಬ್ಬ ಶ್ರೇಷ್ಠ ಬ್ರಾಹ್ಮಣ. ಮತ್ತು ಒಬ್ಬ ಒಳ್ಳೆಯ ಅಸುರನೆಂದು ಪ್ರಸಿದ್ದಿ ಪಡೆಯುತ್ತಿದ್ದ. ಬಲಿ ರಾಜನಂತೆ ಇತನನ್ನು ಪೂಜಿಸಲ್ಪಡುತ್ತಿದ್ದನು, ಆದರ್ಶವಾಗಿ ನಿಲ್ಲುವ ವ್ಯಕ್ತಿತ್ವ ಹೊಂದಿರುತ್ತಿದ್ದನು.ಅವನು ಅವನ ಜೀವನದಲ್ಲಿ ಮಾಡಿದ ಅತೀ ದೊಡ್ಡ ತಪ್ಪೇನೆಂದರೆ ಸೀತೆಯ ಅಪಹರಣ. ಇದು ಅವನಲ್ಲಿ ಇರುವ ಸಾವಿರ ಸಾವಿರ ಒಳ್ಳೆಯತನ ಮುಚ್ಚಿಬಿಟ್ಟಿದೆ. ವಿವಾಹಿತ ಸ್ತ್ರೀ ಅಥವಾ ಸ್ತ್ರೀಯನ್ನು ಅಪಹರಿಸಿದಾತ ಎಂದು ಕಪ್ಪು ಚುಕ್ಕೆಯಿಂದಲೇ ಅವನನ್ನು ಗುರುತಿಸಲಾಗುತ್ತದೆ. ಮತ್ತು ತಾನೇ ಬೆಳೆಸಿದ ಸಾಮ್ರಾಜ್ಯವನ್ನು ಸರ್ವನಾಶ ಮಾಡಿಕೊಂಡನು.

ಇದೇ ರೀತಿ ದೇವೇಂದ್ರನ ಒಂದು ಉದಾಹರಣೆಯನ್ನು ನೀಡುತ್ತ, ದೇವೇಂದ್ರನು ಅಹಲ್ಯೆಯನ್ನು ಮೋಹಿಸಿ ಮೋಸದಿಂದ ಒಲಿಸಿಕೊಳ್ಳಲು ಹೋಗಿ ಹಾಳಾದ. ಇದೆಲ್ಲವು ತಿಳಿದು ಕೂಡ ವಿಷಯ (ಕಾಮ)ದ

ವಿಷದಿಂದ ಏಕೆ ಹಾಳಾಗುವಿರಿ, ಈ ವಿಷದಿಂದ ಯಾರು ಕೆಡರು? ತಿಳಿದು ತಿಳಿದು ಬಯಸುವಿರಿ ಏಕೆ ಎಂದು ಈ ವಚನದಲ್ಲಿ ಪ್ರಶ್ನಿಸುತ್ತಾಳೆ.

ಈ ವಚನ ಇಂದಿನ ಆಧುನಿಕ ಕಾಲಕ್ಕೂ ಹೆಚ್ಚು ಪ್ರಸ್ತುತವೆನಿಸಿಕೊಳ್ಳುತ್ತದೆ ಮತ್ತು ಪ್ರಮುಖವು ಆಗಿದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ದಿನೇದಿನೇ ಹೆಚ್ಚಾಗುತ್ತಿರುವ ಪ್ರಕರಣಗಳು ಕೇಳುತ್ತಿದ್ದೇವೆ ಮತ್ತು ನೋಡುತ್ತಿದ್ದೇವೆ. ಅದರಿಂದ ಹೆಣ್ಣಿಗೆ ಅವಮಾನ, ಅಪನಿಂದನೆಗಳು, ಚುಚ್ಚುಮಾತುಗಳು ಕೇಳಿ ಬರುತ್ತಿವೆ. ಆದರೂ ಅವು ಕಡಿಮೆಯಾಗುತ್ತಿಲ್ಲ ಏಕೆಂದರೆ ಇದು ಪುರುಷ ಪ್ರಧಾನ ಸಮಾಜ ಇಲ್ಲಿ ಪುರುಷರಿಗೆ ಯಾವ ಹಾನಿಯೂ ಆಗುವುದಿಲ್ಲ.ಪುರುಷ ಅತ್ಯಾಚಾರ ಮಾಡಿದರೆ ಕೊಲೆ ಮಾಡಿದರೆ ಅದು ಅವನ ಪೌರುಷದ ಸಂಕೇತವಾಗಿ ನಿಲ್ಲುತ್ತವೆ. ಈ ಪುರುಷ ಪ್ರಧಾನ ಸಮಾಜದಲ್ಲಿ. ಮತ್ತೇ ಮತ್ತೇ ಮಹಿಳೆಯೇ ನೋವು ಅನುಭವಿಸುವವಳಾಗಿದ್ದಾಳೆ.ಸಮಾಜ ಅವಳನ್ನೇ ಹೀನಾಯ ದೃಷ್ಟಿಯಿಂದ ಕಾಣಲಾಗುತ್ತದೆ. ಹಾಗಾಗಿ ಅಂತಹ ಎಷ್ಟೋ ಪ್ರಕರಣಗಳು ಹೊರಬರದೇ ಮುಚಿಡಲ್ಪಡುತ್ತವೆ, ಅಥವಾ ಧ್ವನಿಯೇ ಹೊರಬರುವುದಿಲ್ಲ.ಇಲ್ಲಿ ಅಪರಾಧ ಮಾಡಿದ ಪುರುಷನಿಗೆ ಇನ್ನೊಂದು ಅವಕಾಶ ನೀಡಲಾಗುತ್ತದೆ ಇದು ನಮ್ಮ ಸಮಾಜದಲ್ಲಿರುವ ದುರಂತವೇ ಸರಿ.

ಈ ನಮ್ಮ ಸಮಾಜದಲ್ಲಿ ತಪ್ಪು ಮಾಡುತ್ತಿರುವಾಗ ತಿದ್ದಿ ಬುದ್ದಿಮಾತುಗಳು ಹೇಳುವರು ಇದ್ದಾರೆ ಅದನ್ನು ಕೇಳಿ ಪಾಲಿಸುವುದಾಗಲೀ,ಅದನ್ನು ಕೇಳುವರು ಆ ಮಾತುಗಳು ಅಳವಡಿಸಿಕೊಳ್ಳುವರು ಯಾರು ಎಂಬಂತ್ತಾಗಿದೆ. ಇಂತಹ ಒಂದು ವಚನ ಅಕ್ಕನಲ್ಲಿ ಕಾಣಲು ಸಿಗುತ್ತದೆ. ಆ ವಚನ ಹೀಗಿದೆ:

"ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಳಗಣ ವಿಷದ ಬಯಕೆ ಬಿಡದನ್ನೇಕೆ?
ಹಾಡಿದಡೇನು ಕೇಳಿದಡೇನು
ತನ್ನಲುಳ್ಳ ಅವಗುಣ ಬಿಡುದನ್ನಕ್ಕೆ?
ಒಳಗನರಿದು ಹೊರಗೆ ಮರೆದವರ ನೀ ಎನಗೆ
ತೋರ್ಯಯ್ಯ ಚೆನ್ನಮಲ್ಲಿಕಾರ್ಜುನ."[೬]

ಸರ್ಪವು ಕೊಳಲ ದನಿಗೆ ತಲೆದೂಗಿದಂತೆ ಬುದ್ದಿಮಾತಿಗೆ ತಲೆದೂಗಿದಾಕ್ಷಣ ಆತನೊಳಗಿನ ವಿಷಯದ ಬಯಕೆ ಹೋಗುವುದೆ? ಒಳ್ಳೆಯ ಗುಣ ಎಷ್ಟು ಹಾಡಿಹೇಳಿದರೇನು? ಕೇಳಿದರೇನು? ಅವನು ತನ್ನ ಒಳಗಿನ ಅವಗುಣ ಬಿಡಬೇಕು ಎನ್ನುವ ಬಲವಾದ ಬಯಕೆ ಅವನೊಳಗೆ ಇರಬೇಕು, ಇಲ್ಲದಿದ್ದರೆ ಕೋಣದ ಮುಂದೆ ಕಿನ್ನರಿ ಬಾರಿಸಿದಂತೆ ಆಗುತ್ತದೆ. ಆದರೆ ಎಲ್ಲವೂ ವ್ಯರ್ಥವಾಗಿ ಹೋಗುತ್ತದೆ.ಒಳಗೆ ಅರಿತು ಮತ್ತೆ ಹೊರಗೆ ಮರೆತಂತೆ ನಟಿಸಿ ಮತ್ತೆ ಅವೇ ಅವಗುಣಗಳೊಂದಿಗೆ ಮೆರೆಯುವರು.ಇಂತಹ ಸಾಮಾಜಿಕ ವಿಡಂಬನೆಯನ್ನು ಇಲ್ಲಿ ಹೇಳಿದ್ದಾಳೆ ಅಕ್ಕಮಹಾದೇವಿ.

"ಬಿಟ್ಟಿಹ ಮೊಲೆಯ ಭರದ ಜವ್ವನವ
ಚೆಲುವ ಕಂಡು ಬಂದಿರಣ್ಣಾ
ಅಣ್ಣಾ ನೀನು ಹೆಂಗಸಲ್ಲಾ
ಅಣ್ಣಾ ನಾನು ಸೂಳೆಯಲ್ಲ
ಅಣ್ಣಾ ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ
ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕದ ಪರ ಪುರುಷನು
ನಮಗಾಗದ ಮೊರೆ ನೋಡಣ್ಣಾ"[೭] ಎಂದು ಹೇಳುತ್ತಾಳೆ.

ಸಮಾಜ ಒಬ್ಬ ಒಂಟಿ ಹೆಣ್ಣು ರಸ್ತೆಯಲ್ಲಿ ಹೋಗುತ್ತಾಳೆ ಎಂದರೆ ಎಲ್ಲರ ಕಣ್ಣು ಅವಳ ಮೇಲೆಯೇ ನೆಟ್ಟಿರುತ್ತದೆ. ಅಂತಹದರಲ್ಲಿ ಒಬ್ಬ ಅಪ್ರತಿಮ ಸುಂದರಿ ,ತುಂಬು ಯವ್ವನದ ಹುಡುಗಿಯೊಬ್ಬಳು ಅಂಗದ ಮೇಲೆ ತುಂಡು ವಸ್ತ್ರವಿಲ್ಲದೆ ಹೋಗುತ್ತಿದ್ದರೆ ಕಾಮುಕರ ನೋಟ ಅವಳನ್ನು ಎಷ್ಟು ಕಾಡಿರಬಹುದು. ಈಗಿನ ಆಧುನಿಕ ಯುಗದಲ್ಲಿಯೇ ಒಂಟಿಯಾಗಿ ಹೆಣ್ಣನ್ನು ಪಕ್ಕದ ಮನೆಗೂ ಕಳುಹಿಸಲು ಹಿಂಜರಿಯುತ್ತಿದ್ದಾರೆ. ಹೀಗಿರುವಾಗ ೧೨ನೇ ಶತಮಾನದಲ್ಲಿನ ಅಕ್ಕಮಹಾದೇವಿಯ ಸ್ಥಿತಿ ಯಾವ ರೀತಿ ಇರಬೇಡ ಈ ಕಾಮುಕರ ಕಾಟವನ್ನು ಸಹಿಸದೇ ಹೇಗೆ ಅತಿ ವಿನಯದಿಂದ, ಸಹನೆಯಿಂದ, ಸಮಾಧಾನದ ಸ್ಥಿತಿಯಲ್ಲಿ ಕೇಳಿದ್ದಾಳೆ. ನನ್ನಲ್ಲಿ ಏನು ನೋಡಲು ಬಂದಿರುವಿರಿ, ನಾನು ಬಿಟ್ಟ ಮೊಲೆಯ ಭರದ ಜವ್ವನದ ಚೆಲುವು ಕಾಣಲು ಬಂದಿರುವಿರೇ ಅಣ್ಣಾ ಎಂದು ಕೇಳಿದ್ದಾಳೆ, ಅಣ್ಣಾ ಎಂದು ಗೌರವಿಸುತ್ತಾಳೆ. ನಾ ಸೂಳೆಯಲ್ಲ, ನಾ ಹೆಂಗಸಲ್ಲ ಆದರೂ ನೀವು ನನ್ನನ್ನು ಕಂಡು ಕಂಡು ಯಾರೆಂದು ಬಂದಿರಣ್ಣಾ?ಎಂದು ಪ್ರಶ್ನಿಸುತ್ತಾಳೆ. ಅವಳ ದೇಹ ಸೌಂದರ್ಯವನ್ನು ಕಾಣಲು ಜನ ಹೀಗೆ ಮುಗಿಬಿದ್ದು ಕಾಡಿದರು.ಸಹನೆಯ ಕಟ್ಟೆ ಎಲ್ಲಿಯೂ ಒಡೆದುಕೊಂಡವಳಲ್ಲ ಅಕ್ಕ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಒಬ್ಬ ಹೆಣ್ಣು ಪರ ಪುರುಷರ ಮುಂದೆ ತನ್ನ ಅಂಗಾಂಗಗಳ ಕುರಿತು ಮುಕ್ತವಾಗಿ ಮಾತನಾಡಿರುವುದು ಕಂಡರೆ ಬಂದವರು ಅವಳನ್ನು ಎಷ್ಟೇ ಕಾಡಿದರೂ ಸಮಾಜದ ಜನರೊಂದಿಗೆ ಮಾತನಾಡುವಾಗ ಅಣ್ಣಾ,ತಂದೆಗಳಿರಾ ಎಂದೇ ಸಂಭೋಧಿಸಿರುವುದು ಕಾಣುತ್ತೇವೆ. ಹೆಣ್ಣು ತನ್ನ ಪ್ರತಿಭಟನೆಯ ಆಕ್ರೋಶದ ನುಡಿಗಳನ್ನ ಅಷ್ಟೇ ಸೌಮ್ಯವಾಗಿ ಹೇಳಿರುವುದು ಮುಖ್ಯವಾಗಿ ಗುರುತಿಸಬೇಕು.ಇಂತಹ ಅನೇಕ ಕಾಟಗಳನ್ನು ಸಹಿಸಿಕೊಂಡವಳು ನಮ್ಮ ಅಕ್ಕಮಹಾದೇವಿ.

ಈ ಕಾಟಗಳನ್ನು ಎದುರಿಸಿ ಸೋತ ನುಡಿಗಳು ಕಂಡುಬರುತ್ತವೆ. ಆ ವಚನಗಳು ಇಂತಿವೆ

"ಮೊಲೆ ಬಿದ್ದು,ಮುಡಿ ಸಡಿಲ,ಗಲ್ಲ ಬತ್ತಿ ತೋಳ ಕಂದಿದವಳ,
ಎನ್ನನ್ನೇಕೆ ನೋಡುವಿರಿ ಎಲೆ ಅಣ್ಣಗಳಿರಾ?
ಕುಲವಳಿದು, ಛಲವಳಿದು, ಭವಗೆಟ್ಟು, ಭಕ್ತೆಯಾದವಳ
ಎನ್ನನೇಕೆ ನೋಡುವಿರಿ ಎಲೆ ತಂದೆಗಳಿರಾ?
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದು ಛಲವಳಿದವಳನು"[೮]

"ಮುಡಿಬಿಟ್ಟು, ಮೊಗಬಾಡಿತನು ಕರಗಿಸಿದವಳ
ಎನ್ನನೇಕೆ ನುಡಿಸುವಿರಿ?
ಎಲೆ ತಂದೆಗಳಿರಾ, ಬಲುಹಳಿದು ಭವಗೆಟ್ಟು
ಛಲವಳಿಮು ಭಕ್ತೆಯಾಗಿ
ಚೆನ್ನಮಲ್ಲಿಕಾರ್ಜುನನನ ಕೂಡಿಕುಲವಳಿದವಳ"[19]

ಈ ಕಾಮುಕರ ಕಾಟ ತುಂಬಾ ಜರ್ಜರಿತಳನ್ನಾಗಿ ಮಾಡಿ ಬಿಡುತ್ತದೆ. ತನ್ನ ಈ ಹೆಣ್ಣು ದೇಹ ತನಗೆ ಮಾರಕವೆನುವಂತೆ ಮಾಡಿದೆ ಪುರುಷ ಸಮಾಜ.

ಅಕ್ಕಮಹಾದೇವಿಯು ವೈರಾಗ್ಯದ ಮನಸ್ಥಿತಿಯುಳ್ಳವಳು ತನ್ನ ದೇಹ ಸೌಂದರ್ಯಕ್ಕೆ ಮನಸೋತ ಕೌಶಿಕ ರಾಜನ ಕಾಟ ತಾಳಲಾರದೇ ಅರಮನೆಯಿಂದ ಹೊರಗೆ ಬಂದಿದ್ದವಳು, ಆದರೆ ಈ ಹೊರ ಜಗತ್ತು ಅವಳಿಗೆ ಸುಖದ ಸುಪೋತ್ತಗೆಯಾಗಿರಲಿಲ್ಲ. ಬೆಂಕಿಯ ಮೇಲೆ ಕಾಲಿಟ್ಟಂತೆ, ಮುಳ್ಳಿನ ಹಾಸಿಗೆಯಾಗಿತ್ತು. ಹೊರ ಜಗತ್ತು ಕ್ಷಣಿಕವು ಶಾಂತಿಯಾಗಿ, ನೆಮ್ಮದಿಯಾಗಿ ಇರಲು ಬಿಡಲಿಲ್ಲ. ಏಕೆಂದರೆ ಅವಳನ್ನು ಇನ್ನಷ್ಟು ಕಾಮುಕರು ಬೆನ್ನಟ್ಟಿ ಬೇತಾಳದಂತೆ ಕಾಡಿದರು.ಇದನ್ನು ಸಹಿಸಿ ಸಹಿಸಿ ಸಾಕಾಗಿ ಮನನೊಂದು ಹೇಳಿದ ನುಡಿಗಳೇ ಈ ಮೇಲಿನ ಎರಡು ವಚನಗಳಲ್ಲಿ ವ್ಯಕ್ತವಾಗಿವೆ.

ಈ ಕಾಮುಕರ ಕಾಟದಿಂದ ಕುಗ್ಗಿ ಕುಗ್ಗಿ ಬೇಸತ್ತು ನನ್ನನ್ನು ಏಕೆ ನೋಡುವಿರಿ ಅಣ್ಣಗಳಿರಾ ನನ್ನ ದೇಹ ಸೌಂದರ್ಯ ಮಾಸಿಹೋಗಿದೆ, ನನ್ನ ಮೊಲೆ ಬಿದ್ದು, ಮುಡಿ ಸಡಿಲಗೊಂಡು, ಗಲ್ಲ ಬತ್ತಿ ಹೋಗಿವೆ ನಾನು ಬಲವಳಿದು ಭವಗೆಟ್ಟು ಛಲವಳಿದ ಭಕ್ತೆಯಾಗಿದ್ದೇನೆ. ನಾನು ಚೆನ್ನಮಲ್ಲಿಕಾರ್ಜುನ ಕುಲದವಳು ಎಂದು ನುಡಿದಿದ್ದಾಳೆ. ನಾ ಈ ಸೋತು ಹೋಗಿದ್ದೇನೆ ಎನ್ನುವ ಭಾವ ವ್ಯಕ್ತಪಡಿಸುತ್ತಾಳೆ.

ಹೆಣ್ಣೆಂದರೆ ಅವಳು ಪರಾವಲಂಬಿ ಜೀವಿ ಅವಳಗೆ ಧೈರ್ಯವಾಗಿ ಯಾರಾದರೂ ಜೊತೆಗೆ ಒಬ್ಬರು ಇರಬೇಕು. ಇಂತಹ ಅನೇಕ ತಪ್ಪು ಕಲ್ಪನೆಗಳು ನಮ್ಮಲ್ಲಿವೆ.ಯಾರೂ ಇಲ್ಲದ ಒಂಟಿ ಹೆಣ್ಣನ್ನು ನೋಡಿ ಮಾತನಾಡಿಕೊಳ್ಳುವರೇ ಹೆಚ್ಚು. ಅಕ್ಕಮಹಾದೇವಿಯು ಒಂಟಿಯಾಗಿ ಕಲ್ಯಾಣಕ್ಕೆ ಹೊರಟಾಗ ಅನೇಕ ಕೊಂಕು ನುಡಿಗಳು ಎದುರಿಸುತ್ತಾಳೆ. ಆದರೂ ತಾನು ಅಂಜುವಳಲ್ಲ ಎಂದು ನುಡಿದ ವಚನವು ಹೀಗಿದೆ:

"ಆರೂ ಇಲ್ಲದಳೆಂದು ಆಳಗೊಳಲು ಬೇಡಕಂಡೆಯ್ಯಾ
ಏನು ಮಾಡಿದಡೂ ಆನಂಜುವಳಲ್ಲ
ತರಗೆಲೆಯ ಮೆಲೆದು ಆನಿಹೆನು
ಚೆನ್ನಮಲ್ಲಕಾರ್ಜುನಯ್ಯಾ ಕರ ಕೆಡನೊಡ್ಡಿದಡೆ
ಬಿಡಲನು ಪ್ರಾಣವನ್ನು ನಿಮಗರ್ಪಿಸಿ ಶುದ್ಧಳೆಹನು"[20]

ಇಲ್ಲಿ ಅಕ್ಕಮಹಾದೇವಿ 'ನಾ ಅಂಜುವಳಲ್ಲ'ಏಕೆ ಏನ್ನುವುದನ್ನು ಅವಳು ಇಲ್ಲಿ ಹೇಳಿದ್ದಾಳೆ. 'ಯಾರು ಇಲ್ಲವೆಂದು ನೀವೆಲ್ಲ ಆಡಿಕೊಳ್ಳಬೇಡಿ, ಏನು ಮಾಡಿದರೂ ತಾನು ಅಂಜುವಳಲ್ಲ'.ಇಲ್ಲಿ ಅವಳ ಮನಸ್ಸು ಇನ್ನೂ ಗಟ್ಟಿಯಾಗಿಯೇ ಇದೇ ಎಂಬ ಭಾವ ವ್ಯಕ್ತವಾಗುತ್ತದೆ. ಯಾರು ಇಲ್ಲವೆಂದು ಯಾರು ಏನು ಆಡಿಕೊಂಡರು ನಾ ಅಂಜುವುದಿಲ್ಲ ಎಂದು ನೇರವಾಗಿ, ಸ್ಪಷ್ಟವಾಗಿ ಈ ಮೇಲಿನ ಎರಡು ಸಾಲುಗಳಲ್ಲಿ

ವ್ಯಕ್ತವಾಗಿವೆ. ಒಣಗಿದ ಎಲೆಯ ಮೇಲೆ ನಾ ಇರುವೆನು ಇಲ್ಲಿ ಎರಡು ಭಾವ ವ್ಯಕ್ತವಾಗುತ್ತವೆ.ಒಣಗಿದ ಎಲೆ ಏನೇ ಚಲಿಸಿದರು ಅದು ಶಬ್ದ ಮಾಡುತ್ತದೆ ಎನ್ನುವುದು ಒಂದಾದರೆ,ಒಣಗಿದ ಎಲೆ ಯಾವ ರೀತಿ ನಿಷ್ಪ್ರಯೋಜಕವಾಗಿದೆ.ಅದರ ಮೇಲೆ ಇರುವ ಈ ಕಾಮ ಬಯಕೆಗಳಲ್ಲಿ ಒಣಗಿವೆ.ಅವೆಲ್ಲ ಚೆನ್ನಮಲ್ಲಿಕಾರ್ಜುನನಿಗೆ ಅರ್ಪಣೆಗೊಂಡವು ಆಗಿವೆ.ಹಾಗಾಗಿ ಒಣಗಿದ ಎಲೆಗಳ ಮೇಲೆ ಇದ್ದರೇನು ತರಗೆಲೆ ಒಂದು ಬಗೆಯಕಲ್ಲು ಅದರ ಮೇಲೆ ಇದ್ದರೇನು ಚೆನ್ನಮಲ್ಲಿಕಾರ್ಜುನ ಕಕೆಂಡವನ್ನೆ ಹಾಕಿದರು ತನ್ನ ಪ್ರಾಣವನ್ನು ಅರ್ಪಿಸಿ ಶುದ್ಧಳಾಗಿ ಇರುವೆಂದು ಈ ವಚನದಲ್ಲಿ ಹೇಳಿದ್ದಾಳೆ.

ನೋವನ್ನು ಅನುಭವಿಸಿ ಮಾನಸಿಕ ಅಹಿಂಸೆಯಿಂದ ಬಳಲಿ,ನೊಂದು ತನ್ನನ್ನು ತಾನು ಸಂತೈಸಿಕೊಳ್ಳುವುದಿದೆಯಲ್ಲ ಅದು ಕೂಡ ಒಬ್ಬ ವ್ಯಕ್ತಿ ಅಷ್ಟೇ ಮುಖ್ಯವಾದುದು. ಏಕೆಂದರೆ ಮಾನಸಿಕ ನೋವನ್ನು ಯಾರು ನಿವಾರಣೆ ಮಾಡಲು ಸಾಧ್ಯವಿಲ್ಲ.ಅದನ್ನು ಅವರೇ ಸಮಾಧಾನ ಮಾಡಬೇಕು.ಇಂತಹ ಒಂದು ವಚನವು ಅಕ್ಕಮಹಾದೇವಿಯಲ್ಲಿ ಕಾಣಸಿಗುತ್ತದೆ.

"ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲ್ಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ,ಸೋಪಾನ ಚೆನ್ನಮಲ್ಲಿಕಾರ್ಜುನ"[೧೦]

ಹೀಗೆ ಅಕ್ಕ ಮಹಾದೇವಿಯು ತನ್ನನ್ನು ತಾನು ಸಂತೈಸಿಕೊಂಡಿದ್ದಾಳೆ.ತನ್ನ ಮನ ನೊಂದು ತುಂಬಾ ಹಿಂಸೆಯಿಂದ ಬಳಲಿದಾಗ ತನ್ನನ್ನು ತಾನೇ ಸಮಾಧಾನ ಮಾಡಿಕೊಂಡಿದ್ದಾಳೆ. ಮನವೇ ನೀ ಹೆದರಬೇಡ,ತನುವೇ ನೀ ಬೆದರಬೇಡ ಈ ಜಗದ ನಿಜವನ್ನು ಅರಿತು ನೀ ನಿಶ್ಚಿಂತನಾಗಿರು. ಹಣ್ಣು ಕೊಡುವ ಮರಕ್ಕೆ ಕಲ್ಲು ಹೊಡೆಯುವ ಜನರನ್ನು ಕಾಣುತ್ತೇವೆ. ಅದರಿಂದ ಅನೇಕ ಪ್ರಯೋಜನ ಪಡೆದು ಕಲ್ಲು ಹೊಡೆಯುತ್ತಾರೆ ಜನ. ಆದರೆ ಒಳ್ಳೆಯವರಿಗೆ ಪರೀಕ್ಷೆಗಳು ಜಾಸ್ತಿ, ಕಷ್ಟ,ನೋವುಗಳು ಜಾಸ್ತಿ ಎನ್ನುವಂತೆ ಜನ ಹೆಜ್ಜೆ ಹೆಜ್ಜೆಗೆ ನೋವು ಉಂಟು ಮಾಡಿದರು. ನೀ ಹೆದರಬೇಡ ಹೆದರಿ ನೊಂದು, ಮಂಕಾಗಬೇಡ. ನಿನ್ನ ಹೆದರಿಸಿ, ಸೋಲಬೇಕೆ, ಹೊರತು, ನೀನು ಮಾತ್ರ ಸೋಲಬಾರದು, ನೊಂದುಕೊಳ್ಳಬಾರದು ಎಂದು ತನಗೆ ತಾನೇ ಸಮಾಧಾನಪಡಿಸಿದ್ದಾಳೆ. ಹಾಗೇ ಭಕ್ತಿಯಿಂದ ಪೂಜೆ ಮಾಡುವವರಿಗೆ ಹೆಚ್ಚು ಬೈಯುವರು ಹಾಗೆ ಪೂಜೆ ಮಾಡಬೇಕು ನಿಯಮಗಳು ಕಟ್ಟುನಿಟ್ಟು ಪಾಲಿಸಬೇಕು ಇಲ್ಲದೇ ಹೋದರೆ ದೇವರು ಶಾಪ ನೀಡುತ್ತಾನೆ, ಕೆಡಕು ಉಂಟು ಮಾಡುತ್ತಾನೆ ಇತ್ಯಾದಿಯೆಂದೆಲ್ಲ ಹೆದರಿಸುತ್ತಾರೆ. ದೇವರನ್ನು ನಂಬದ ವ್ಯಕ್ತಿಯನ್ನು ಯಾರಾದರೂ ಬೈಯುವರೇ ನೀ ಈ ನಿಯಮ ಪಾಲಿಸು ವ್ರತ ಮಾಡು ಹಾಗೇ ಹೀಗೆ ಎಂದೆಲ್ಲಾ ಹೇಳುವರೇ ಇಲ್ಲತಾನೇ ಹಾಗೇ ಶರಣರ ನುಡಿ ನಮಗೆ ಮೆಟ್ಟಿಲುಗಳಿದ್ದಂತೆ, ಒಂದೊಂದೇ ಹೆಜ್ಜೆ ಮುಂದೆ ಇಡಲು ಧೈರ್ಯ ನೀಡುತ್ತದೆ ಎಂದು ಅಕ್ಕಮಹಾದೇವಿ ತನ್ನನ್ನು ತಾನು ಸಂತೈಸಿಕೊಂಡು ತುಂಬ ವಿಶೇಷ ಈ ಒಂದು ಭಾವ ನಮ್ಮಗೆ ಕಂಡು ಬರುವುದು ಒಂದು ಹೆಣ್ಣಿನಲ್ಲಿಯೇ.

ಅಕ್ಕ ಮಹಾದೇವಿಯ ಹೋರಾಟವಿದೆಯಲ್ಲ ಅದು ಒಂದು ರೀತಿ ಸಮಾಜದೊಂದಿಗೆ ನೇರಾ ನೇರವಾಗಿ ನಡೆದುದ್ದಾಗಿದೆ. ಅವಳು ಉಡತಡಿಯಿಂದ ಕಲ್ಯಾಣಕ್ಕೆ ಬರುವ ದಾರಿಯಲ್ಲಿ ಆದ ನೋವು, ಹಿಂಸೆ ಹೆಚ್ಚಾಗಿರುವುದರಿಂದ ಅವಳಿಗೆ ಎದುರಾದ ಪುರುಷರಿಗೆ ಎದುರಿಸಲು ನೇರ ಪ್ರತಿಭಟನೆಯಾಗಿದೆ. ಅಂದರೆ ಇಲ್ಲಿ ಸಮಾಜಕ್ಕೆ ಎದುರಾದಾಗ ಮಾತ್ರ ಮಹಿಳೆಗೆ ನೋವು ವೇದನೆ ಉಂಟಾಗುತ್ತದೆ. ಎಂತಲ್ಲ ಮನೆಯಲ್ಲಿ ಇದ್ದ ಮಹಿಳೆಯರಿಗೂ, ಗಂಡನ ಜೊತೆ ಇದ್ದ ಸ್ತ್ರೀಗೂ ಸಮಾಜ ನೋವುಂಟು ಮಾಡುತ್ತದೆ. ಇಲ್ಲಿ ನಾವು ರಾಮಾಯಣದ ಪ್ರಸಂಗ ತೆಗೆದು ನೋಡಬಹುದು. ಸೀತೆ ಯಾವ ರೀತಿ ಸಮಾಜಕ್ಕೆ ಎದುರಾಗಿದ್ದಳು. ಆದರು ಅವಳು ವೇದನೆ ಅನುಭವಿಸಲಿಲ್ಲವೇ. ಸೀತೆ ವನವಾಸದಲ್ಲಿ ೧೪ ವರ್ಷ ತನ್ನ ಗಂಡ ಶ್ರೀರಾಮಚಂದ್ರನ ಜೊತೆಗೆ ಇದ್ದಳು. ಕೆಲವುದಿನ ರಾವಣ ಅಪಹರಿಸಿಕೊಂಡು ಹೋಗಿದ್ದಕ್ಕೆ ಅವಳ ಮೇಲೆ ಅನುಮಾನ ಪಡಲಿಲ್ಲವೆ ಸಮಾಜ. ಯಾರೋ ಅಗಸ ಅನುಮಾನ ಪಟ್ಟ ಕಾರಣಕ್ಕೆ ಇನ್ನು ೧೪ಕ್ಕು ವರ್ಷ ಸೀತೆ ವಸವಾಸ ಅನುಭವಿಸಬೇಕಾಯಿತು. ಸೀತೆ ಅಲ್ಲಿ ಸೀತೆಯ ತಪ್ಪು ಏನು? ಸ್ತ್ರೀ ಆಗಿದ್ದೇ ಅವಳ ತಪ್ಪೇ? ಸ್ತ್ರೀಯ ಶೀಲಕ್ಕೆ ಮಾತ್ರವೇ ಈ ಸಮಾಜದ ಅನುಮಾನಗಳು ಪುರುಷರಿಗೆ ಯಾವ ಶೀಲವು ಇಲ್ಲ ಅನುಮಾನಗಳು ಇಲ್ಲ. ಈ ಅನುಮಾನಗಳು ಅವಮಾನಗಳು ಸ್ತ್ರೀಗೆ ತಲತಲಾಂತರದಿಂದ ಬಂದ ಬಳುವಳಿಗಳಾಗಿವೆ. ಹಾಗಾಗಿಯೇ ಇಂದಿನ ಈ ಆಧುನಿಕ ಮಹಿಳೆಯ ಇಂತಹ ಅನೇಕ ವೇದನೆಗಳು ಅನುಭವಿಸಿದ್ದಾಳೆ.

ಸಮಾಜದಲ್ಲಿ ಹೆಣ್ಣಿಗೆ ನಾನಾ ರೀತಿಯ ನೋವು ಉಂಟುಮಾಡುವ ಅನೇಕ ಸಂದರ್ಭಗಳು ಮತ್ತು ಸನ್ನಿವೇಶಗಳು ನಾವು ಕಂಡಿರುತ್ತೇವೆ.ಮತ್ತು ಹೆಣ್ಣಾದಳು ಅನುಭವಿಸಿರುತ್ತಾಳೆ. ಆದರೆ ಅಷ್ಟೆಲ್ಲಾ ನೋವುಗಳು ಸಹಿಸಿಕೊಂಡು ಸಮಾಧಾನದಿಂದ ತನ್ನ ಮಾನಸಿಕವಾಗಿ ಗಟ್ಟಿಯಾಗುತ್ತ ಮುಂದೆ ಹೆಜ್ಜೆ ಹಾಕುವುದಿದೆಯಲ್ಲ ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇಂತಹ ಅನೇಕ ಸಂಗತಿಗಳು ನಮಗೆ ಅಕ್ಕಮಹಾದೇವಿಯ ವಚನಗಳಲ್ಲಿ ಕಂಡುಬರುತ್ತವೆ. ಹಾಗಾಗಿಯೇ ಅವಳು ಜಗತ್ತಿನ ಎಲ್ಲಾ ಮಹಿಳಾ ಕುಲಕ್ಕೆ ಮಾದರಿಯಾಗಿ ಆದರ್ಶಪ್ರಾಯವಾಗಿ ನಿಲ್ಲುತ್ತಾಳೆ. ಈ ರೀತಿಯ ಅನೇಕ ವಿಷಯಗಳು ಆಧುನಿಕ ಮಹಿಳೆಯರು ತಿಳಿದುಕೊಂಡು ದಿಟ್ಟ ಹೆಜ್ಜೆ ಇಡಬೇಕಾಗಿದೆ, ಮುಂದೆ ನಡೆಯಬೇಕಾಗಿದೆ.

೧೨ನೇ ಶತಮಾನದಲ್ಲಿಯೇ ಅಕ್ಕ ಮಹಾದೇವಿಯ ಹೊರತು ಇನ್ನು ಅನೇಕ ಶರಣೆಯರು ತಮ್ಮ ಸಂವೇದನೆಗಳು ಇಲ್ಲಿ ಹಂಚಿಕೊಂಡಿದ್ದಾರೆ. ಮೇಲ್ವರ್ಗದ ವಚನಕಾರ್ತಿಯರಲ್ಲಿ ನೋಡಿದಾಗ ಬಸವಣ್ಣನ ಹೆಂಡತಿ ನಿಲಾಂಬಿಕೆಯು ಹೆಣ್ಣಿಗೆ ಅಸ್ತಿತ್ವವಿಲ್ಲ ಎಂದು ತನ್ನ ವಚನಗಳಲ್ಲಿ ಹೇಳಿರುವುದು ಕಾಣುತ್ತೇವೆ. ಆ ವಚನ ಹೀಗದೆ.

"ಹೆಸರಿಲ್ಲದ ರೂಪ ಕಂಡು
ಹೆಸರಳಿದು ಹೆಣ್ಣು ರೂಪ ತಾಳಿದೆ ನಾನು
ಕುರುಹಿಲ್ಲದ ಮೂರ್ತಿಯ ಕಂಡು
ಅಧ್ಯೆತಾನಂದಿಯಾದೆ ನಾನು
ಪ್ರಣವ ಜ್ಯೋತಿಷವರ್ಣದ ತಿಳಿದು
ಪರಂ ಜ್ಯೋತಿಲಿಂಗವಾದೆನಯ್ಯ ಸಂಗಯ್ಯ"[೧೨]

ಇಲ್ಲಿ ನೀಲಾಂಬಿಕೆ ತಾನು ಹೆಣ್ಣು ರೂಪ ತಾಳಿದ್ದೇನೆ. ಆದರೆ ಅದು ಎಂತಹ ಹೆಣ್ಣು ರೂಪವೆಂದರೆ ಹೆಸರಿಲ್ಲ ಹೆಣ್ಣು ರೂಪವನ್ನೇ ತಾಳಿದ್ದೇನೆ. ಈ ಜಗತ್ತಿನಲ್ಲಿ ಹುಟ್ಟುವಾಗ ನಾನು ಎಲ್ಲಾ ಜೀವಿಗಳಂತೆ ಒಂದು ಜೀವಿಯಾಗಿ ಹುಟ್ಟಿದೆ. ಹುಟ್ಟುವಾಗ ಹೆಣ್ಣು ಹೆಣ್ಣಾಗಿ ಹುಟ್ಟುವುದಿಲ್ಲ. ಎಂದು ನೀಲಾಂಬಿಕೆ ೧೨ನೇ ಶತಮಾನದಲ್ಲಿಯೇ ಹೇಳಿ ಮುಗಿಸಿದ್ದಾಳೆ. ಇಂತಹ ಇನ್ನೊಂದು ವಚನವು ನೀಲಾಂಬಿಕೆಯಲ್ಲಿ ಕಾಣುತ್ತೇವೆ. ಅದು ಹೀಗಿದೆ.

"ಹಿರಿಯತನಗೆ ಹೆಣ್ಣೆಂದು ಕರೆದರೆ
ಆ ಹೆಣ್ಣು ರೂಪದ ನಾಮವು ನಿರ್ನಾಮವಯ್ಯ
ಅರಿವನಂದು ಆ ಪ್ರತಿಮ ಘನವ ಕಂಡುಳಿದು
ಹೆಣ್ಣತನದ ಮಾತನಳಿದು ಏಕೋದೇವನ ಕೃಪೆಯನ್ನು
ಕಂಡು ಬದುಕಿದೆನಯ್ಯ ಸಂಗಯ್ಯ"[೧೩]

ಸಮಾಜ ಗೌರವದಿಂದ ಹೆಣ್ಣೆಂದು ಕರೆಯುತ್ತದೆ. ಆದರೆ ನೀವು ನೀಡಿದ ಹೆಣ್ಣು ನಾಮವು ಗೌರವದಲ್ಲಿ ಕೊನೆಯವರೆಗೂ ಉಳಿಯುತ್ತದೆಯೇ? ಹೆಣ್ಣಿಗೆ ಅಸ್ತಿತ್ವವಿಲ್ಲ ಹಾಗಾಗಿ ಅದು ನಿರ್ನಾಮವಯ್ಯ. ಏಕೆಂದರೆ ಆ ಹೆಣ್ಣಿನ ಹೆಸರೊಂದಿಗೆ ತಂದೆ ಹೆಸರೋ, ಗಂಡನ ಹೆಸರೂಗಳಿಂದ ಗುರುತಿಸಲಾಗುತ್ತದೆ. ಹಾಗಾಗಿ ಹೆಣ್ಣಿನ ನಾಮ ನಿರ್ನಾಮವಾಗುತ್ತದೆ. ಅದನೆಲ್ಲ ಅರಿತು ಸಮಾಜದಲ್ಲಿ ಗಟ್ಟಿಯಾಗಿ ನೆಲೆಯಿಲ್ಲದ ನಾಮವೆಂದು ಅರಿತಿದ್ದೇನೆ. ಹೆಣ್ಣಿನ ಮಾತಿಗೆ ಬೆಲೆಯಿಲ್ಲ. ತಿಳಿದು ಬದುಕಿದ್ದೇನೆ ಎನ್ನುತ್ತಾಳೆ ನೀಲಾಂಬಿಕೆ. ಅವಳು ಹೇಳಿದಂತೆ ಹೆಣ್ಣಿಗೆ ನಾಮವಿಲ್ಲ, ಅಸ್ತಿತ್ವ, ಬೆಲೆಯಿಲ್ಲ, ಗೌರವವಿಲ್ಲ. ಹೀಗೆ ಹೆಣ್ಣಿನೊಂದಿಗೆ ಇಲ್ಲಿ ಇಲ್ಲ. ಎನ್ನುವ ಪದಗಳೇ ಸರಣಿಯಾಗಿ ಬಂದುನಿಲ್ಲುತ್ತವೆ. ಎಂದು ನೀಲಾಂಬಿಕೆ ತನ್ನ ವಚನದಲ್ಲಿ ಹೇಳುತ್ತಾಳೆ.

ಈ ಎಲ್ಲಾ ಕಾರಣಗಳಿಂದಲೇ ಹೆಣ್ಣು ತ್ಯಾಗಮಯಿ ಎನ್ನಿಸಿಕೊಂಡಿದ್ದಾಳೆ. ಒಟ್ಟು ಹೆಣ್ಣೆಂದರೆ ಅಸ್ತಿತ್ವವಿಲ್ಲದ ಬದುಕಾಗಿ ಕಂಡು ಬರುತ್ತದೆ ಎಂದು ಮತ್ತೆ ಮತ್ತೆ ಹೇಳಿದ್ದಾಳೆ.

ಹೆಣ್ಣಿಗೆ ಈ ಅಸ್ತಿತ್ವವಿಲ್ಲದ ಬದುಕು ಅವಳ ಬಗ್ಗೆ ಸಮಾಜದಲ್ಲಿ ಇರುವ ತಾತ್ಸರ ಗುಣಗಳು, ಮಿತಿಯಿಲ್ಲದೆ ಹೇರುವ ಕಟ್ಟಲೆ ನಿಯಮಗಳಿಂದ ಹೆಣ್ಣು ಜೀವವಿದ್ದರೂ ಮಾನಸಿಕವಾಗಿ ನಿರ್ಜಿವ ಭಾವದಲ್ಲಿ ಬದುಕುತ್ತಾಳೆ. ಅವಳಿಗೆ ಅವಳದೇ ಆಸೆ ವ್ಯಕ್ತಪಡಿಸುವಂತಿಲ್ಲ. ನಿರಾಸೆ, ತೋರಪಡಿಸುವಂತಿಲ್ಲ. ಕೇವಲ ಯಂತ್ರದಂತೆ ಬದುಕು ಹೀನಾಯ ವೆನಿಸಿಕೊಳ್ಳುತ್ತದೆ. ತಾನು ಹೆಣ್ಣಾಗಿದಕ್ಕೆ ಸಮಾಜದಲ್ಲಿ ಹೇಗೆ ಬದುಕಿದಳು ಎಂದು ಈ ರೀತಿ ತನ್ನ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಆಡುಲಿಲ್ಲವಯ್ಯ ನಾನು ಹೆಣ್ಣು ರೂಪಧರಿಸಿ
ನುಡಿಯಿಲಿಲ್ಲವಯ್ಯ ನಾ ಹೆಣ್ಣು ರೂಪಧರಿಸಿ
ನಾನು ಹೆಣ್ಣಲ್ಲದ ಕಾರಣ
ನಾನು ಇಹಪರ ನಾಸ್ತಿಯಾದವಳಯ್ಯ
ನಾನು–ಉಭಯದ ಸಂಗವ ಕಂಡು ಕಾಣದಂತಿದ್ದೆನಯ್ಯ
ಸಂಗಯ್ಯ ಬಸವ ಬಯಲ ಕಂಡ ಕಾರಣ"[೧೪]

ಹೀಗೆ ಸಮಾಜವಲ್ಲಿನ ಪ್ರತಿಯೊಂದು ಕಾರ್ಯದಲ್ಲಿಯೂ ಹೆಣ್ಣೆಂಬ ರೂಪ ಹೆಣ್ಣಿಗೆ ತೊಂದರೆಯನ್ನು ಉಂಟುಮಾಡುತ್ತದೆ. ಎನ್ನುವದನ್ನು ಇಲ್ಲಿ ವ್ಯಕ್ತವಾಗಿದೆ ನಾ ಹೆಣ್ಣಾಗಿದ್ದಕ್ಕೆ ಆಡಲಿಲ್ಲ ಎನ್ನುವದು ಹೆಣ್ಣಿನ ನಿಜ ಸ್ಥಿತಿಯನ್ನು ಹೇಳಿದ್ದಾಳೆ. ನೀಲಾಂಬಿಕೆ ಈ ಎರಡು ಪದಗಳು ಒಂದೇ ಅರ್ಥವನ್ನು ಕೊಡುತ್ತದೆ. ಇಲ್ಲಿ ಹೆಣ್ಣಿನ ಮಾತಿನ ಮೇಲೆ ಸಂಪೂರ್ಣ ನಿರ್ಬಂಧವಿದೆ. ಮಾತಾಡುವಂತಿಲ್ಲ ಆಡಿದರೆ ಅವಳ ಮಾತಿಗೆ ಬೆಲೆಯಿಲ್ಲ. ತಪ್ಪಿಯಾವುದಾದರು ಒಂದು ನುಡಿಯನ್ನು ನುಡಿದರೆ ಅದು ಅವಳಿಗೆ ಮಾರಕವಾಗುತ್ತದೆ. ಹೆಣ್ಣು ಮೌನವಾಗಿರಬೇಕು. ಸಹನ ಶೀಲೆಯಗಿರಬೇಕು. ಈ ಸಹನೆಯ ಕಟ್ಟೆ ಒಡೆದು ನುಡಿದ ಒಂದು ಮಾತಿಗೆ ಸಾವಿರ ರೂಪ ನೀಡಿ ಅವಳನ್ನು ಅಪಮಾನ ಮಾಡಲಾಗುತ್ತದೆ. ಅಪನಿಂದನೆಗಳಿಗೆ ಗುರಿಯಾಗುತ್ತಾಳೆ. ಹೀಗ ಇಲ್ಲಿ ಆಡು–ನುಡಿ ಒಂದೇ ಅರ್ಥವನ್ನು ಕೊಟ್ಟರೂ ಅದನ್ನು ಪುನರಾವೃತ್ತಿ ಮಾಡುವ ಅವಶ್ಯಕತೆ ಇತ್ತು. ಎಂದ ಮೇಲೆ ಆಡು ನುಡಿ ಭಿನ್ನ ಅರ್ಥಗಳನ್ನು ಕೊಡುತ್ತವೆ ಎಂದು ಹೇಳಬೇಕು. ಸಮಾಜದಲ್ಲಿ ಆಗುವ ಎಲ್ಲಾ ಒಳಿತು ಕೆಡಕಿಗೆ ಹೆಣ್ಣು ಕಾರಣವಾಗುತ್ತಾಳೆ. ಅವಳಿಂದ ಒಂದು ಚಿಕ್ಕ ತಪ್ಪು ಆದರಂತೂ ಅವಳ ಸ್ಥಿತಿ ದೇವರಿಗೆ ಪ್ರೀತಿ ಎಂಬಂತಾಗುತ್ತದೆ. ಗಂಡನಿಂದ ಆಗುವ ಶೋಷಣೆಗೆ ಯಾವ ಧ್ವನಿಯೂ ಎತ್ತುವಂತಿಲ್ಲ. ಸ್ತ್ರೀ ಹೀಗೆ ಅವಳಿಗೆ ಇಲ್ಲಿ ಸ್ವಾತಂತ್ರ್ಯವಿಲ್ಲ ಸಮಾನತೆಯಿಲ್ಲ. ಸ್ಥಾನಮಾನಗಳಿಲ್ಲ ಹೋಗಲಿ ಸತ್ತರೆ ಸ್ವರ್ಗವು ಇಲ್ಲ. ಇಂತಹ ಹೀನಾಯ ಸ್ಥಿತಿಯನ್ನು ಅರಿತ ನೀಲಾಂಬಿಕೆ ತನ್ನ ವಚನದಲ್ಲಿ ಹೀಗೆ ಹೇಳುತ್ತಾಳೆ.

"ಏಕೆನ್ನ ಪುಟ್ಟಿಸಿದೆಯಯ್ಯ ಹೆಣ್ಣು ಜನ್ಮದಲ್ಲಿ
ಪುಣ್ಯ ವಿಲ್ಲದ ಪಾಪಿಯ? ನಾನು ಇಹಪರಕ್ಕೆ ದೂರಳಯ್ಯ
ಎನ್ನ ನಾಮ ಹೆಣ್ಣು ನಾಮವಲ್ಲಯ್ಯ
ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ
ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲವಯ್ಯ"[೧೫]

ನೀಲಾಂಬಿಕೆ ಈ ವಚನದ ಮೊದಲನೆ ಸಾಲಿನಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ಹೆಣ್ಣಿನಲ್ಲೂ ಉದ್ಭವಿಸಬಹುದಾದ ಪ್ರಶ್ನೆಯನ್ನು ಕೇಳುತ್ತಾಳೆ. ಈ ಸಾಲು ಇಡೀ ಹೆಣ್ಣು ಕುಲದ ಮನಸ್ಸಿನ ಪ್ರತಿನಿಧಿಯಾಗಿ ಎತ್ತಿದ ಪ್ರಶ್ನೆಯಾಗಿದೆ. ಹೆಣ್ಣಿನ ಜನ್ಮವು ಪುಣ್ಯವಿಲ್ಲದ ಪಾಪಯ ಜನ್ಮವಾಗಿದೆ. ಇಂತಹ ಜನ್ಮದಲ್ಲಿ ಯಾಕೆ ಹುಟ್ಟಿಸಿದೆ. ಎಂದು ಕೇಳುವ ಪ್ರಶ್ನೆಯ ಮೂಲಕ ತನ್ನ ವೇದನೆಯನ್ನು ಹೊರಹಾಕಲು ಯತ್ನಿಸಿದ್ದಾಳೆ. ಏಕೆಂದರೆ ಹೆಣ್ಣಿಗೆ ಜನ್ಮದಲ್ಲಿ ಎನೇ ಒಳ್ಳೆಯ ಕಾರ್ಯಮಾಡಿದರು ಅವಳಿಗೆ ಪುಣ್ಯ ದೊರೆಯದಿಲ್ಲ. ಹೆಣ್ಣಿಗೆ ಮೋಕ್ಷವು ಇಲ್ಲ. ಅವಳು ಮೋಕ್ಷ ಪಡೆಯ ಬೇಕೆಂದರೆ ಅವಳು ಇನ್ನೊಮ್ಮೆ ಗಂಡುರೂಪವನ್ನು ಧರಿಸ ಬೇಕಾಗುತ್ತದೆ. ಇದಕ್ಕೆಲ್ಲ ಕಾರಣ ಹೆಣ್ಣು ಜನ್ಮದಲ್ಲಿ ಹುಟ್ಟಿರುವದು. ಇದರಲ್ಲಿ ಹೆಣ್ಣಿನ ತಪ್ಪಿಲ್ಲದಿದ್ದರೂ ಅವರು ಇತಂಹ ವೇದನೆ ಅನುಭವಿಸ ಬೇಕಾಗಿದೇಯಲ್ಲ. ಎಂದು ನೋವಿನಿಂದಲೇ ಹೇಳಿದ್ದಾಳೆ ನೀಲಾಂಬಿಕೆ. ಇನ್ನೊಂದೆಡೆ ಬಸವಣ್ಣನ ವಧುವಾದ ಕಾರಣದಿಂದ ಹೆಣ್ಣೆಂಬ ನಾಮವನ್ನು ಅಳಿದು ನಿಂತವಳೆಂಬ ನಿಶ್ಚಿಂತತೆಯ ಭಾವವು ತೋರ ಪಡಿಸುತ್ತಾಳೆ. ಅಂದರೆ ಹೆಣ್ಣೆಂಬ ನಾಮ ಹೆಣ್ಣೆಂಬ ಜನ್ಮ ಜುಗುಪ್ಸೆ ಹುಟ್ಟಿಸುವಂತೆ ಮಾಡಿದೆ. ಮತ್ತು ತನ್ನ ನಾಮಕ್ಕಿಂತ ಬಸವಣ್ಣನ ವಧು ಎನಿಸಿಕೊಂಡದಕ್ಕೂ ತನಗೆ (ಹೆಣ್ಣಿಗೆ)

ಹೆಣ್ಣು ನಾಮವಿಲ್ಲ ಎಂದು ನೀಲಾಂಬಿಕೆ ನೇರವಾಗಿಯೇ ಹೇಳಿರುವದನ್ನು ನಾವು ಈ ವಚನದಲ್ಲಿ ಕಾಣಬಹುದು.

ನೀಲಾಂಬಿಕೆ ಬಸವಣ್ಣನ ವಧುವೆಂದು ಹೇಳಿ ಹೆಣ್ಣಿನ ನಾಮದಿಂದ ಮುಕ್ತ ಹೊಂದವದಾಗಿ. ಹೇಳಿದ ಅವಳು ಇನ್ನೊಂದು ವಚನದಲ್ಲಿ ಹೀಗೆ ಈ ರೀತಿಯಾಗಿ ಹೇಳಿರುವದು ಇನ್ನೊ ವಿಶೇಷವಾಗಿದೆ.

"ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷಗನಲಾಗದು ಬಸವನ ಎನಗೆ
ಉಭಯದ ಕುಳವ ಹರಿದು ಬಸವಂಗೆ ಶಿಶುವಸಾದೇನು
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬವ ಮೀರದೆ ಬಸವನೊಳಗಾನಡಗಿದೆ"[೧೬]

ಈ ವಚನದಲ್ಲಿ ತಾನು ಬಸವನಿಗೆ ಮಡದಿಯಲ್ಲ. ಬಸವ ತನಗೆ ಪುರುಷನಲ್ಲ ಎನ್ನುತ್ತಾಳೆ. ಅಂದರೆ ಸತಿ ಪತಿ ಎಂಬುವೆದಕ್ಕೆ ನಮ್ಮ ಸಮಾಜದಲ್ಲಿ ಇರುವ ಕಲ್ಪನೆಗೆ ಭಿನ್ನವಾಗಿ. ತಮ್ಮ ಜೀವನ ವಿತ್ತು ಎಂದು. ಮುಕ್ತವಾಗಿಯೇ ನೀಲಾಂಬಿಕೆ ಈ ವಚನದಲ್ಲಿ ಅಭಿವ್ಯಕ್ತ ಪಡಿಸಿದ್ದಾಳೆ ಇಲ್ಲಿ ಈಕೆಯ ನಿಲುವು ಕಾಮವಾಸನೆ ಇಲ್ಲಿದ ಮುಗ್ಧ ಶಿಶುವಿನ ಭಾವನೆಯನ್ನು ವ್ಯಕ್ತಗೊಳಸಿದ್ದಾಳೆ. ಸತಿ ಪತಿಗಳು ಎಂದರೆ ದೈಹಿಕ ಸುಖ, ತೃಪ್ತಿ ಲೌಕಿಕ ಜೀವನದಲ್ಲಿ ಸಾಮಾನ್ಯಲಾಗಿ ಕಾಣುತ್ತೇವೆ. ಆದರೆ ಇವರಲ್ಲಿ ಈ ಸಂಬಂಧವಿರಲಿಲ್ಲ ತಮ್ಮದು ಅಮುಷ್ಮಿಕ ಭಾವನೆಗಳ ಆಗರದ ಸಂಬಂಧ ವೆಂದು ಹೇಳುತ್ತಾಳೆ. ಅಂದರೆ ಸತಿ ಪತಿಯ ಭಾವದಲ್ಲಿ ವಿಚಾರ ಮಾಡಿದಾಗ ಅಲ್ಪ ಆಸೆಯ ಉಭಯದ ಹಂಗನ್ನು ಹರಿದೊಗೆದು ಸತಿಗೆ ಪತಿ ಶಿಶುವಾಗಿ, ಪತಿಗೆ, ಸತಿ ಶಿಶುವಾಗಿ ಪರಿಣಮಿಸಿದಾಗ ಹೇಳುತ್ತಾಳೆ. ಇದಕ್ಕೆ ಸಕಲ ಪ್ರಮಥರ ಪುರಾತನರ ಸಾಕ್ಷಿಯನ್ನು ಒದಗಿಸುತ್ತಾಳೆ, ನೀಲಾಂಬಿಕೆ. ಇಲ್ಲಿ ಆಧುನಿಕ ಯುಗದಲ್ಲಿ ಕಂಡುಬರುವ Living Together ಎನ್ನುವ ಕಲ್ಪನೆ ಇಲ್ಲಿದೆ. ಇದು ಈ ವಚನದಲ್ಲಿ ಕಂಡುಬರುತ್ತದೆ. ತಮ್ಮ ಇಬ್ಬರ ನಡುವಿನ ವಿಚಾರಗಳು ಒಂದೇ ಆಗಿದ್ದ ಕಾರಣಕ್ಕೆ ಜೊತೆಯಲ್ಲಿ ಇರುವದು . ಅವನ ವಿಚಾರವೇ ನನ್ನವಿಚಾರವಾಗಿರುವುದು. ನನ್ನ ವಿಚಾರ ಅವನ ವಿಚಾರವಾಗಿರುವುದು. ವಿಚಾರದಲ್ಲಿ, ಜ್ಞಾನದಲ್ಲಿ ಭೇದವಿಲ್ಲ ಇಬ್ಬರ ಚಿಂತನಾ ಸಾಮರ್ಥ್ಯದ ಮಟ್ಟ ಒಂದೇ ಆಗಿರುವುದು. ಹಾಗಾಗಿಯೇ ನೀಲಾಂಬಿಕೆ ತಾನು ಬಸವನ ವಿಚಾರ ಪತ್ನಿ ಎಂದು ಹೇಳಿ ಕೊಳ್ಳತ್ತಾಳೆ.

ನೀಲಾಂಬಿಕೆ ಒಬ್ಬ ಹೆಣ್ಣಾಗಿದ್ದರಿಂದ ಹೆಣ್ಣಿಗೆ ಇರಬೇಕಾದ ಸಹಜ, ಆಸೆಗಳು ತನ್ನಲ್ಲೂ ಇವೆ. ಆದರೂ ತನ್ನ ವಿಚಾರ ಜ್ಞಾನದ ಬಲದಿಂದ ಈ ಸಹಜ ಜೀವನ ಕ್ಕಿಂತಲೂ ಎತ್ತರ ಬದುಕನ್ನು ಬದುಕಿದೆ ಎಂದು ತನ್ನ ಒಂದು ವಚನದಲ್ಲಿ ಹೇಳುತ್ತಾಳೆ ಆ ವಚನ ಹೀಗಿದೆ.

"ಕಾಮವನಳಿದ ಹೆಣ್ಣಿಲ್ಲ ನಾನು, ಕಾಮ ಉಂಟೆನಗೆ
ಕಾಯ ಸಂಸಾರವಳಿಯಿತ್ತೆಂಬ
ಕಾಯ ಸೀಮೆ ನೀಸ್ಸಿಮೆಯಳಿದು ಕಲ್ಪಿತವ ಕಂಡುಳಿದು
ಬದುಕಿದೆನಯ್ಯ ಸಂಗಯ್ಯ"[೧೭]

ನಾನು ಬಯಕೆಯಿಲ್ಲದ ಹೆಣ್ಣೆದು ತಿಳಿದಿರೆ ನಾನು ನನ್ನೇಲ್ಲಾ ಬಯಕೆಗಳು ತ್ಯಾಗಮಾಡಿ ಅಥವಾ ನಾಶ ಮಾಡಿದಲ್ಲವ ಅಥವಾ ಮಾಡಿಕೊಂಡವಲ್ಲ. ನನ್ನಗೂ ಬಯಕೆಗಳು ಇವೆ. ಈ ದೇಹದ ದೈಹಿಕ ಸಂಸಾರ ಮುಗಿಯತ್ತೆ. ಇದು ನಶ್ವರ ಈ ದೈಹಿಕ ಸಂಸಾರದ ಹಂಗು ತೊರೆದು ಆಸೀಮೆಯ ದಾಟಿ ನಿಸ್ಸೀಮೆಯಾದ ಐಹಿಕ ಸಂಸಾರವ ಕಲ್ಪಿಸಿಕೊಂಡು ಬದುಕುತ್ತಿದೆ ಎಂದು ಮೇಲಿನ ವಚನದಲ್ಲಿ ಹೇಳುತ್ತಾಳೆ.

ಈ ರೀತಿಯ ವೈಚಾರಿಕತೆ ನೆಲೆಯಲ್ಲಿ ಸಂಸಾರ ಸಾಗಿಸಿದ ಶರಣೆಯರು ಮಹಿಳೆಯರು ನಮ್ಮಗೆ ಕಂಡು ಬರುವ ೧೨ನೇ ಶತಮಾನದಲ್ಲಿ. ಒಬ್ಬ ಹೆಣ್ಣು ವೈಚಾರಿಕೆ ಮಟ್ಟವಲ್ಲಿ ಸಂಸಾರ ಸಾಗಿಸ ಬಹುದು ಎಂದು ತೋರಿಸಿ ಕೊಟ್ಟರು. ಹೀಗೆ ಹೆಣ್ಣಿಗೆ ಸ್ವಾತಂತ್ರ್ಯ, ಅವಕಾಶ, ಕೊಟ್ಟರೇ ಅವಳ ವೈಚಾರಿಕತೆಯು ಮುಂದೆ ನಿಲ್ಲುವರು ಯಾರು ಎನ್ನುವ ಮಟ್ಟಕ್ಕೆ ನಿಲ್ಲುವಳು ಎನ್ನುವದನ್ನು ನೀಲಾಂಬಿಕೆ ವಚನಗಳಲ್ಲಿ ವ್ಯಕ್ತವಾಗಿವೆ.

ಈ ಮಟ್ಟಿನ ವೈಚಾರಿಕೆ ಪ್ರಜ್ಞೆ ನಿಲುವಿನಲ್ಲಿ ತನ್ನ ಬದುಕನ್ನು ಸಾಗಿಸಿದವಳು ನೀಲಾಂಬಿಕೆ ಇದಕ್ಕೆ ಸಾಕ್ಷಿಯಾಗಿ ನಿಲ್ಲುವದಕ್ಕೆ ಅವಳ ಇನ್ನೊಂದು ವಚನ ನಮಗಿಲ್ಲ ಕಾಣಸಿಗತ್ತದೆ.
ಆ ವಚನ ಈ ರೀತಿಯಗಿದೆ.

ಸ್ಥಾನ ಮಾನ ವಿಲ್ಲದೆ ಶರಣರ ಹಂಗ ಹರಿದೆ.
ಶರಣರ ಹಂಗು ಹರಿದು ಶಿವಸೂತ್ರಿಕಳಾದೆ ನಾನು
ಶಿವಸೂತ್ರಕಳಾಗಿ ಮುಖ ವಿನಯ ಪರತತ್ವವನ್ನೆದಿ
ನಾನು ಅನುಭಾವಿಯಾದೆನಯ್ಯ ಸಂಗಯ್ಯ[೧೮]

ಇಲ್ಲಿ ನೀಲಾಂಬಿಕೆ ಬಳಸಿದ ಪದ 'ನಾನಾ ಅನುಭಾವಿಯಾದೆನಯ್ಯ' ಎನ್ನುವದು. ಈ ರೀತಿ ಇಲ್ಲಿಯ ವರೆಗೆ ಯಾವ ವಚನಕಾರರಲ್ಲೂ ಕಂಡು ಕೇಳಲಾಗದ ಪದವನ್ನು ಬಳಸಿರುವದು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಅವಳು ಹೆಣ್ಣಿಗೆ ಯಾವ ಸ್ಥಾನ ಮಾನವಿಲ್ಲ. ಆ ಹಂಗನ್ನು ಹರಿದೆ. ನಮ್ಮಗೆ ಅದರೆ ಹೆಣ್ಣಿಗೆ ಯಾವ ಸ್ಥಾನ ಮಾನವು ಬೇಕಾಗಿಲ್ಲ. ನೀವು ನಮ್ಮ ಸ್ಥಾನಮಾನವನ್ನು ಕಲ್ಪಿಸಿ ಕೊಡುವದು ಬೇಡ. ನಮ್ಮಗೆ ನಮ್ಮ ಸ್ಥಾನವನ್ನು ಯಾವ ರೀತಿ ಪಡೆದು ಕೊಳ್ಳಬೇಕು. ಮತ್ತು ನಮ್ಮ ಎಲ್ಲಿ ಹೇಗೆ ಪಡೆದು ಕೊಳ್ಳಬೇಕು ಎನ್ನುವದು ನಮ್ಮಗೆ ಗೊತ್ತು. ನೀವು ದೊರಕಿಸಿ ಕೊಡುವ ಅವಶ್ಯಕತೆ ಇಲ್ಲ, ಎನ್ನುವ ಭಾವದಲ್ಲಿ ಈ ವಚನವನ್ನು ವ್ಯಕ್ತಪಡಿಸಿದಂತೆ ಕಾಣುತ್ತದೆ. ಒಬ್ಬ ಶರಣೆಯಾಗಿ ಶರಣರ ಹಂಗು ಹರಿದೆ ಎಂಬ ಪದ ಬಳಕೆ ಮಾಡುವ ಧೈರ್ಯ ಮಾಡಿರುವದು ನೀಲಾಂಬಿಕೆ. ಈ ಆಧುನಿಕ ಯುಗಕ್ಕೆ ಅನ್ವಸಿಕೊಂಡರೆ ಮಹಿಳೆಯರಿಗೆ ೩೩% ಮಿಸಲಾತಿ ವಿವಾದವನ್ನು ಸಾಮ್ಯತೆ ಗೊಳಿಸಬಹುದಾಗಿದೆ. ಹೀಗೆ ಅವಳು ಅನೇಕ ವಿಷಯಗಳನ್ನು ವಿಶೇಷವಾಗಿ ವೈಚಾರಿಕೆ ನೆಲೆಯಲ್ಲಿ ಚಿಂತನೆ ಮಾಡುವದರಿಂದಲೇ ನಾನು ಅನುಭಾವಿಯಾದೆನಯ್ಯ ಎಂದ ಮುಕ್ತ ಮನಸ್ಸಿನಿಂದ ಧೈರ್ಯವಾಗಿ ಹೇಳಿದ್ದಾಳೆ.

ಒಬ್ಬ ಹೆಣ್ಣು ಎಷ್ಟೆ ಗಟ್ಟಿಯಾಗಿದ್ದರೂ. ಧೈರ್ಯವಂತಳಾಗಿದ್ದರೂ ಸ್ವಾಭಿಮಾನಿಯಾಗಿದ್ದರೂ, ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ನೊಂದು ಬೆಂದರೂ ಅದನ್ನು ಮಟ್ಟಿ ನಿಲ್ಲುವ ಗುಣ ವಿದ್ದವ ಮಾತ್ರವೇ

ಸಾಧಕರಾಗುತ್ತಾರೆ. ಕಲ್ಯಾಣದಲ್ಲಿ ಕ್ರಾಂತ್ರಿಯಾದಾಗ ಬಸವಣ್ಣ ಕಾಣದ ನೀಲಾಂಬಿಕೆ ವಿರಹ ವೇದನೆಯಲ್ಲಿ ಕುಗ್ಗಿದ್ದರು. ಧೈರ್ಯಗೆಟ್ಟಿಲ್ಲ ಎಂಬುದನ್ನು ಈ ವಚಸದಲ್ಲಿ ವ್ಯಕ್ತ ಪಡಿಸುತ್ತಾಳೆ.

"ಹಂದೆಯಲ್ಲ ನಾನು ಹರುಷವ ಧೈರ್ಯವುಳ್ಳ ಹೆಣ್ಣುನಾನು

ಕಾಮವನಳಿದವಳಾನಾದ ಕಾರಣ ಬಸವನ ಹಂಗೆಗಿಲ್ಲವಯ್ಯಾ

ಭ್ರಮೆಯಡಗಿ ಕಲೆ ನಷ್ಟವಾಗಿ ಮುಖವಂತು

ಮನ ವಿಚಾರವ ಕಂಡೆನಯ್ಯ ಸಂಗಯ್ಯ"೯೯

ಇಲ್ಲಿ ಹಂದೆ ಎಂದರೆ ಹೇಡಿ, ಹೆಣ್ಣು ಎಂದು ನೀವು ಅಸಡ್ಡೆ ತೋರಿಸಬೇಡಿ, ಏಕೆಂದರೆ ನಾನು ಹೆಣ್ಣು, ಹೇಡಿಯಲ್ಲ, ನನ್ನನು ಎಂತಹ ಹೆಣ್ಣು-ಎಂದು ತಿಳಿದಿರಿ? ನಾನು ಹೆಣ್ಣು ಎಂಬ ಕಾರಣಕ್ಕೆ ನನ್ನಲ್ಲಿ ನನ್ನ ಬಗ್ಗೆ ಗೌರವವಿದೆ. ನಾನು ಹರುಷದಿಂದ ಇದ್ದೇನೆ ನಾನು ಒಬ್ಬ ಧೈರ್ಯವುಳ್ಳ ಹೆಣ್ಣು ಎಂದು ಹೇಳಿಕೊಳ್ಳುತ್ತಾಳೆ ನೀಲಾಂಬಿಕೆ. ತಾನು ಕಾಮವನ್ನು ಅಳಿದವಳು ಈ ಲೌಕಿಕದ ದೈಹಿಕ ಆಸೆಯನ್ನು ತೇಜಿಸಿದವಳು. ಆದ ಕಾರಣ ಬಸವನ ಹಂಗು ನನಗಿಲ್ಲ ಬಸವನಿಲ್ಲ ಎಂದ ನಾ ಈ ದೇಹವನ್ನು ಹಾನಿಮಾಡಿಕೊಳ್ಳವಲ್ಲ. ಅಂದರೆ ನಾ ಹೆಣ್ಣಾಗಿ ಗಂಡನ ಆಶ್ರಯ ಬೇಕು ಅವನಿಲ್ಲದೇ ನನಗೆ ಜೀವನ ವಿಲ್ಲ. ಅವನು ಬಿಟ್ಟು ಬದುಕಲಾರೇ ಎನ್ನುವ ಭ್ರಮೆ ನನ್ನನು ಆವರಿಸಿ ಕೊಂಡಿಲ್ಲ. ಇಲ್ಲಿ ಒಂದು ರೀತಿಯಾಗಿ "ತನ್ನನ್ನು ತಾನು ಅರಿತ ಮೇಲೆ ಇನ್ನೇನು ಇನ್ನೇನು" ಎನ್ನುವ ಭಾವ ಇಲ್ಲಿ ವ್ಯಕ್ತವಾಗಿದೆ. ನನ್ನ ಅಂತರಂಗವನ್ನು ನಾ ಅರಿತು. 'ಅರಿವೇ ಗುರು' ಎಂಬ ಮಾತಿನಂತೆ ಜೀವನ. ಸಾಗಿಸುವದು ಏಕೆಂದರೆ ನಾ ಮನದ ವಿಚಾರವ ಕಂಡವಳು. ಹಾಗಾಗಿ ಬಸವಣ್ಣನ ಹಂಗಿಲ್ಲ ಎನ್ನಗೆ. ನಾ ಧೈರ್ಯವಾಗಿ ನಾನು ನನ್ನ ಉಳಿದ ಜೀವನ ಸಾಗಿಸುವೆ ನನ್ನಲ್ಲಿ ಐಹಿಕ ಸುಖವ ನಾಶವಾಗಿದೆ. ಎಲ್ಲಾ ಅಳಿದು ಉಳಿದಿರುವದೇನು ಎಂದು ನೀಲಾಂಬಿಕೆ ಈ ವಚನದಲ್ಲಿ ವ್ಯಕ್ತವಾಗಿದೆ.

ಬಸವಣ್ಣನಿಗೆ ಸಮಾನವಾದ ಜ್ಞಾನ, ಅವನು ಮಾಡುವು ವಿಚಾರ ಮಟ್ಟದಲ್ಲಿ ತನ್ನ ಚಿಂತನೆಗಳಿವೆ. ನಾನು ಅನುಭಾವಿ ಹೆಣ್ಣು, ತಾನು ಧೈರ್ಯಶಾಲಿಯಾದ ಹೆಣ್ಣು ಎಂದು ಏನೆಲ್ಲ ಹೇಳಿದರು. ತಾನು ಹೆಣ್ಣಾಗಿದ್ದಕ್ಕೆ ತನಗೆ ಎಲ್ಲಿಯೂ ನೆಲೆಯಲ್ಲ. ಎಂಬ ನೋವು ಮತ್ತು ಸಂಕಟ ಅವಳಿಗೆ ತುಂಬಾ ಕಾಡಿದಂತಿದೆ. ಈ ಚಿಂತನೆ ಕೇವಲ ಅವಳದು ಮಾತ್ರವಲ್ಲ ಇಡೀ ಹೆಣ್ಣು ಸಮುದಾಯಕ್ಕೆ ಇದೆ. ಅವನ್ನೊಬ್ಬ ಗಂಡು ಆತ ಏನು ಮಾಡಿದರು ನಡೆಯುತ್ತೆ.. ಹೇಗೆ ಇದ್ದರೂ ನಡೆಯುತ್ತೆ. ಯಾವಾಗ ಬಂದರೂ ಎಲ್ಲಿ ಹೋದರೂ ಕೇಳುವದಿಲ್ಲ. ಪ್ರಶ್ನಿಸುವದಿಲ್ಲ ಏಕೆಂದರೆ ಗಂಡು ಎಂಬ ಹೆಮ್ಮೆ ಸಮಾಜದಲ್ಲಿ. ಆದರೆ ಹೆಣ್ಣಿಗೆ ಹೀಗೆ ಬೆಳಸಲು ಸಾಧ್ಯವೆ? ಈ ತರದ ಪ್ರಶ್ನೆಕೇಳದೇ ಇರಲು ಸಾಧ್ಯವೆ? ಗಂಡು ಹುಟ್ಟಿದಾಗ ಇರುವ ಸಂಭ್ರಮ ಹೆಣ್ಣು ಹುಟ್ಟಿದಾಗ ಇರುವುದೇ? ಹೆಮ್ಮೆಯಿಂದ ನನ್ನಗೆ ಹೆಣ್ಣು ಮಗಳು ಹುಟ್ಟಿದ್ದಾಳೆ ಎಂದು ಹೇಳುವರುಂಟೆ? ಹೆಣ್ಣು ಮಕ್ಕಳನ್ನು ಒಂದು ನೆಲೆಗೆ ಹಚ್ಚಬೇಕು ಎಂದು ಹೇಳಿ ಮದುವೆ ಮಾಡುತ್ತಾರೆ. ಗಂಡನ ಮನೆಯು ಅವಳಿಗೆ ನೆಲೆ ನೀಡುತ್ತದೆಯೇ? ಅವಳಿಗೆ ಅಲ್ಲಿ ನೆಲೆಯು ದೊರೆಯುತ್ತಯೇ? ಎಂಬ ಪ್ರಶ್ನೆ ಒಂದು ಸಾರಿ ನಮ್ಮನ್ನು ನಾವು ಹಾಕಿಕೊಳ್ಳ ಬೇಕು. ಹೆಣ್ಣಿನ ನೆಲೆಯನ್ನು ಕುರಿತು ನೀಲಾಂಬಿಕೆ ತನ್ನ ಈ ವಚನದಲ್ಲಿ ಹೀಗೆ ಹೇಳಿದ್ದಾಳೆ.

"ಅರಿವಡೆ ನಾನು ಅರಿವುಳ್ಳ ಹೆಣ್ಣಲ್ಲ
ಮರೆವಡೆ ನಾನು ಮರೆಯಿಲ್ಲದ ಕಾಮಿನಿಯಲ್ಲ
ಏನು ರೂಪಿಲ್ಲವೆನಗೆ
ಏನು ನೆಲೆಯಿಲ್ಲವೆನಗಯ್ಯ ಸಂಗಯ್ಯ"[೨೦]

ಅನುಭಾವಿಯಾದ ನೀಲಾಂಬಿಕೆ ಈ ವಚನದಲ್ಲಿ ಅರಿವಿರುವ ಹೆಣ್ಣು ಅಲ್ಲ ಎಂದು ಹೇಳಿಕೊಂಡಳು. ಹೀಗೆ ಏನು ರೂಪವಿಲ್ಲ. ಏನು ಕಾಮ/ಬಯಕೆಗಳು ಇಲ್ಲವೆಂದರು ಎನಗೆ ನೆಲೆಯಲ್ಲ ಎಂದು ಹೇಳಿ ಹೆಣ್ಣಿಗೆ ಎಲ್ಲಿಯೂ ನೆಲೆಯಿಲ್ಲವೆಂದು ಇನ್ನೊಮ್ಮೆ ಸಾಭಿತುಪಡಿಸುತ್ತಾಳೆ ನೀಲಾಂಬಿಕೆ. ಸಮಾಜದಲ್ಲಿ ಹೆಣ್ಣಿಗೆ ಏನು ನೆಲೆಯಿಲ್ಲದಿದ್ದರು ತಮ್ಮ ಸಾಮಥ್ಯದ ಬಲದಿಂದ ಗಟ್ಟಿಯಗಿ ನಿಲ್ಲುತ್ತೇವೆ ಎಂದು ಇನ್ನು ಅನೇಕ ವಚನಕಾರ್ತಿಯರು ಸಾರಿಸಾರಿ ಹೇಳಿದ್ದಾರೆ. ಅವರಲ್ಲಿ ಮುಕ್ತಾಯಕ್ಕಳು ಒಬ್ಬಳು ಅವಳ ಧೈರ್ಯ ಮತ್ತು ಛಲ ಈ ವಚನದಲ್ಲಿ ವ್ಯಕ್ತವಾಗಿದೆ.

"ಆರು ಇಲ್ಲದವೆವಳೆಂದು ಆಳಿಗೊಳಲುಬೇಡ
ಆಳಿಗೊಂಡು ಆನು ಅಂಜುವಳಲ್ಲ
ಒಲವಿನ ಒತ್ತೆಕಲ್ಲನ್ನು ಬೆವರಿಸಬಲ್ಲೆ ಕಾಣಿರೋ?
ಅವ್ವೆದವರನಪ್ಪದಡೆ ತರಗತಿಯಂತೆ
ರಸವನರಿಮುಂಡೆ ಅಜಗಣ್ಣ ತಂದೆ"[೨೧]

ಮುಕ್ತಾಯಕ್ಕನಿಗೆ ಆತನ ಅಣ್ಣ ಸತ್ತ ಮೇಲೆ ತಾನು ಒಂಟಿಯಾಗಿರುವ ಭಾವವನ್ನು ಕಾಡಿದೆ. ಈ ಮಾತನ್ನು ಹೇಳಿರಬಹುದು. ಏಕೆಂದರೆ ಒಂಟಿಯಾಗಿ ಸಮಾಜದಲ್ಲಿ ಬದುಕುವುದು ಕಷ್ಟ ಎನ್ನುವುದನ್ನು ಮುಕ್ತಾಯಕ್ಕಳು ಮನಗಂಡಂತೆ ಕಾಣುತ್ತದೆ. ಈ ಮೇಲಿನ ವಚನದಲ್ಲಿ ಹೀಗೆ ಹೇಳಿದ್ದಾಳೆ. ನನಗೆ ಈಗ ಯಾರು ಇಲ್ಲವೆಂದು ಆಡಿಕೊಳ್ಳಬೇಡಿ. ನೀವು ಹಾಗೆ ಆಡಿಕೊಂಡರೆ ನಾನು ಅದಕ್ಕೆ ಅಂಜುವಳಲ್ಲ. ನಾನು ನನ್ನ ಶಕ್ತಿ ಸಾಮರ್ಥ್ಯದಿಂದ ಕಲ್ಲನ್ನು ಕರಗಿಸಬಲ್ಲೆ ಎಂದು ಹೇಳುತ್ತಾಳೆ. ಅಂದರೆ ಕೈಲಾಗದ ಹೆಣ್ಣೆಂದು ನೀವು ತಿಳಿಯಬೇಡಿ. ನಾ ಕಷ್ಟ ಪಟ್ಟು ಕೆಲಸ ಮಾಡಿ ನನ್ನ ಮುಂದಿನ ದಿನವನ್ನು ಬದುಕನ್ನು ಸಾಗಿಸಬಲ್ಲ ಸಾಮರ್ಥ್ಯ ಶಕ್ತಿ ನನ್ನಲ್ಲಿದೆ. ಮುಂದಿನ ಬದುಕು ಯಾವ ರೀತಿಯಲ್ಲಿ ಬರುತ್ತದೆ. ಆ ರೀತಿಯಾಗಿ ಎದುರಿಸುತ್ತೇನೆ. ಯಾರು ಇಲ್ಲಿ ನಾ ಬಾಳು ನೀಡುತ್ತೆನೆ ಎಂದು ಮೋಸ ಮಾಡಲು ಒತ್ತಾಯ ಮಾಡಲು ಬಂದವರಾದರೆ ಅದರಿಂದ ನಿಮಗೆ ದೊರೆಯುವುದು ಒಣಗಿದ ಮರವನ್ನು ಅಪ್ಪಿಕೊಂಡು ಅದರಲ್ಲಿ ರಸವನ್ನು ಬಯಸುವಂತೆ ಎಂದು ಮುಕ್ತಾಯಕ್ಕ ಹೇಳುತ್ತಾಳೆ.

ಈ ರೀತಿಯ ವಚನಗಳನ್ನು ನೋಡಿದಾಗ ಮಹಿಳಾ ವಚನಕಾರ್ತಿಯ ಬದುಕು ಛಲ, ಎದುರಿಸುವ ರೀತಿ, ಧೈರ್ಯಗಳು ಹೊಂದಿರುವ ಕಂಡುಕೇಳಿ ನಾಚಬೇಕಾಗಿದೆ. ಆಗಿನ ಕಾಲಘಟ್ಟದಲ್ಲಿ ಈ ರೀತಿ

ಮುಕ್ತವಾಗಿ ಹೇಳದರೇ ಸಮಾಜ ಸರಳವಾಗಿ ಒಪ್ಪಿಕೊಂಡರೆಂಬು ತಿಳಿಯಲು ಸಾಧ್ಯವೇ? ಹೀಗೆ ಹೇಳದ ನುಡಿಗಳಿಗೆ ಏನೆಲ್ಲಾ ಕಷ್ಟ ಅನುಭವಿಸಬೇಕು ದೇವರೆ ಬಲ್ಲ.

ಸಮಜದಲ್ಲಿನ ಲಿಂಗಭೇದ ನೀತಿ ಮತ್ತು ಜೈವಿಕ ಭಿನ್ನತೆ ಮೇಲ್ವರ್ಗಧ ವಚನಕಾರ್ತಿಯರಿಗಂತೂ ಕೆಳವರ್ಗದ ವಚನಕಾರ್ತಿಯರಲ್ಲಿ ಹೆಚ್ಚು ತೀಕ್ಷ್ಣವಾಗಿರುವುದು ಕಾಣಬಹುದು. ಈ ವಿಷಯದ ಕುರಿತು ಗೊಗ್ಗವ್ವೆ ಒಂದು ವಚನ ಹೀಗಿದೆ.

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡು ಹಿಡಿದಡೆ ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ"[೨೨]

ಸಮಾಜದಲ್ಲಿ ಹೆಣ್ಣನ್ನು ಒಂದು ಒಡವೆ ಎಂದು ಪರಿಗಣಿಸಲಾಗುತ್ತದೆ. ಭೋಗದ ವಸ್ತುವಾಗಿರುವಳು ಹೆಣ್ಣು. ಎಂಬುದನ್ನು ನಾವು ೧೨ನೇ ಶತಮಾನದ ವಚನಗಳಿಂದಲು ತಿಳಿಬಹುದಾಗಿದೆ. ಸಾಮಾನ್ಯವಾಗಿ ಒಡವೆ ಎಂದರೆ ವಸ್ತು, ಆಸ್ತಿ, ಆಭರಣ, ಐಶ್ವರ್ಯ, ಸಂಪತ್ತು ಎಂದು ಅರ್ಥಗಳಿವೆ. ಮಹಾಭಾರತದಲ್ಲಿ ದ್ರೌಪದಿ ತನ್ನ ಗಂಡಂದಿರರಿಗೆ ಮಾರಾಟದ ವಸ್ತುವಾದಳು ಎಂಬುದಕ್ಕೆ ಇಲ್ಲಿ ನೆನೆಯಬಹುದು. ಇಂತಹ ಅನೇಕ ಕಥೆಗಳಲ್ಲಿ ಇತಿಹಾಸದಲ್ಲಿ ಹೆಣ್ಣು ಸಾಮಾಜಿಕ ಹಾಗೂ ಕೌಟುಂಬಿಕ ತೀರ್ಮಾನಗಳಲ್ಲಿ ಅಧಿಕಾರದಲ್ಲಿ ತನ್ನ ಅಸ್ತಿತ್ವ ವಿರುವದಾಗಲಿ, ಪಾಲುದಾರಿಕೆ ಇರುವುದಾಗಲಿ ಕಂಡು ಬರುವುದಿಲ್ಲ. ಸದಾ ಎರಡನೇ ದರ್ಜೆಯ ಪ್ರಜೆಯೆ ತೆರೆಯ ಮರೆಯಲ್ಲಿಯೇ ಮೌನವಾಗಿ ಇರುವುದನ್ನು ಕಾಣಿಸುತ್ತದೆ.

ಮಾನವನ ಕ್ರಿಯೆಗಳಿಗೆ ಬೇಕಾಗಿರುವ ಎಲ್ಲಾ ನೆಲೆಗಳು ಪುರುಷರು ಪರವಾಗಿದ್ದಾಗ ಗೊಗ್ಗವ್ವೆ ಈ ಮಾತನ್ನು ಕೇಳುತ್ತಾಳೆ. ಗಂಡು ಹೆಣ್ಣನ್ನು ಮೋಹಿಸಿದಾಗ ಅವಳು ಅವನ ಒಡವೆಯಾಗುತ್ತಾಳೆಯೇ ಹಾಗೆಯ ಹೆಣ್ಣು ಗಂಡನ್ನು ಮೋಹಿಸಿದಾಗ ಅವನು ಅವಳಿಗೆ ಏನಾಗಬೇಕು ಎಂದು ಪ್ರಶ್ನಿಸುತ್ತಾಳೆ. ಮತ್ತು ಗಂಡು ಹೆಣ್ಣಿನ ಆಸ್ತಿಯ ಭಾಗ ವಾಗುವುದಿಲ್ಲ ಏಕೆ? ಗಂಡು ಹೆಣ್ಣು ಸಮಾನವಾದಾಗ ಹೆಣ್ಣಿನ ಪಾಲುಗೊಳ್ಳುವಿಕೆ ಇದ್ದಾಗ ಯಾವ ಉತ್ತರವು ಏಕೆ ದೊರೆಯುವುದಿಲ್ಲ ಎಂಬುದನ್ನು ಪ್ರಶ್ನಿಸುತ್ತಾಳೆ. ಈ ವಚನ ನಮ್ಮ ಸಂಸ್ಕೃತಿಯ ಮುಖಕ್ಕೆ ಹೊಡೆದಂತಿದೆ ಎನ್ನುವುದು ಅಲ್ಲಗಳೆಯುವಂತಿಲ್ಲ. ಈ ಪ್ರಶ್ನೆಯಲ್ಲಿ ಹೆಣ್ಣಿನ ಶತಶತಮಾನಗಳ ನೋವಿನ ಧ್ವನಿಯಿದೆ. ಇಲ್ಲಿ ನಿಜವಾದ ಸ್ತ್ರೀಪರ ಕಾಳಜಿಯಿದೆ. ಹೆಣ್ಣು ಗಂಡಿನ ಭೇದವನ್ನು ಕಳೆಯಬೇಕೆಂದು ಹೇಳುವಲ್ಲಿ ಪರಿಪೂರ್ಣತೆ ಅಡಗಿದೆ ಎಂಬ ಸತ್ಯವನ್ನು ಹೇಳಿದ್ದಾಳೆ. ಇದು ಇಂದಿಗೂ ಪ್ರಸ್ತುತವಾಗಿದೆ.

ಹೆಣ್ಣಿನ ಜೈವಿಕ ಭಿನ್ನತೆಯ ಕುರಿತು ಮೇಲ್ವರ್ಗದ ವಚನಕಾರ್ತಿಯರಲ್ಲಿ ಕಂಡು ಬರುವುದಕ್ಕಿಂತಲೂ ಹೆಚ್ಚು ತೀಕ್ಷಣವಾಗಿ ಕೆಳವರ್ಗದ ವಚನಕಾರ್ತಿಯರಲ್ಲಿ ಕಂಡುಬರುತ್ತವೆ. ಲಿಂಗ ಅಸಮಾನತೆ ಕುರಿತಂತೆ ಸಮಸ್ತ ವಚನಕಾರರಿಗೂ ಮತ್ತು ವಚನಕಾರ್ತಿಯರಿಗೂ ಕಾಡಿರುವ ಪ್ರಶ್ನೆಯೊಂದಿಗೆ ಹೆಣ್ಣು ಮತ್ತು ಗಂಡಿನ ಅಸಮಾನತೆ ನೈಸರ್ಗಿಕವಾದ ಜೈವಿಕ ಭಿನ್ನತೆ ಹೊರತಾಗಿ ಎಲ್ಲದರಲ್ಲೂ ಸಮಾನಳಾದರೂ ಸಮಾಜದಲ್ಲಿನ

ಈ ಗಂಡಿನ-ಹೆಣ್ಣಿನ ಭೇದವನ್ನು ಕುರಿತು ಎಲ್ಲಾ ವಚನಕಾರರೂ ಪ್ರಶ್ನಿಸುತ್ತಾರೆ. ಇಂತಹುದೇ ಪ್ರಶ್ನೆಯೊಂದಿಗೆ ಗೊಗ್ಗವ್ವೆಯು ಹೀಗೆ ಹೇಳುತ್ತಾಳೆ.

"ಮಾಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯ ಜ್ಞಾನ ಹೆಣ್ಣೊ ಗಂಡೋ ನಾಸ್ತಿನಾಥ?"[೨೩]

ಸಾಮಾನ್ಯವಾಗಿ ದೇಹದಲ್ಲಿ ಆಗುವ ಜೈವಿಕ ಭಿನ್ನತೆಯಿಂದ ದೇಹದ ಮೇಲೆ ಕಂಡುಬರುವ ಅಥವಾ ಗುರುತಿಸುವ ಚಿಹ್ನೆಯ ಮೇಲೆ ಗಂಡು ಹೆಣ್ಣು ಎಂದು ಗುರುತಿಸುತ್ತೀರಿ. ಆದರೆ ಒಳಗಡೆ ಇರುವ ಆತ್ಮ, ಮನಸ್ಸು, ಜ್ಞಾನ, ಅರಿವು, ತಿಳುವಳಿಕೆಗೆ ಯಾವ ರೀತಿಯಿಂದ ಗಂಡು-ಹೆಣ್ಣು ಎಂದು ಗುರುತಿಸುವಿರಿ ಎಂದು ಪ್ರಶ್ನಿಸುತ್ತಾಳೆ ಗೊಗ್ಗವ್ವೆ.

ಇಂತಹದೇ ಲಿಂಗ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದೆ. ಇನ್ನೊಬ್ಬ ವಚನಕಾರ್ತಿಯೆಂದರೆ ಸತ್ಯಕ್ಕ ಅದೇನೆಂದರೆ,

"ಮಾಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದರೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ, ಬಲ್ಲವರ ನೀತಿಯಲ್ಲ
ದಿತರ ಹೆಣ್ಣಾದಡು ಮಧರವೇ ಕಾರಣ
ಇಂದರಂದವ ನೀನೆ ಬಲ್ಲೆ ಶಂಭುಜಕ್ಕೇಶ್ವರಾ"[೨೪]

ರವಿ ಕಾಣದನ್ನು ಕವಿ ಕಂಡ ಎನ್ನುವಂತೆ ಲೋಕ ಅರಿಯದ ಎಷ್ಟೋ ವಿಷಯಗಳು ವಚನಕಾರರು/ವಚನಕಾರ್ತಿಯರಿಗೆ ಕಂಡಿವೆ. ಅದಕ್ಕೆ ಸಾಕ್ಷಿಯಾಗಿ ಸತ್ಯಕ್ಕನ ಈ ವಚನ ಕಾಣಸಿಗುತ್ತದೆ. ಮೊಲೆಮುಡಿ ಕಂಡು ಹೆಣ್ಣಾಗಿ ಕಂಡರು. ಅವಳನ್ನು ಕಾಮದಿಂದ ಕಾಣವರು ವೈರಿಗಳ ಜೊತೆ ಕಾದಾಡುವ ಶೂರತನದ ಸಂಕೇತವಾಗಿ ಗಡ್ಡ ಮೀಸೆಗಳ್ಳವನನ್ನು ಗಂಡಾಗಿ ಕಂಡರು. ಯಾವ ರೀತಿ ಸೀರೆ ಉಟ್ಟರೆ ಹೆಣ್ಣೆಂದು ಭಾವಿಸುವುದು ಇದು ಬಲ್ಲವರ ನೀತಿಯಲ್ಲ ಯಾವ ಹೆಣ್ಣಾದರೂ ಅದರ ರಸವೇ ಮುಖ್ಯವಾಗುತ್ತದೆ. ಅದರ ರಸದ ಸ್ವಾದ ಮುಖ್ಯವೆನಿಸಿಕೊಳ್ಳುತ್ತದೆ. ಬದಲಾಗಿ ಅದರ ಬಾಹ್ಯ ಸೌಂದರ್ಯವಲ್ಲ, ಅವಿವೇಕಿಗಳ ಈ ನೀತಿಯನ್ನು ದೇವ ನಿನ್ನೇ ಬಲ್ಲೆ ಎನ್ನುತ್ತಾಳೆ ಸತ್ಯಕ್ಕ.

ಶರಣರು ಲಿಂಗ ಸಮಾನತೆಯನ್ನು ಸಾರಿದರು. ಹೆಣ್ಣು-ಗಂಡು ಇಬ್ಬರು ಜ್ಞಾನಾರ್ಜನೆಯಲ್ಲಿ ಸಾಧನೆಯ ದಾರಿಯಲ್ಲಿ ಸಮಾನರು. ಕೌಟುಂಬಿಕ ಸಂಸಾರವನ್ನು ಒಪ್ಪಿಕೊಂಡವರು ಸತಿಪತಿಗಳು ಒಬ್ಬರಿಗೊಬ್ಬರು ಸಹಾಯಕರಾಗಿ ಪ್ರೇರಕರಾಗಿ ಸಾಧನೆಯಲ್ಲಿ ಮುಂದೆ ಸಾಗಬೇಕು ಎಂದು ಸಾರಿದವರು. ಸಾಧಕರು ಸಾಧನೆಯ ಗುರಿಯ ಕಡೆಗೆ ಲಕ್ಷವಿರಬೇಕು. ಮತ್ತು ತಮ್ಮ ಚಂಚಲತೆ ಚಪಲತೆಯ ಮೇಲೆ ತಮಗೆ ನಿಯಂತ್ರಣವಿರಬೇಕು. ಹೊರತು ಸಾಧನೆಗೆ ಹೆಣ್ಣು, ಮಣ್ಣು, ಹೊನ್ನು, ಐಚ್ಛಿಕ ಸುಖ, ಇಂದ್ರಿಯಗಳು, ಸಾಧನೆಗೆ ತೊಡಕು ಎನ್ನವುದು ಸರಿಯೇ ಎಂಬ ಪ್ರಶ್ನೆಯನ್ನು ಗಣೇಶ ಮಸಣಯ್ಯನ ಪುಣ್ಯಸ್ತ್ರಿ ತನ್ನ ವಚನದಲ್ಲಿ ಹೀಗೆ ಹೇಳಿದ್ದಾಳೆ.

"ಹೊನ್ನು ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಗೂ ಲಿಂಗಕ್ಕೂ ವಿರುದ್ದವೇ?
ಮಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯು ಲಿಂಗಕ್ಕೆಯೂ ವಿರುದ್ಧವೆ?

ಅರಿವಿಂದ ಕಂಡೊದಗಿದ ಸುಖವು ಮಸಣಯ್ಯಾ ಪ್ರೀಯಾ ಗಜೇಶ್ವರಾ"[೨೫]

ಇದರಂತೆ ಲಿಂಗಕ್ಕೂ, ಇಂದ್ರಿಯಗಳಿಗೂ, ಜಗಕ್ಕೂ, ಲಿಂಗಕ್ಕೂ ವಿರೋಧವಿದೆಯೇ? ಎಂದು ಪ್ರಶ್ನಿಸುತ್ತಾ ಇದು ನಮ್ಮ ಅರಿವಿನಿಂದ ಕಂಡುಕೊಳ್ಳುವ ಸುಖವಾಗಿದೆ. ಇಲ್ಲಿ ಯಾವುದಕ್ಕೂ ಯಾರಿಗೂ ವಿರೋಧವಿಲ್ಲ ಎನ್ನುವ ಮಾತು ಹೇಳುತ್ತಾಳೆ.

ಈ ಹೀಗೆ ಸಮಸ್ತ ವಚನಕಾರ್ತಿಯರು ೧೨ನೇ ಶತಮನದ ಕಾಲ ಘಟ್ಟದಲ್ಲಿಯೇ ತಮ್ಮ ವೈಚಾರಿಕತೆ, ಅರಿವು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ ಹೆಣ್ಣಿನ ಕುರಿತಾದ ಅಸಮನತೆಯ ವಿರುದ್ಧ ಧ್ವನಿ ಎತ್ತಿದ್ದಾರೆ. ತಮ್ಮಗೆ ಎದುರಾದ ಹೆಣ್ಣತನ ವಿಷಯ ಕುರಿತು ನಿರ್ಭಿತಿಯಿಂದ ಪ್ರಶ್ನೆಗಳ ಕೇಳಿದ್ದಾರೆ. ಅವರು ಕೇಳಿದ ಪ್ರಶ್ನೆಗಳಿಗೆ ಸಮಾಜವು ಕೆಲವು ಕಡೆ ತಲೆ ತಗ್ಗಿಸಿ, ಉತ್ತರ ನೀಡದಂತಾಗಿದ್ದಾರೆ. ಅವರು ಕೇಳಿದ ಕೆಲವು ಪ್ರಶ್ನೆಗಳಿಗೆ ಇಂದಿಗೂ ಉತ್ತರ ದೊರೆಯದೇ ಮುಕರಗಿದ್ದಾರೆ. ಈ ರೀತಿಯಲ್ಲಿ ವಚನಕಾರ್ತಿಯರು ತಮ್ಮ ಹೆಣ್ಣತನ ಸೀಮೆಯನ್ನು ದಾಟಿ ಪ್ರತಿಭಟಿಸಿ , ವಿರೋಧಿಸುವ ಮೂಲಕ ಹೆಣ್ಣಿನ ಸ್ಥಾನಮಾನ ಗೌರವಗಳನ್ನು ಎತ್ತಿ ಹಿಡಿದಿದ್ದಾರೆ.

೩.೩. ವ್ರತ ನಿಯಮ, ಆರಾಧನೆಗಳ ಸಂಸ್ಕಾರ ನೀಡಿದ ವಚನಕಾರ್ತಿಯರು :

ಮನುಷ್ಯನು ಪರಮಾತ್ಮನನ್ನು ಒಬ್ಬ ಮಹಾನ ಶಕ್ತಿಯುಳ್ಳ ವ್ಯಕ್ತಿಯಂತೆ ಕಲ್ಪಿಸಿಕೊಂಡು ಅವನಿಗೆ ಎಲ್ಲಾ ರೀತಿ ಮಾನವಗುಣಗಳನ್ನು ಆರೋಪಿಸುವುದುಂಟು. ಆದರೆ ಕೆಲವು ವೇಳೆ ಈ ಮಾನವನು ಆರೋಪ ಅತಿರೇಕ್ಕೆ ಹೋಗುವುದು. ಜನರ ವ್ರತಶೀಲ, ನೇಮಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಉದಾ: ಉಪವಾಸ ಮಾಡುವುದು, ರಾತ್ರಿಯಲ್ಲಿ ಜಾಗರಣೆ ಮಾಡುವುದು ರಾತ್ರಿಯಲ್ಲಿ ಜಾಗಣೆ ಮಾಡುವುದು, ಹಳ್ಳ ಹೊಳೆಗೆ ಹೋಗಿ ಛಳಿಯಲ್ಲಿ ತಣ್ಣಿರೊಳಗೆ ಮುಳುಗುವುದು, ಅಕ್ಕಿ, ಬೆಳೆ, ಬೆಲ್ಲ, ಉಪ್ಪು, ಮೆಣಸು, ಶರಣರು ಅಡಿಕೆ ಫಲ ರಸದ್ರವ್ಯ ಮುಂತಾದ ಆಹಾರ ಪದಾರ್ಥಗಳ ವತ್ರವು ಖಂಡಿಸಿದ್ದಾರೆ ಇದಲ್ಲದೆ ವಚನಕಾರ್ತಿಯ ಇವೆಲ್ಲವನ್ನು ಖಂಡಿಸಿದ್ದಾಗೆ. ಅವುಗಳು ಯಾವ ರೀತಿಯಲ್ಲಿವೆ ಎಂದು ಗಮನಿಸೋಣ.

ಇಂತಹ ವ್ರತವನ್ನು ಖಂಡಿಸಿ ನಮ್ಮ ವ್ರತಗಳು ಯಾವರೀತಿ ಇರಬೇಕು. ಡಾಂಭಿಕವಾಗಿ ಮಾಡುವ ವ್ರತನಿಯಮಗಳು, ದೇವರಿಗೆ ಸಲ್ಲದು ಎನ್ನುವಂತಹ ಅನೇಕ ವಿಷಯಗಳನ್ನು ವಚನಾಕಾರ್ತಿಯರು ತಿಳಿಸಿದ್ದಾರೆ. ಈ ವ್ರತದ ಬಗ್ಗೆ ಇರುವ ವಚನಗಳನ್ನು ನಾವು ಹೆಚ್ಚಾಗಿ ಅಕ್ಕಮ್ಮನಲ್ಲಿ ಕಾಣಬಹುದು. ಈ ಆಹಾರ ಪ್ರದಾರ್ಥಗಳಿಂದ ಮಾಡುವುದು ವ್ರತವಲ್ಲ ಎನ್ನುವ ಅಕ್ಕಮ್ಮನ ಒಂದು ವಚನವು ಹೀಗಿದೆ.

"ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು
ಆದರೆ ಫಲ ರಸದ್ರವ್ಯ ಮುಂತಾದ
ದ್ರವ್ಯಕ್ಕೆ ವ್ರತವೂ? ಮುಟ್ಟುವ ತಟ್ಟುವ
ಸೋಂಕುವ ಚಿತ್ತಕ್ಕೆ ವ್ರತವೂ?
ಇವು ಬಾಹ್ಯದಲ್ಲಿ ಮಾಡುವ ಸೌಕರಿಯವಲ್ಲದೆ ವ್ರತಕ್ಕೆ ಸಲ್ಲ
ವ್ರತವಾವುದೆಂದಡೆ
ತನ್ನಯ ಸ್ವಪ್ನದಲ್ಲಿ ತನಗಲ್ಲಮದ ಕಂಡಡೆ
ತಾ ಮುಟ್ಟಿದುದ ಮಟ್ಟಿದಡೆ, ತಾಕೊಳ್ಳದುದ ಕೊಂಡಡೆ
ಆ ಸೂಕ್ಷ್ಮ ತನುವಿನಲ್ಲಿ ಆತನುವಂ ಬಿಟ್ಟು ನಿಂದುದ ವ್ರತ.

....

ಆತ್ಮರಿಗೆ ಅನುಸರಣೆಯಾದಲ್ಲಿ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಸಲ್ಲಿದನೇಮ"[೨೬]

ಈ ವಚನದಲ್ಲಿ ಅಕ್ಕಮ್ಮ ಸ್ಪಷ್ಟವಾಗಿ ಅಡಿಗೆ ಮನೆಯಲ್ಲಿಯ ದ್ರವ್ಯ ಪ್ರದರ್ಥಗಳನ್ನು ಬಿಡುವುದು ಕುರಿತಾಗಿದೆ. ಹಾಗಾಗಿ ಮನುಷ್ಯನಿಗೆ ವ್ರತವೂ ಅಲ್ಲಿರುವ ದ್ರವ್ಯಗಳಿಗೆ ವ್ರತವೂ ಎಂದು ಪ್ರಶ್ನಿಸುತ್ತಾಳೆ. ಮುಟ್ಟುವದು ತಟ್ಟುವದು ವ್ರತವಲ್ಲ. ವ್ಯಥವಾಗಿ ಮಡಿ ಮಡಿಯೆಂದು ಮನೆಯವರೆಲ್ಲ ವ್ರತದ ಹೆಸರಲ್ಲಿ ಉಪವಾಸ ಕೆಡವುದು, ವ್ರತನಿಯಮವೆಂದ್ರುಲ್ಲಿ ಮುಟ್ಟಬೇಡ, ಇಲ್ಲಿ ಮುಟ್ಟಬೇಡ ಎಂದು ತಲೆಯ ತುಂಬಾ ಯಾವ ಯೋಚನೆಗಳಲ್ಲಿದೆ ಯಾರು ಬಂದು ಎಲ್ಲಿ ಮುಟ್ಟುವರು ಎಂಬ ಭಯದಲ್ಲಿಯೇ ಇರುವುದು, ಮುಟ್ಟಿದರೆ ವ್ರತ ಹೋಗುತ್ತದೆ ಎನ್ನುವದು ಇದು ನಮ್ಮ ಗಮನಕ್ಕೆ, ಚಿತ್ತಕ್ಕೆ ತಗುಳಿದ ಸೋಂಕು ಎಂದು ಹೇಳುತ್ತಾಳೆ. ಅಕ್ಕಮ್ಮ ನಾವು ಜಾಗೃತ ಚಿತ್ತದಲ್ಲಿದ್ದಾಗ ಮುಟ್ಟಬಾರದು ಎಂದು ನಿಯಮ ನಿಬಂಧರ್ಥದದೊಂದಿಗೆ ಇದು, ಸೂಪ್ತ ವ್ಯವಸ್ಥೆಗೆ ಜಾರಿ ಕನಸಿನಲ್ಲಿ ಅವುಗಳನ್ನು ಮುಟ್ಟಿದೆ ಎಂದು ಭ್ರಮೆಗೆ ಒಳಗಾಗುವ ಸಾಧ್ಯತೆ ಉಂಟಾಗುತ್ತದೆ, ಹಾಗಾಗಿ ಇದು ವ್ರತ ಅಲ್ಲ. ಅಂತರಂಗದಲ್ಲಿ ವೃತ ಬಹಿರಂಗದಲ್ಲಿ ಆಚಾರಣೆಗೊಂಡಾಗ ಮಾತ್ರ ಅದು ವ್ರತವಾಗುತ್ತದೆ ಎಂದು ಅಕ್ಕಮ್ಮ ತನ್ನ ವಚನದಲ್ಲಿ ಹೇಳಿದ್ದಾಳೆ. ಈ ವ್ರತ ಆಚರಣೆಗಳಿಗೆ ಅನೇಕ ರೀತಿಯ ಶೀಲವನ್ನು ಮಾಡುತ್ತಾರೆ. ಈ ವ್ರತ ಶೀಲದ ಹೆಸರಿನಲ್ಲಿ ಮೋಸವನ್ನು ಮಾಡುತ್ತಾರೆ. ಅದನ್ನು ಕುರಿತು ಅಕ್ಕಮ್ಮ ಹೀಗೆ ಹೇಳುತ್ತಾಳೆ.

"ಮಣ್ಣ ಮಡಿಕೆಯ ಮುಸುಕಿಟ್ಟು ಗನ್ನದಲ್ಲಿ ನೀರು ತುಂಬಿ
ಇವರಿಗೆ ಬಿನ್ನಣದ ತೋರುತ
ಇಂತೀ ಬಣ್ಣ ಬಚ್ಚಣೆಯ ಶೀಲದ ನಾನೆಪ್ಪ
ಇದಿರು ಕಂಡಲ್ಲಿ ಹಾಕಿ ಆರೂ ಕಾಣದಡೆ ತಾನೊಪ್ಪಿಕೊಂಡಿಪ್ಪ
ಭಂಡನ ಶೀಲ ಮೂರು ಕುಂಡೆಯೊಳಗಾಯಿತ್ತು?
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವು ತಾನೇ"[೨೭]

ಇಲ್ಲಿ ಅಕ್ಕಮ್ಮ ಮೋಸದಿಂದ ಮಾಡುವ ಶೀಲವನ್ನು ಕುರಿತು ಹೇಳಿದ್ದಾಳೆ. ಮೋಸದಿಂದ ಮಣ್ಣಿನ ಮಡಿಕೆಯಲ್ಲಿ ನೀರು ತುಂಬಿಟ್ಟು ಎದುರಿಗೆ ಢಿಂಕವನ್ನು ತೋರಿಸುವ ಶೀಲವನ್ನು ಒಪ್ಪಲಾಗದು ಎನ್ನುತ್ತಾಳೆ.

ಶರಣೆ ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆಯು ೧೨ನೇ ಶತಮಾನ ವಚನಕಾರ್ತಿಯರಲ್ಲಿ ಒಬ್ಬಳ ಇವಳ ಒಂದು ವಚನ ದೊರೆತಿದೆ. ಈ ವಚನದಲ್ಲಿ ವ್ರತದ ಬಗ್ಗೆ ವೃತದ ಆಚರಣೆಯಲ್ಲಿ ಇರಬೇಕಾಗಿರುವ ನಿಷ್ಠೆಯ ಕುರಿತು ಚಿಕ್ಕದಾಗಿ, ಚೊಕ್ಕದಾಗಿ, ಸ್ಪಷ್ಟವಾಗಿ ಮತ್ತು ಇತರರಿಗಿಂತ ವಿಶಿಷ್ಟವಾಗಿ ಹೇಳಿದ್ದಾಳೆ. ಆ ವಚನವು ಹೀಗಿದೆ.

"ತನು ಬತ್ತಲೆಯಾದಡೇನು, ಮನ ಬತ್ತಲೆಯಾದಡನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ?
ನೆರೆದಡೆ ನರಕವಯ್ಯಾ ನಿಂಬೇಶ್ವೇರಾ"[೨೮]

ಇಲ್ಲಿ ಗುಡ್ಡವ್ವೆ ಈ ವ್ರತವು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡಬೇಕು. ಶುದ್ಧ ಮನಸ್ಸಿನಿಂದ ಮಾಡಿದ ವ್ರತಚಾರಣೆ ಶ್ರೇಷ್ಠವೆನಿಸಿಕೊಳ್ಳುತ್ತದೆ. ಮಾಡುವ ಆಚರಣೆಯಲ್ಲಿ ತನು-ಮನ ಅಂದರೆ ಅಂತರಂಗ ಮತ್ತು ಬಹಿರಂಗ ಎರಡರಲ್ಲೂ ಶುದ್ಧಿಯಿಂದ ಮಾಡಬೇಕು. ಅಂತರಂಗ ಶುದ್ಧಿಯಿಲ್ಲದೆ ಕೇವಲ ಬಹಿರಂಗದಲ್ಲಿ ಅಂದರೆ ತೋರಿಕೆಗೆ ಮಾಡುವ ವ್ರತವೆನಿಸಿಕೊಳ್ಳುವುದಿಲ್ಲ. ಅದು ವ್ರತ ಹೀನವೆಂದುನಿಸಿಕೊಳ್ಳುತ್ತದೆ. ಇಂತಹ ವ್ರತ ಹೀನರ ಸಹವಾಸ ಮಾಡಿದರಿಗೆ ನರಕ ತಪ್ಪದು ಎಂದು ಸ್ಪಷ್ಟವಾಗಿ ಹೇಳಿದ್ದಾಳೆ. ಹೀಗೆ ಗುಡ್ಡವ್ವ ವ್ರತದ ಕುರಿತು ನೇರವಾಗಿ ಮನಕ್ಕೆ ಓದುಗರ ಮನಕ್ಕೆ ನಾಟುವಂತೆ ಹೇಳಿದ್ದಾಳೆ.

ವ್ರತ ಮತ್ತು ಕಾಯಕವನ್ನು ಕುರಿತು ಚಿಕ್ಕದಾಗಿ ಚೊಕ್ಕದಾಗಿ ವಚನವು ರಚಿಸಿದವರಲ್ಲಿ ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವೆಯು ಒಬ್ಬಳು. ಇವಳ ಎರಡು ವಚನಗಳಲ್ಲಿ ವ್ರತ ಮತ್ತು ಕಾಯಕವನ್ನು ಕುರಿತು ಹೇಳಿದ್ದಾಳೆ. ಆ ವಚನಗಳು ಹೀಗಿವೆ.

"ಕಾಯಕ ತಪ್ಪಿದಡೆ ಸೈರಿಸಬಾರದು ವ್ರತ ತಪ್ಪರಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ"[೨೯]

ಇಲ್ಲಿ ತಪ್ಪು ಮಾಡಿದರೆ ಅದ್ನನು ಸಹಿಸಕೊಳ್ಳಬಾರದು ಅದು ಕಾಯಕವೇ ಆಗಲಿ ವ್ರತವೇ ಆಗಲಿ ಯಾವುದಾದರೂ ಸರಿ ಇವುಗಳಲ್ಲಿ ಮಾಡಿದ ತಪ್ಪನ್ನು ಸಹಿಸಿಕೊಳ್ಳಬಾರದು ಎಂದು ಒಂದೇ ನುಡಿಯಲ್ಲಿ ನುಡಿದ್ದಾಳೆ. ಇಲ್ಲಿ ಕರ್ಮಹರ ಕಾಳೇಶ್ವರ ಎನ್ನುವದು ಅವಳ ಅಂಕಿತ ನಾಮವಾಗಿದೆ ಇನ್ನೊಂದು ತಪ್ಪಿಗೆ ಮುಂದೆ ಒಂದು ದಿನ ಕಾಳೇಶ್ವರ ಕರ್ಮ ತಪ್ಪದು ಎಂದು ದೃಷ್ಟಾಂತದಂತೆ ಬಳಸಿರುವ ಕಾಣಬಹುದು. ಇಲ್ಲಿ ಒಂದು ರೀತಿಯಲ್ಲಿ ಮಾಡಿದ ತಪ್ಪಿಗೆ ಶಿಕ್ಷೆ ತಪ್ಪದು ಎಂದ ನೇರವಾಗಿ ನುಡಿದಂತಿದೆ ಈ ಕಾಳವ್ವೆಯ ವಚನ. ಕಾಳವ್ವೆಯ ಇನ್ನೊಂದು ವಚನವು ಕಾಯಕ, ವ್ರತ, ನುಡಿಯ ಕುರಿತದ್ದುವಾಗಿದೆ. ಆ ವಚನವು ಹೀಗಿದೆ.

"ಕೈ ತಪ್ಪಿ ಕತ್ತಲು ಕಾಲಿಗೆ ಮೂಲ
ಮಾತು ತಪ್ಪಿ ನುಡಿಯು ಬಾಯಿಗೆ ಮೂಲ
ವ್ರತಹೀನನ ನೆರೆಯಲು ನರಕಕ್ಕೆ ಮೂಲ
ಕರ್ಮಹರ ಕಾಳೇಶ್ವರ"[೩೦]

ಈ ವಚನದಲ್ಲಿ ಕಾಯಕವನ್ನು ಕುರಿತು ಹೇಳಿರುವನು ಮೊದಲನೆ ಸಾಲಿನಲ್ಲಿ ಕೈತಪ್ಪಿ ಕೆತ್ತಿದ ಯಾವುದೇ ಕೆಲಸವು ಅದು ನಮ್ಮ ಕಾಲಿಗೆ ಮೂಲವಾಗುವುದು. ಇಲ್ಲಿ ಮೂಲವೆಂದರೆ ದೋಷ ಮತ್ತು ಮುಖ್ಯಮೂಲ ಎಂಬ ಅರ್ಥವನ್ನು ಪಡೆದಿದೆ. ಇಲ್ಲಿ ಕೈ ತಪ್ಪಿನಿಂದ ಆದ ಕೆತ್ತನೆ ಅದು ಕಟ್ಟಿಗೆ ಆಗಿರಬಹುದು ಅಥವಾ ಕಲ್ಯಾಣಿರಬಹುದು ಅದುಕಾಲಿಗೆ ತೊಂದರೆ ಕೊಡುವ ರೀತಿಯಲ್ಲಿ ಅಲ್ಲಿಂದ, ಇಲ್ಲಿ ಇಲ್ಲಿಂದ ಅಲ್ಲಿ ಎತ್ತಿಡುವದೇ ಆಗುತ್ತದೆ. ಈ ವಾಕ್ಯವನ್ನು ತೆಗೆದುಕೊಂಡಾಗ ನಾವು ಆಡು ಭಾಷೆಯಲ್ಲಿ ಯಾರಿಗಾದರೂ ಬೈವುದಾದರೇ' ಎಲ್ಲಾ ನಿನ್ನ ಕಾಲೀಗೇ ಆಯಿತು' ಎಂದು ಬೈದಿರುವುದು, ಬೈಯಿಸಿಕೊಂಡಿರುವುದು ಆಗಿದೆ. ಅವೇ ರೀತಿ

ಮಾತು ತಪ್ಪಿ ನುಡಿಯುವ ಬಾಯಿಗೆ ಮೂಲ ಎನ್ನುವ ಹಾಗೆ ಆಡುವರ ಬಾಯಿಗೆ ಗುರಿಯಾಗುವುದು ಎಂತಲೂ ನಾವು ಇಲ್ಲಿ ಭಾವಿಸಬಹುದು. ಅದೇ ರೀತಿ ವ್ರತ ಹೀನನಾದರೆ ನಾವು ನರಕಕ್ಕೆ ಮೊದಲು ಎಂದು ಹೇಳುತ್ತಾಳೆ. ಹೀಗೆ ವ್ರತವನ್ನು ಕುರಿತು ಹೇಳಿದಾಗೆಲ್ಲ ನರಕ ತಪ್ಪದು ಎಂಬ ನುಡಿಯನ್ನು ಹೇಳಿದ್ದಾಳೆ.

ಈ ವ್ರತದ ಮತ್ತು ಕಾಯಕವನ್ನು ಕುರಿತು ಬರೆದ ವಚನಕಾರ್ತಿಯರಲ್ಲಿ ಹಾದರ ಕಾಯಕದ ಮಾರಯ್ಯ ಪುಣ್ಯಸ್ತ್ರೀ ಗಂಗಮ್ಮನ ವಚನವು ಒಂದು ಇವಳು ವ್ರತ್ತಿಯು ವೈಶ್ಯ ವೃತ್ತಿಯಾಗಿದೆ. ಈ ವೃತ್ತಿಯಿಂದಲೇ ಜೀವನ ಸಾಗುತ್ತಿತು. ಹಾಗಾಗಿ ಉದರ ನಿಮಿತ್ಯ ಮಾಡಿದರೂ ಅದು ಶ್ರದ್ಧೆಯಿಂದ ಮಾಡಬೇಕು ಎಂದು ಹೇಳುವ ಒಂದು ವಚನ ಹೀಗಿದೆ.

"ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯ
ಆವ ವ್ರತವಾದಡೂ ಒಂದೇ ವ್ರತವಯ್ಯಾ
ಆಯ ತಪ್ಪಿದಡೆ ಸಾವಿಲ್ಲ, ವ್ರತತಪ್ಪಿದಡೆ ಕೂಡಲಿಲ್ಲ
ಕಾಕಪಿಕದಂತೆ ಕೂಡಲು ನಾಯಕನರಕ ಗಂಗೇಶ್ವರಲಿಂಗದಲ್ಲಿ"[೨೦]

ಇಲ್ಲಿ ಗಂಗಮ್ಮ ಕೀಳು ಕುಲದಿಂದ ಬಂದವಳೆಂದು ಭಾವದ ಧ್ವನಿ ಈ ವಚನದಲ್ಲಿ ವ್ಯಕ್ತವಾಗಿದೆ. ಅದಕ್ಕಾಗಿಯೇ ಅವಳು ಯಾವ ಕಾಯಕವೂ ಮಡಿದರೂ ಒಂದೇ ಎಂಬ ಭಾವ ವ್ಯಕ್ತಪಡಿಸುತ್ತಾಳೆ. ಯಾವ ವ್ರತಮಾಡಿದರೂ ಎಲ್ಲಾ ವ್ರತಗಳು ಒಂದೇ ಎನ್ನುತ್ತಾಳೆ. ಇಲ್ಲಿ ಕಾಯಕಕ್ಕೆ ಸಮಾನತೆ ಮತ್ತು ವ್ರತ ನಿಷ್ಠೆಯನ್ನು ಕುರಿತು ಹೇಳಿದ್ದಾಳೆ. ಅದಕ್ಕಾಗಿಯೇ ವ್ರತ ನಿಷ್ಠರು ವ್ರತವು ತಪ್ಪಿದಡೆ ಅವರಿಗೆ ಸಾವಿಲ್ಲ ಆದರೇ ಒಂದು ರೀತಿ ಪಾಪಿಯ ಜನ್ಮವಾಗುತ್ತದೆ ಎಂದು ಹೇಳಿದ್ದಾಳೆ. ವ್ರತತಪ್ಪಿದಡೆ ಕೂಡಲಿಲ್ಲ. ವ್ರತನಿಷ್ಠರು ವ್ರತಹೀನರೊಂದಿಗೆ ಸ್ನೇಹ ಬೆಳಸುವಂತಿಲ್ಲ. ಹಾಗೇ ಬೆಳಸಿದ್ದಾದಲ್ಲಿ ಕೋಗಿಲೆ, ಕಾಗೆಯ ನಂಟಸ್ತಿಕೆ ಬೆಳಸಿದಂತೆ ಅನಿಸುತ್ತದೆ. ಒಂದು ರೀತಿ ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಏಳದಂತಾಗುತ್ತದೆ. ಎರಡರಲ್ಲೂ ತಾಳಮೇಳ ವಿಲ್ಲದಂತೆ ವ್ರತನಿಷ್ಠುರ ಮತ್ತು ವ್ರತಹೀನರ ಕೂಟವಾಗುತ್ತದೆ ಎಂದು ಉದಾಹರಣೆಯೊಂದಿಗೆ ಹೇಳಿದ್ದಾಳೆ. ಇಂತಹ ಕೂಟ ನರಕಕ್ಕೆ ಸಮಾನವೆಂದು ಹೇಳಿ ವ್ರತದ ಮಹಿಮೆಯನ್ನು ಎತ್ತಿ ಹಿಡಿದಿದ್ದಾಳೆ.

ವ್ರತದ ನಿಷ್ಠೆಯನ್ನು ಪಾಲನೆ ಯಾರಿಗೆ ಎಂಬುದರ ಕುರಿತು ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮನ ವಚನದಲ್ಲಿಯು ಕಂಡು ಬರುತ್ತದೆ ಆ ವಚನ ಹೀಗೆ.

"ಗರಡಿಯಲ್ಲಿ ಕೊಲ್ಲಲ್ಲದೆ ಕಾಳಗದಲ್ಲಿ ಕೊಲುಂಟೆ?
ಭವಿಗೆ ಮೇಲುವ್ರತ ಮನದೀಕ್ಷೆಯಲ್ಲದೆ ಭಕ್ತರಿಗುಂಟೆ?
ವ್ರತ ತಪ್ಪಲು ಶರೀರವಿಡಿದ ನರಕಿಗೆ ಮುಕ್ತಿಯಿಲ್ಲ
ಅಮುಗೇಶ್ವರಲಿಂಗದಲ್ಲಿ"[೩೨]

ಈ ವಚನವು ವ್ರತದ ದೀಕ್ಷೆ ಭವಿಗೆ ನೀಡಬೇಕು ಅಂದರೆ ಭಕ್ತನಲ್ಲದನಿಗೆ ನೀಡಬೇಕು ಆಗತ್ತದೆ ಭಕ್ತನಿಗೆ ಯಾವ ದೀಕ್ಷೆ ನೀಡಲು ಸಾಧ್ಯ. ದೀಕ್ಷೆ ನೀಡುವುದು ಒಂದೇ ಸಾರಿ. ದೀಕ್ಷೆ ಪಡೆದವರಿಗೆ ಪುನಃಪುನಃ ನೀಡಲು ಬರುವದಿಲ್ಲ. ಹಾಗೆ ದೀಕ್ಷೆ ಭಕ್ತರಿಗೆ ನೀಡುವುದುಂಟೆ ಈ ದೀಕ್ಷೆ ಪಡೆದು ವ್ರತದಂತೆ ಪಾಲಿಸದೆ ತಪ್ಪಿದಲ್ಲಿ ಆ ಶರೀರ ನರಕ್ಕೆ ಹೋದರು ಮುಕ್ತಿಯಿಲ್ಲ ಎಂದು ರಾಯಮ್ಮಳು ಹೇಳಿದ್ದಾಳೆ. ಇಲ್ಲಿನ ಮೊದಲುಸಾಲು ಗರಡಿಯಲ್ಲಿ ಕೊಲಲ್ಲದೆ ಕಾಳಗದಲ್ಲಿ ಕೊಲುಂಟೆ? ಎಂಬ ಹೇಳಿಕೆ ಈ ಭವಿ ಮತ್ತು ಭಕ್ತನಿಗೆ ವೃಷ್ಟಾಂತವಾಗಿ ಬಳಸಿರುವದು ತುಂಬಾ ಮಾರ್ಮಿಕವಾಗಿದೆ. ವ್ರತದ ಕುರಿತು ಬರೆದ ಶರಣೆಯರಲ್ಲಿ ಸತ್ಯಕ್ಕಳು ಒಬ್ಬಳು ಈ ವ್ರತ ಪಾಲನೆ ಯಾವುದು ನಾವು ಮಾಡುವ ಕ್ರಿಯೆಗಳು ನೇಮವಾಗುವುದಿಲ್ಲ ಎಂದು ತನ್ನ ಒಂದು ವಚನದಲ್ಲಿ ಅತಿ ಸುಂದರವಾಗಿ ಸರಳವಾಗಿ ಹೇಳಿದ್ದಾಳೆ. ಆ ವಚನವು ಹೀಗಿದೆ.

"ಅರ್ಚನೆ ಪೂಜನೆ ನೇಮವಲ್ಲ, ಮಂತ್ರತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪದೇ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ"[೩೩]

ಈ ವಚನದಲ್ಲಿ ನಾವು ದೇವರಿಗೆ ದಿನ ನಿತ್ಯ ಮಾಡುವ ಪೂಜೆ, ಅರ್ಚನೆಗಳು, ಮಾಡುವದುನೇಮವಲ್ಲ. ನಾವು ಹೇಳುವ ಮಂತ್ರಗಳು, ತಂತ್ರಗಳು ನೇಮವಾಗುವದಿಲ್ಲ ಹೆಚ್ಚುವ ದೀಪ, ಧೂಪಗಳು, ಆರತಿಯ ನೇಮವಾಗುವದಿಲ್ಲ. ಹೀಗೆ ನಾವು ಮಾಡುವ ಬಾಹ್ಯ ಆಚರಣೆಗಳು ನೇಮವೆನಿಸಿಕೊಳ್ಳುವುದಿಲ್ಲ. ಅಂತರಂಗದಲ್ಲಿ ನಾವು ಪರರ ಧನ, ಸ್ತ್ರೀ, ದೈವಗಳನ್ನು ಮಟ್ಟದಿರುವದೇ ಆರಾಧನೇ ಮಾಡದೇ ಇರುವದೇ ನೇಮ ಎಂದು ನಮ್ಮ ನೇಮ ಯಾವುದಾಗಬೇಕೆಂದು ಸತ್ಯಕ್ಕವಾಗಿ ಸ್ಪಷ್ಟವಾಗಿ ಹೇಳಿದ್ದಾಳೆ. ಇನ್ನೊಂದಡೆ ಈ ಭಕ್ತಿ ಹೀನರನ್ನ ಕಂಡಡೆ ಏನ್ನುಮಾಡಬೇಕು ಎನ್ನುವದನ್ನು ಅವಳ ಈ ವಚನದಲ್ಲಿ ತಿಳಿಸಿದ್ದಾಳೆ. ಆ ವಚನವು ಹೀಗಿದೆ.

"ದೇವರೆಂದು ಅರ್ಚಿಸಿ ಪೂಜಿಸಿ, ಭಾವಿಸಿ, ಮತ್ತೆ ತಿವಿಧವ ಮಟ್ಟಿದರೆಂದು
ಕಷ್ಟಗುಣವ ನುಡಿವ ಭಕ್ತಿಹೀನರ ಕಂಡಡೆ
ಅವರನೊಚ್ಚತ ತೋಗಬೇಕು ಶಂಭುಜಕ್ಕೇಶ್ವರಾ"[೩೪]

ಇಲ್ಲಿ ಡಾಂಭಿಕ ಭಕ್ತಿಗೆ, ಮತ್ತು ಅಂತಹ ಭಕ್ತರನ್ನು ಕಡೆಗಣಿಸಬೇಕು ತನ್ನ ಈ ವಚನದ ಮೂಲಕ ಹೇಳಿದ್ದಾಳೆ. ಇಷ್ಟ ಪಟ್ಟದೇವರನ್ನು ಕಷ್ಟವೆನ್ನದೇ ತನು-ಮನ ಧನದಿಂದ ಸೇವೆ ಸಲ್ಲಿಸಬೇಕು. ಈ ಸೇವೆಯನ್ನು ಮಾಡುವದು ಕಷ್ಟವೆಂದು ನುಡಿದವರೊಂದಿಗೆ ದೂರ ಏರಬೇಕು ಎಂದು ಹೇಳಿದ್ದಾಳೆ.

ಈ ವ್ರತಾಚರಣೆಯ ಕುರಿತು ಹೇಳಿರುವ ವಚನಕಾರ್ತಿಯಲ್ಲಿ ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಯ ವಚನವು ಒಂದು ಇವಳು ಭೀಮೇಶ್ವರಾ ಎಂಬ ಅಂಕಿತದಲ್ಲಿ ಬರೆದ ಒಂದು ವಚನ ದೊರಕಿವೆ. ಆ ವಚನದಲ್ಲಿ ವ್ರತಭಷ್ಟರನ್ನು ಯಾವರೀತಿ ಕಾಣಬೇಕೆಂದು ತನ್ನ ಈ ವಚನದಲ್ಲಿ ಹೇಳಿದ್ದಾಳೆ. ಅದು ಹೀಗಿದೆ.

"ವ್ರತಭಷ್ಟನ ಲಿಂಗಬಾಹ್ಯದ ಕಂಡಡೆ
ಸತ್ತ ನಾಯಿ, ಕಾಗೆಯ ಕಂಡಂತೆ
ಅವರೊಡನೆ ನುಡಿಯಲಾಗದು ಭೀಮೇಶ್ವರಾ"[೩೨]

ಈ ವಚನದಲ್ಲಿ ವ್ರತ ಭಷ್ಟರನ್ನು ಮತ್ತು ಲಿಂಗ ಬಾಹ್ಯದ ಕಂಡರೆ ಅವರನ್ನು ಸತ್ತ ನಾಯಿ, ಕಾಗೆಯ ಕಂಡಂತೆ ಕಾಣಬೇಕು. ಅಂತಹ ಜನರೊಂದಿಗೆ ಮಾತನಾಡಲು ಆಗದು ಎಂದು ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಹೇಳುತ್ತಾಳೆ.

ಈ ವ್ರತ ಹೀನರ ಕುರಿತು ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮನ ವಚನದಲ್ಲಿಯೂ ಕಾಣಸಿಗುತ್ತದೆ. ವ್ರತ ಹೀನರ ಸಂಗಮಾಡಿದರೇ ಅವರೊಂದಿಗೆ ಸ್ನೇಹ ಬೆಳಸಿದರೆ ನರಕ ತಪ್ಪದು ಎಂದು ಅವಳ ಈ ವಚನದಲ್ಲಿ ಕಾಣಬಹುದು. ಆ ವಚನ ಹೀಗಿದೆ.

"ಚರಣಾಯುಧ ವೇಳೆಯನರಿವುದಯ್ಯಾ
ಭಕ್ತ ವ್ರತಹೀನನರಿದು ನೆರೆಯನಯ್ಯಾ
ನೆರೆದಡೆ ನರಕ, ಗುರುಶಾಂತೇಶ್ವರಾ"[೩೩]

ಚರಣಾಯುಧವೆಂದರೆ ಕೋಳಿ, ಕೋಳಿ ಯಾವ ರೀತಿ ವೇಳೆಯನ್ನು ಅರಿಯುತ್ತದೆಯೋ ಹಾಗೆ ನಾವು ವ್ರತಹೀನರ ಭಕ್ತಿಯನ್ನು ದೂರವಿರಬೇಕು, ಇಂತಹ ಮೋಸಗಾರರನ್ನು ಅರಿತು ಸ್ನೇಹ ಬೆಳಸಿದರೆ ನರಕ ತಪ್ಪದು ಎಂದು ಹೇಳುತ್ತಾಳೆ. ಸ್ಮರಣೆ ವೀರಮ್ಮ ಈ ವ್ರತಾಚರಣೆ ನಿಯಮಗಳ ಪಾಲನೆ ಇಲ್ಲದ ವ್ರತಹೀನನಿಗೆ ನರಕ ತಪ್ಪದು ಎಂದು ಹೇಳಿದಾಳೆ. ಹೀಗೆ ಹೇಳಿರುವ ಶರಣೆಯರಲ್ಲಿ ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲ ದೇವಿಯು ಒಬ್ಬಳು. ಅವಳ ವಚನವು ಹೀಗಿದೆ.

"ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದ
ಬೆರೆದಡೆ ನರಕ ತಪ್ಪದು
ನಾನ್ನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ"[೩೪]

ಮಣ್ಣು ಹದವಿಲ್ಲದಿದ್ದರೆ ಮಡಿಕೆ ಹೇಗೆ ಆಗಲಾರದೋ ಹಾಗೆ ವ್ರತನಿಷ್ಠೆಯಲ್ಲಿ ನಿಯಮಗಳನ್ನು ಪಾಲಿಸದೇ ಇರುವ ವ್ರತ ಹೀನರನ್ನು ಬೆರೆಯುವಾಗದ ಹಾಗೆ ಬೆರೆತರೆ ಅವರಿಗೆ ನರಕವು ತಪ್ಪದೆಂದು ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ ತನ್ನ ವಚನದಲ್ಲಿ ಹೇಳಿದ್ದಾಳೆ.

ವ್ರತಹೀನರಿಗೆ, ವ್ರತಹೀನರ ಸಂಗಮ ಮಾಡಿದವರಿಗೆ, ವ್ರತಹೀನರ ಮುಖವನ್ನು ನೋಡಿದವರಿಗೆ ನರಕ ತಪ್ಪದು ಎಂಬ ಶರಣೆಯರ ವಚನಗಳು ನೋಡಿದ್ದೇವೆ. ಆದರೆ ಇದ್ದಕ್ಕಿಂತಲೂ ಘೋರವಾಗಿ ನುಡಿದ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯು ವ್ರತಹೀನರನ್ನು ಹೆಣದಂತೆ ಎಂದು ಕಠೋರವಾಗಿ ನುಡಿದ್ದಾಳೆ. ಆ ವಚನವು ಹೀಗಿದೆ.

"ವ್ರತ ಹೋದಾಗಳೆ ಇಷ್ಟಲಿಂಗದ ಕಳೆ ನಷ್ಟನವ್ವ
ಅವರು ಲಿಂಗವಿದ್ದೂ ಭವಿಗಳು
ಅದು ಹೇಗೆಂದಡೆ ಪ್ರಾಣವಿಲ್ಲದ ದೇಹದಂತೆ
ಉರಿಲಿಂಗಪೆದ್ದಿಗಳರಸ ಬಲ್ಲನೊಲ್ಲನವ್ವಾ"[೩೮]

ಈ ವಚನದಲ್ಲಿ ಇಷ್ಟಲಿಂಗಕ್ಕೆ ವ್ರತ ನಿಯಮ ತುಂಬಾ ಮುಖ್ಯ, ಅದು ಇಲ್ಲದೆ ಇದ್ದರೆ ಆ ಪೂಜೆ ವ್ಯರ್ಥವಿದ್ದಂತೆ. ಇಂತಹ ಪೂಜೆಯಿಂದ ಯಾವ ಪ್ರಯೋಜನವು ಇಲ್ಲ. ಅವರು ಲಿಂಗವಿದ್ದರು ಭವಿ ಎನಿಸಿಕೊಳ್ಳುವರು. ಅಂದರೆ ನಾಸ್ತಿಕನಿಂದಂತೆ ನಾಸ್ತಿಕನನ್ನು ಪ್ರಾಣವಿಲ್ಲದ ದೇಹ ಎಂದು ಕರೆಯುತ್ತಾರೆ. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಇವಳ ಇನ್ನೊಂದು ವಚನದಲ್ಲಿ ವ್ರತವನ್ನು ಕುರಿತು ಹೀಗೆ ಹೇಳಿಪ್ಪಾಳೆ.

"ವ್ರತವೆಂಬುದು ನಾಯಕರತ್ನ
ವ್ರತವೆಂಬುದು ಸುಪ್ಪಾಣಿಯ ಮುತ್ತು
ವ್ರತವೆಂಬುದು ಜೀವನ ಕಳೆ
ವ್ರತವೆಂಬುದು ಸುಯಿದಾನ
ವ್ರತತಪ್ಪಲು ಉರಿಲಿಂಗ ಪೆದ್ದಿಗಳ ರಸನೊಲ್ಲನವ್ವಾ"[೩೯]

ಈ ವಚನದಲ್ಲಿ ಕಾಳವ್ವೆ ವ್ರತದ ಕುರಿತ ಇತರ ವಚನಕಾರ್ತಿಯರಿಗಿಂತ ಹೆಚ್ಚಿನ ಗಮನವನ್ನು ವಹಿಸಿರುವದು ಕಂಡುಬರುತ್ತದೆ. ಇವಳ ಪ್ರಕಾರ ವ್ರತವೆಂದರೆ ನಾಯಕರತ್ನ, ಸುಪ್ಪಾಣಿಯ ಮುತ್ತು, ಜೀವನಕಳೆ, ಮತ್ತು ಸುಯಿದಾನ (ಸಂಸ್ಕಾರ) ಎಂದು ಹೆಚ್ಚಿನ ಕಾಳಜಿ ವಹಿಸಿದ್ದಾಳೆ ಹಾಗಾಗಿಯೇ ವ್ರತವು ತಪ್ಪಿದಲ್ಲಿ ಇಷ್ಟಲಿಂಗದ ಕಳೆ ಹೋಗುತ್ತದೆ. ಅವರಲ್ಲಿ ಲಿಂಗವಿದ್ದರೂ ಭವಿಗಳೆಂದು ಹೇಳಿದ್ದಾಳೆ. ಹೀಗೆ ವಚನಕಾರ್ತಿಯರು ವ್ರತಗಳಿಗೆ ಹೆಚ್ಚಿನ ಆಸಕ್ತಿ ವಹಿಸಿರುವದನ್ನು ಕಾಣುತ್ತೇವೆ.

ಈ ವ್ರತ ಚರಣಿ ಕುರಿತು ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮನ ವಚನದಲ್ಲಿಯು ಕಾಣಸಿಗುತ್ತದೆ. ಇವಳು ವ್ರತ ಭಷ್ಟರನ್ನು ನಾಯಿ ಎಂದು ಕರೆಯುತ್ತಾರೆ. ಆ ವಚನ ಹೀಗಿದೆ.

"ಕಾಗೆಯ ನಾಯ ತಿಂದವರಿಲ್ಲ
ವ್ರತಭಷ್ಟನ ಕೂಡಿದವರಿಲ್ಲ
ನಾಯಿಗೆ ನಾರಂಗವಕ್ಕುವುದೆ?
ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕಲ್ಲದೆ?
ನೀವೇ ಸಾಕ್ಷಿ ನಿಜಗುಣೇಶ್ವರಲಿಂಗದಲ್ಲಿ"[೪೦]

ಇಲ್ಲಿ ಶಿವಭಕ್ತನಾದವನ್ನು ಮೌಂಸವನ್ನು ತಿನ್ನುವದಿಲ್ಲ. ಹಾಗೆ ಮೌಂಸವ ತಿನ್ನುವ ಜನರು ವ್ರತಭಷ್ಟರೆಂದು ಎನಿಸಿಕೊಳ್ಳುವರು. ಲಿಂಗದೀಕ್ಷೆಯನ್ನು ಪಡೆದು ಮೌಂಸವನ್ನು ತಿನ್ನುವದು ನಿಷೇದವಾಗುತ್ತದೆ.

ಹಾಗೇ ಮಾಡಿದರೇ ನಾಯಿಗೆ ನಾರಂಗ (ತೆಂಗು)ನ ಮಹತ್ವವ ತಿಳಿದಂತೆ ಎನ್ನುತ್ತಾಳೆ. ಇನ್ನೊಂದು ಅರ್ಥದಲ್ಲಿ ಅವಳು 'ಮಂಗನಿಗೆಮಾಣಿಕ್ಯ ಅರಿಯುವದೇ" ಎಂಬಂತೆ ವ್ರತಭಷ್ಟರು ಶಿವಭಕ್ತರಾಗವುರೇ ಶಿವಮಂತ್ರದ ಮಹತ್ವ ತಿಳಿಯಲು ಸಾಧ್ಯವೇ ಎಂದು ಕೇಳಿದ್ದಾಳೆ ಮಸಣ್ಣಮ್ಮ.

ವ್ರತ ಹೀನರ ಕೂಡಿ ಜೀವನ ವ್ಯರ್ಥ ಎಂಬ ಮಾತು ಕದಿರಕಾಯಕದ ಕಾಳವ್ವೆ ತನ್ನ ವಚನದಲ್ಲಿ ಹೀಗೆ ಹೇಳಿದ್ದಾಳೆ. ಆ ವಚನ ಹೀಗಿದೆ.

"ಕದಿರು ಮುರಿಯೆ ಏನೂ ಇಲ್ಲ
ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ"[೪೧]

ಇವಳು ತನ್ನ ಕಾಯಕದ ದಾಟಿಯಲ್ಲಿಯೇ ಕದಿರೆ ಮುರಿದರೆ ಮುಂದೆ ಆ ಕೆಲಸ ಮಾಡಲು ಹೇಗೆ ಸಾಧ್ಯವಿಲ್ಲವೋ ಹಾಗೆ ವ್ರತಹೀನನ ಕೂಡಿದರೇ ಜೀವನ ವ್ಯರ್ಥವೆಂದು ಪೇಳಿದ್ದಾಳೆ. ಕೆದರಕಾಯಕದ ಕಾಳವ್ವೆ

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವಯು ವ್ರತಹೀನರ ಬಗ್ಗೆ ಹೇಳುತ್ತಾಳೆ. ವ್ರತ ಹೀನರ ಸಹವಾಸವನ್ನು ನೀವು ಮಾಡಿದರೇ ಮಾಡಿ ನಾನೊಲ್ಲೆ ಎಂದು ನೇರವಾಗಿ ಹೇಳಿದ ವಚನ ಹೀಗಿದೆ.

"ಬಂಜೆಯೊಎಂಗೆ ಕ್ಷೀರವುಂಜೆ?
ವ್ರತಹೀನನ ಬೆರೆಯಲುಂಟೆ?
ನೀ ಬೆರೆದಡೂ ಬೆರೆ;
ನಾನೊಲ್ಲೆ ನಿಜಶಾಂತೇಶ್ವರಾ"[೪೨]

ಈ ವಚನದಲ್ಲಿ ವ್ರತನಿಷ್ಠೆಯ ಕುರಿತು ಹೇಳಲಾಗಿದೆ. ವ್ರತಹೀನನಾದವರಿಗೆ ವ್ರತ ಆಚಾರಗಳ ಬಗ್ಗೆ ಹೇಳಿದರೆ ಅದು ವ್ಯರ್ಥ ಅದು ಯಾವ ರೀತಿ ಎಂದು ಉದಾಹರಣೆಯ ಮೂಲಕ ಹೇಳಿದ್ದಾಳೆ. ಬಂಜೆಯಾದವಳಿಗೆ ಕ್ಷೀರದ ಅವಶ್ಯಕತೆ ಹೇಗೆ ಇರುವುದಿಲ್ಲವೋ ಹಾಗೆ ವ್ರತನಿಷ್ಠರು ವ್ರತಹೀನರೊಂದಿಗೆ ಇದ್ದರೂ ಅದು ವ್ಯರ್ಥವೇ. ಹಾಗಾಗಿ ನೀವು ವ್ರತಹೀನರೊಂದಿಗೆ ಬೆರೆಯದಿತು ಎಂದು ಹೇಳಿದ್ದಾಳೆ. ನೀ ಬೆರೆತರೆ ಬೇರೆ ನಾನಂತು ಬರೆಯುವಲ್ಲ ಎಂದು ತನ್ನ

ಈ ವಚನದಲ್ಲಿ ವ್ರತಹೀನನ ಸಹವಾಸ ವ್ಯರ್ಥ ಮತ್ತು ಅವರೊಂದಿಗೆ ನನ್ನ ಒಡನಾಟ ಇರದು ಎಂದು ನೇರವಾಗಯೇ ಹೇಳಿದ್ದಾಳೆ.

ಹೀಗೆ ನೇರವಾಗಿ ಖಡಕ್ ಆಗಿ ವ್ರತ ಭಷ್ಟರನ್ನು ನಿಂದಿಸಿದ ವಚನಕಾರ್ತಿಯರಲ್ಲಿ ಕಾಲಕಣ್ಣೀಯ ಕಾಮಮ್ಮನ ವಚನವು ಒಂದು ಆ ವಚನವು ಹೀಗಿದೆ.

"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ
ಗುರುಲಿಂಗ ಜಂಗಮದ ಕಾಲ ಕಟ್ಟುವೆ
ವ್ರತಭಷ್ಟರ ನಿಟ್ಟೋರಸುವೆ,
ಸುಟ್ಟು ತುರುತುರನೆ ತೂರವೆ
ನಿರ್ಭಿತ ನಿಜಲಿಂಗದಲ್ಲಿ"[೪೩]

ಈ ವಚನದಲ್ಲಿ ವ್ರತಭಷ್ಟರನ್ನು ನಿರ್ಭಿಡಯಿಂದ ನಿರ್ಭಿತಿಯಾಗಿ ನಿಂದಿಸಿದ್ದಾಳೆ. 'ವ್ರತಭ್ರಷ್ಟರ ನಿಟ್ಟೊರಸುವೆ ಸುಟ್ಟು ತುರುತುರನೆ ತೂರವೆ' ಎಂದು ಮಾತಿನ ತ್ರೀವತೆಯಲ್ಲಿ ಹೇಳಿದ್ದಾಳೆ. ವ್ರತಭ್ರಷ್ಟರನ್ನು ಸುಟ್ಟು ತೂರುವೆ' ಎನ್ನುವ ನುಡಿಯಲ್ಲಿ ಅವಳು ಗಟ್ಟಿಗಿತ್ತಿ ಎನ್ನುವದನ್ನು ತೋರುತ್ತದೆ. ಬೇರೆ ವಚನ ಕಾರ್ತಿಯರಲ್ಲಿ ನರಕ ತಪ್ಪದು ಎಂದು ಭಯವನ್ನು ಹುಟ್ಟಿಸಿದರೇ ಕಾಲಕಣ್ಣಿಂವು ಕಾಮಮ್ಮ ತಾನೇ ಒಂದು ಕೈ ನೋಡಿಕೊಳ್ಳುತ್ತೇವೆ ಎಂಬ ದಾಟಿಯಲ್ಲಿ ನುಡಿದಿದ್ದಾಳೆ.

ಈ ವ್ರತನಿಯಮ ಆಚರಣೆಯ ಕುರಿತು ಮಾತನಾಡಿದವರಲ್ಲಿ ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮಳು ಒಬ್ಬಳು ಅವಳು ಈ ಪ್ರತನಿಷ್ಠೆಯ ಕುರಿತು ಹೇಳಿದ ವಚನವು ಹೀಗಿದೆ.

"ಆಯುಷ್ಯ ತೀರಲು ಮರಣ, ವ್ರತ ತಪ್ಪಲು ಶರೀರ ಕಡೆ
ಮೇಲು ವ್ರತವೆಂಬ ತೂತರ ಮೆಚ್ಚ ನಮ್ಮ ಅಗಜೇಶ್ವರ ಲಿಂಗವು"[೪೪]

ಇಲ್ಲಿ ಇವಳು ಆಯುಷ್ಯ ತೀರಲು ಯಾವ ರೀತಿ ಮರಣವೋ ಹಾಗೆಯೇ ವ್ರತತಪ್ಪಲು ಸಹ ಮರಣವೆಂದು ಹೇಳುತ್ತಾಳೆ. ಅಂಟರೆ ಇಲ್ಲಿ ಪ್ರತವೆಂಬುದು ನಮ್ಮ ಉಸಿರಾಗಿರಬೇಕು. ಉಸಿರು ಏರು-ಪೇರು ಆಗಲು ಹೇಗೆ ಮರಣವೋ ಹಾಗೆಯೆ ವ್ರತದಲ್ಲಿ ಏರು-ಪೇರಾದರು ಅದು ಮರಣವಾಗಬೇಕು ಹೀಗೆ ವ್ರತ ನಿಷ್ಠೆಯ ಮಹಿಮೆಯನ್ನು ಹೇಳಿದರೆ ಮೇಲುವ್ರತವೆಂದರೆ ಗುರುವಿನಿಂದ ದೀಕ್ಷೆ ಪಡೆಯುವದು ಹೀಗೆ ಗುರುವಿನಿಂದ ದೀಕ್ಷೆ ಪಡೆದ ಮೇಲೆ ಮೋಸಮಾಡದೇ ನಿಷ್ಠೆಯಿಂದ ಪಾಲಿಸಬೇಕು ಇಲ್ಲದಿದ್ದರೆ ಇದನ್ನು ದೇವರು ಮೆಚ್ಚುವುದಿಲ್ಲವೆಂದು ಹೇಳುತ್ತಾಳೆ. ಲಕ್ಷ್ಮಮ್ಮ.

ಹೀಗೆಯೇ ವ್ರತ ಹೀನರ ಕುರಿತು ಮಾತನಾಡಿದ ವಚನಕಾರ್ತಿಯರದೆ ಕೊಟ್ಟಣದ ಸೋಮಮ್ಮನ ವಚನದಲ್ಲಿಯು ಕಾಣಬಹುದು. ಅವಳು ವ್ರತದ ಹೀನನಾದರೇ ನರಕವು ಇಲ್ಲ ಮುಕ್ತಿಯು ಇಲ್ಲ ಎಂದು ಹೇಳುತ್ತಾಳೆ ಆ ವಚನವು ಹೀಗಿದೆ.

"ಹದತಪ್ಪಿ ಕುಟ್ಟಲು ನುಚ್ಚಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ ಅರಿದು ಬೆರೆದೆನಾದಡೆ
ಒಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ" [೪೫]

ಈ ವಚನದಲ್ಲಿ ಸೋಮಮ್ಮ ಹದತಪ್ಪಿ ಕುಟ್ಟಲು ಹೇಗೆ ಅಕ್ಕಿ ನಮ್ಮಗೆ ನುಚ್ಚಾಗಿ ಸಿಗುವುದು ಹಾಗೆಯೇ ವ್ರತಹೀನನ ಸ್ನೇಹ ನಿಮಗೆ ನರಕವನ್ನು ದೊರಕಿಸಿಕೊಡುತ್ತದೆ ಹೊರತು ಮುಕ್ತಿಯಲ್ಲ. ಅರಿಯದೇ ಸ್ನೇಹ ಮಾಡಿದ ಕ್ಷಮಿಸಬಹುದು ಆದರೆ ಅರಿತು ಕೂಡ ಬೆರೆತರೇ ಖಂಡಿತವಾಗಿ ನರಕ ನಿಮಗೆ ತಪ್ಪದು ನಾ ಅದನ್ನು ಬಲ್ಲೆ ಎಂದು ಹೇಳುತ್ತಾಳೆ. ಹೀಗೆ ಅನೇಕ ವಚನ ಕಾರ್ತಿಯರು ವ್ರತಪಾಲಕರಾಗಿದ್ದಾರೆ, ಅದಕ್ಕೆ ನಿಷ್ಠರಾಗಿ ಪಾಲಿಸುವರಾಗಿದ್ದರು ಎಂಬುದನ್ನು ಈ ಎಲ್ಲಾ ವಚನಕಾರ್ತಿಯರ ಈ ವಚನಗಳು ಓದಿದಾಗ ನಮಗೆ ತಿಳಿದು ಬರುತ್ತದೆ.

ಇವರ ಈ ಎಲ್ಲಾ ವಚನಗಳು ನೋಡಿದಾಗ ಅವರು ವ್ರತಗಳಿಗೆ ಎಷ್ಟು ಮಹತ್ವ ನೀಡಿದ್ದರು ಮತ್ತು ಅವುಗಳ ಪಾಲನೆಯನ್ನು ಎಷ್ಟೊಂದು ನಿಷ್ಠೆಯಿಂದ ಕೈಗೊಳ್ಳುತ್ತಿದ್ದರು ಎಂಬುದನ್ನು ತಿಳಿದುಬರುತ್ತದೆ. ಈ

ನಿಷ್ಠೆಯೇ ಅವರು ಇತರರಲ್ಲಿಯೂ ಕಾಣಲು ಇಷ್ಟಪಡುತ್ತಿದ್ದರು. ಅದಕ್ಕಾಗಿಯೇ ವ್ರತಹೀನರನ್ನು ನಾಯಿಸಾರಂಗ ಅರಿಯುವುದೇ ಎಂದು ವ್ರತಹೀನರಿಗೆ ನರಕ ತಪ್ಪದು ಎಂಬ ಪದಗಳ ಬಳಸಿರುವುದಲ್ಲಿ ಅರ್ಥಮಾಡಿಕೊಳ್ಳಬಹುದು. ಹೀಗೆ ಅವರು ವ್ರತನಿಯಮ ಕಾಯಕಗಳು ಮೂಲಕ ಒಂದು ಸುಂದರ ಸ್ವಸ್ಥವಾದ ಸಮಾಜ ನಿರ್ಮಿಸಿದ್ದರು, ಶಿಸ್ತು ಬದ್ಧ ಜೀವನ ಸಾಗಿಸುತ್ತಿದ್ದರು, ಎಂದು ನಾವು ಈ ವಚನಗಳಿಂದ ತಿಳಿದುಕೊಳ್ಳಬಹುದು.

೩.೪. ವಿಚಾರ ಪತ್ನಿಯರು :

ಭಾರತೀಯ ಸಮಾಜದಲ್ಲಿ ಮದುವೆ, ದಾಂಪತ್ಯ, ಎನ್ನವದಕ್ಕೆ ವಿಶೇಷ ಸ್ಥಾನಮಾನವಿದೆ. ಗೌರವವಿದೆ. ನಮ್ಮ ಸಮಾಜದಲ್ಲಿ ಒಬ್ಬ ವ್ಯಕ್ತಿ ಅದು ಗಂಡಾಗಲಿ–ಹೆಣ್ಣಾಗಲಿ ಅದು ಪೂರ್ಣವಾಗುವುದು ಮದುವೆಯ ನಂತರ ಎಂಬ ಬಲವಾದ ನಂಬಿಕೆಯಿದೆ. ಅದರಲ್ಲಿಯೂ ಹೆಣ್ಣು ಮದುವೆಯಾಗಲೇ ಬೇಕು. ಪೆಣ್ಣು ಮದುವೆಯಾಗದಿದ್ದರೆ ಅವಳಿಗೆ ಮೋಕ್ಷವಿಲ್ಲ. ಅವಳು ತನ್ನ ಮುಂದಿನ ಜೀವನ ಅಂದರೆ ಯವ್ವನದಲ್ಲಿ ಗಂಡ ಆಶ್ರಯ ಪಡೆಯುವುದಕ್ಕೆ, ವೃದ್ದಾಪ್ಯದಲ್ಲಿ ಮಗನ ಆಶ್ರಯಕ್ಕಾಗಿ, ಮತ್ತು. ಹೆಣ್ಣು ಶಾಯಿಯಾಗಿ ತನ್ನ ಹೆಣ್ತನವನ್ನು ಅನುಭವಿಸುವದಕ್ಕೆ ಮದುವೆಯಾಗಲೇ ಬೇಕು, ಹೆಣ್ಣು ಪರಿಪೂರ್ಣಳಾಗುವುದೇ ಮದುವೇ ನಂತರ ಎಂಬ ನಂಬಿಕೆಗಳು ಭಾರತೀಯರಲ್ಲಿದೆ.

ಮದುವೆಯ ನಂತರ ಹೆಣ್ಣು ಹೆಂಡತಿಯಾಗುತ್ತಾಳೆ. ಎಂದರೆ ಅವಳನು ಮಡದಿ, ಪತ್ನಿ, ಸತಿ, ಅರ್ಧಾಂಗ್ನಿ, ಮುಂತಾದ ಹೆಸರಿಂದ ಗುರುತಿಸಲಾಗುತ್ತದೆ. ಮದುವೆ ಎಂದರೆ ಎರಡು ಜೀವಗಳು ಜೊತೆಯಾಗಿ ಜೀವಿಸಲು ಸಮಾಜ ನೀಡುವ ಒಪ್ಪಿಗೆ. ಇದು ಕೇವಲ ಗಂಡು–ಹೆಂಡಿನ ಸಂಬಂಧ ಮಾತ್ರವಲ್ಲ ಎರಡು ಕುಟುಂಬಗಳ ಮಧ್ಯಯು ಸಂಬಂಧ ಏರ್ಪಡುತ್ತದೆ.

ಮದುವೆ ಎನ್ನುವುದು ಎರಡು ಜೀವಗಳ ಮಿಲನ. ಇಬ್ಬರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಅನ್ಯೋನವಾಗಿ ಬದುಕುವದು. ಜೀವನದಲ್ಲಿ ಬರುವ ಅನೇಕ ಸುಖ–ದುಃಖ, ಕಷ್ಟ, ನೋವು, ಎಲ್ಲವನ್ನು ಇಬ್ಬರೂ ಸಮಾನವಾಗಿ ಹಚ್ಚಿಕೊಂಡು ಅರಿತು ಬಾಳುವದು.

ನಮ್ಮ ಸಮಾಜದಲ್ಲಿ ಹೆಂಡತಿಯನ್ನು ಪುರುಷನ ಅರ್ಧಭಾಗವೆಂದು ಹೇಳಲಾಗುತ್ತದೆ. ಶಿವನ ಅರ್ಧನಾರೇಶ್ವರ ಕಲ್ಪನೆ ಉಂಟಾಗುತ್ತದೆ. ಹಾಗಾಗಿಯೇ ಮದುವೆ ಎನ್ನುವದು ಪುರುಷನ–ಸ್ತ್ರೀ ಇಬ್ಬರು ಸೇರಿದಾಗ ಪರಿಪೂರ್ಣ. ಈ ಪರಿಪೂರ್ಣ ಜೀವನ ಸಾಗುವದು ಮದುವೆಯ ನಂತರ. ಇಂತಹ ಜೀವನಕ್ಕ ಶರಣರ ಸಂಪೂರ್ಣ ಒಪ್ಪಿಗೆ ಇತ್ತು. ಹಾಗಾಗಿ ಅನೇಕ ಶರಣರು ದಾಂಪತ್ಯಜೀವನದ ಸುಖವನ್ನು ಅನುಭವಿಸಿದವರು. ಇವರು ದಾಂಪತ್ಯ ಜೀವನ ನಿರಾಕರಣೆ ಮಾಡಿಲ್ಲ. ಬದಲಿಗೆ “ಸತಿ ಪತಿಯರು ಮಾಡುವ ಭಕ್ತಿ ಹಿತವಪ್ಪುದು ಶಿವಂಗೆ”[೪೬] ಎಂದು ಹೇಳುತ್ತಾರೆ. ಹೀಗೆ ೧೨ನೇ ಶತಮಾನಧ ವಚನಕಾರರಲ್ಲಿ ದಂಪತಿಗಳ ಒಂದು ಗುಂಪನೇ ಕಾಣಬಹುದಾಗಿದೆ. ಹೀಗೆ ಕಂಡು ಬರುವ ದಂಪತಿಗಳು ಹೆಸರು ಈ ಕೆಳಗಿನಂತಿವೆ.

೧೨ನೇ ಶತಮಾನದ ಶರಣ ದಂಪತಿಗಳು:

೧) ಬಸವಣ್ಣ – ಗಂಗಾಬಿಕೆ, ನೀಲಾಂಬಿಕೆ

೨) ಮೋಳಿಗೆ ಮಾರಯ್ಯ – ಮಹಾದೇವಿ

೩) ಹಡಪದಪ್ಪಣ್ಣ – ಲಿಂಗಮ್ಮ

೪) ಆಯ್ದಕ್ಕಿ ಮಾರಯ್ಯ – ಲಕ್ಕಮ್ಮ

೫) ಕುಂಬಾರ ಗುಂಡಯ್ಯ – ಕೇತಲ ದೇವಿ

೬) ದಾಸಿಮಯ್ಯ – ದುಗ್ಗಳೆ

೭) ದಸರಯ್ಯ – ವೀರಮ್ಮ

೮) ಉರಿಲಿಂಗ ಪೆದ್ದಿ – ಕಾಳವ್ವೆ

೯) ಶರಣ ಹರಳಯ್ಯ – ಪುಣ್ಯಸ್ತ್ರೀ ಕಲ್ಯಾಣಮ್ಮ

ಹೀಗೆ ಅನೇಕ ಜನ ಶರಣರು ತಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡಿ ಸರಳ ಸುಖವಾದ ಸುಂದರ ಬದುಕನ್ನು ಸಾಗಿಸಿದವರು. ಈ ಶರಣರು ದಿನ ನಿತ್ಯ ಕಾಯಕವನ್ನು ಮಾಡಿ ಅದರಿಂದ ಬಂದು ಹಣದಿಂದ ಜಂಗಮ ದಾಸೋಹವನ್ನು ನಡೆಸುತ್ತಿದ್ದರು.

ಸಾಮಾನ್ಯವಾಗಿ ಸಮಾಜದಲ್ಲಿ ಪತ್ನಿಯೆಂದರೆ ಧರ್ಮಕಾರ್ಯದಲ್ಲಿ ತೊಡಗುವುದು. ಮನೆಯ. ಜವಾಬ್ದಾರಿ ಹೋರುವುದು, ಮಕ್ಕಳು ಮನೆಯರ ಪೋಷಣೆ ಮಾಡುವದು ಎಂಬ ಇತ್ಯಾದಿ ಕಲ್ಪನೆಯೇ ಹೆಚ್ಚಾಗಿದೆ.

ಆದರೆ ಶರಣರ ಚಿಂತನೆಯಲ್ಲಿ ದಾಂಪತ್ಯ ಕಲ್ಪನೆ ವಿಭಿನ್ನವಾಗಿದೆ. ದಂಪತಿಗಳ ಇಬ್ಬರ ಮನವು ಭಿನ್ನವಾಗಿರದೇ ಅಂತರಂಗ ಬಹಿರಂಗವಾಗಿ ಏಕಭಾವ ಹೊಂದಿರಬೇಕು ಇಬ್ಬರ ಆಚಾರ–ವಿಚಾರ ನಡೆ ನುಡಿ ಒಂದಾಗಿ ಸುಖ ದಾಂಪತ್ಯದ ಕಲ್ಪನೆ ಮೂಡಿಸಿದವರು. ಇವರು ಬಹಿರಂಗ ಸುಖ ಭೋಗಕ್ಕಿಂತ ಅಂತರಂಗದಲ್ಲಿನ ನಿಷ್ಠೇ, ಪಾವಿತ್ರ್ಯತೆಗೆ, ಹೆಚ್ಚು ಮಹತ್ವವನ್ನು ನೀಡಿದ್ದಾರೆ.

ಇಂತಹ ಅನೇಕ ವಿಷಯಗಳಿಗೆ, ಕಲ್ಪನೆ ಮೂಡಿಸಿ ಅದರಂತೆ ಬಾಳಿ ಬದುಕಿದ್ದಾರೆ. ಅವರ ಈ ದಾಂಪತ್ಯವು ಇಂದಿನ ವರಿಗೆ ಆದರ್ಶಾವಾಗಲಿವೆ. ಏಕೆಂದರೆ ಗಂಡ ಹೆಂಡತಿ ನಡುವೆ ಏಕ ಭಾವಕ್ಕಿಂತ ಭಿನ್ನಭಿಪ್ರಾಯಗಳು ಹೆಚ್ಚಾಗಿ ದೂರದೂರವಿರುವುದು ಹೆಚ್ಚಾಗಿ ಕಾಣುತ್ತೇವೆ. ಹಾಗಾಗಿಯೇ ಅಂತರಂಗದಲ್ಲಿನ ಪ್ರೀತಿ, ವಿಶ್ವಾಸ, ಸ್ನೇಹ, ಒಲುವೆ ಕಡೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ.

ಬಸವಣ್ಣ–ಗಂಗಾಬಿಕೆ ಮತ್ತು ನೀಲಾಂಬಿಕೆ :

೧೨ನೇ ಶತಮಾನದ ಕೇಂದ್ರಬಿಂದು ಬಸವಣ್ಣ, ಸಮಾಜದ ಸುಧಾರಕ, ಜಾತಿ, ವರ್ಗ, ತಾರತಮ್ಯಗಳನ್ನು ನಾಶ ಮಾಡುವ ಸಂಕಲ್ಪ ತೊಟ್ಟ ಸಾಮಾಜಿಕ ಕ್ರಾಂತಿಯಾಗಿ, ಸ್ವಸ್ಥ ಸಮಾಜವನ್ನು ಕಾಣಬಯಸುವ ನಿಜ ಶರಣರಿಗೆ, ಬಸವಣ್ಣನವರ ವಿಚಾರಗಳು, ತತ್ವಗಳು, ಕಾಡದೆ ಇರದು, ಅದರಲ್ಲೂ ಸರ್ವಸಂಗ ಪರಿತ್ಯಾಗಗಳೆಂಬ ಸೋಗಿನಲ್ಲಿ, ಸರ್ವ ಲೌಕಿಕ–ಸುಖವನ್ನು ಬಯಸುವಂತಹ ಢೋಂಗಿ

ಸನ್ಯಾಸಿಗಳು, ಕಪಟ ಸ್ವಾಮಿಜಿಗಳು, ವೈಭವೀಕರಣಗೊಳ್ಳುತ್ತಿರುವ ಈ ಸಮಯದಲ್ಲಿ ಗೃಹಸ್ಥರಾಗಿದ್ದರೂ ಯೋಗಿಯಂತೆ ಬದುಕಿ, ಜಗತ್ತಿಗೆ ಆದರ್ಶಪ್ರಾಯರಾದ ಬಸವಣ್ಣನವರ ಬದುಕು ಸರ್ವಕಾಲಕ್ಕೂ ಅನುಕರಣಿಯವಾಗಿದೆ.

ಬಸವಣ್ಣನವರು ಗೃಹಸ್ಥರಾಗಿದ್ದರು ಹಾಗೂ ಅವರಿಗೆ ಗಂಗಾಂಬಿಕೆ, ನೀಲಾಂಬಿಕೆ ಎಂಬ ಇಬ್ಬರು ಪತ್ನಿಯರಿದ್ದರೂ, ಇಬ್ಬರು ಬಸವಣ್ಣನವರ ಪಾಲಿಗೆ ಸಾಂಪ್ರದಾಯಿಕ ಕಲ್ಪನೆಯ ಪತ್ನಿಯರಾಗಿರಲಿಲ್ಲ. ಗಂಗಾಂಬಿಕೆ ಮಹಾಮನೆ ಹಾಗೂ ಅನುಭವ ಮಂಟಪಗಳ ಕಾರ್ಯಗಳಲ್ಲಿ ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ನೀಲಾಂಬಿಕೆಯವರು ಮಹಾಮನೆಯ ಅನ್ನದಾಸೋಹದ ಅನ್ನಪೂರ್ಣೆಯಾಗಿದ್ದರು. ಇಲ್ಲಿ ಇಬ್ಬರ ಪಾತ್ರವು ಅಪಾರ.

ಕೂಡಲ ಸಂಗಮಕ್ಕೆ ತೆರಳಿದ್ದ ಬಸವಣ್ಣನವರು ತನ್ನ ಮಡಿಯರನ್ನೆ ಕರೆತರಲು ಕಲ್ಯಾಣಕ್ಕೆ ಸಂದೇಶವವನ್ನು ಕಳುಹಿಸುತ್ತಾರೆ. ಆಗ ನೀಲಾಂಬಿಕೆ ಹೀಗೆ ನುಡಿಯುತ್ತಾಳೆ.

"ನೋಡು, ನೋಡು, ನೋಡು ಲಿಂಗವೇ,
ನೋಡ ಬಸವಯ್ಯನಾಟವಾ
ಅಲ್ಲಿಗೆ ಎನ್ನನ್ನು ಬರಹೇಳಿದಂತೆ
ಇಲ್ಲಿ ತಾವಿಲ್ಲವೇ ಸಂಗಯ್ಯನು,
ಅಲ್ಲಿ ಇಲ್ಲಿ ಎಂಬ ಉದಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೇ?"

ಎಂದು ಲಿಂಗವನ್ನು ಕೇಳುವಲ್ಲಿ ಅವರ ಕೆಚ್ಚು ಆತ್ಮಶಕ್ತಿ ತೋರಿ ಬರುತ್ತದೆ. ಪುರುಷ ಮಹಿಳೆ ಸತಿ-ಪತಿ ಸಂಬಂಧಗಳಲ್ಲಿ ಯಾವುದೂ ಮೇಲೂ ಇಲ್ಲ, ಕೀಳು ಇಲ್ಲವೆಂಬುದಕ್ಕೆ ಇಲ್ಲಿ ನೀಲಾಂಬಿಕೆ ತನ್ನ ವಚನದ ಮೂಲಕ ಉತ್ತರವಾಗಿದ್ದಾಳೆ. ಬಸವನ ಮಡದಿಯಲ್ಲಿ ತನಗೆ ಬಸವಣ್ಣ ಪತಿಯಲ್ಲ, ಇಬ್ಬರೂ ಕೂಡಿ ಚಿಂತಿಸಿದಾಗ ಉದಯಿಸಿದ ವಿಚಾರ ವಚನಗಳೆಂಬ ಶಿಶುಗಳವರು, ಬಸವನಿಗೆ ನೀಲಾಳ ವಿಚಾರ ಶಿಶು, ನೀಲಾಗೆ ಬಸವಣ ವಿಚಾರಗಳು ಶಿಶು ಹೀಗೆ ಬಸವನ ವಿಚಾರ ಪತ್ನಿಯಾಗಿ ನೀಲಮ್ಮ ಶಿವಶರಣೆಯರಲ್ಲಿ ವಿಶಿಷ್ಟವಾಗಿ ತಮ್ಮನ್ನನು ಅನಾವರಣವಾಗಿಸಿಕೊಂಡವರು.

ಆ ವಚನ ಹೀಗಿದೆ.

"ಮಡದಿ ಎನ್ನಲಾಗದು ಬಸವನಿಗೆ ಏನನ್ನು
ಪುರುಷನೆನಲಾಗದು ಬಸವನಿಗೆ
ಉಭಯದ ಕುಳವ ಹರಿದು ಬಸವಣಿಗೆ ಶಿಶುವಾದೆನು
ಬಸವನೆನ್ನ ಶಿಶುವಾದೆನು
ಪ್ರಮಥರು ಪುರಾತನ ಸಾಕ್ಷಿಯ್ಯಾ
ಸಂಗಯ್ಯನಿರುವ ದಿಬ್ಬವೆ ಮೀರಿದ ಎ ಬಸವನೊಳಗಾನಡಗಿದೆ"[೭]

ನೀಲಾಂಬಿಕೆಯು ಈ ವಚನದಲ್ಲಿ ವಿಚಾರವಂತಿಕೆಯ ಆಳದ ಎಳೆ ಬಿಚ್ಚಿಟ್ಟಿದ್ದಾಳೆ. ಜಗತ್ತಿನ ಕಣ್ಣಿ ನಾವು ಗಂಡ-ಹೆಂಡತಿ ಆದರೆ ನಿಜವಾಗಿ ನಾವು ಕಾಮವಾಸನೆ ಇಲ್ಲದ ಮುಗ್ಧ ಶಿಶುವಿನ ಭಾವನೆಗಳಿವೆ ಎಂದು ಈ ವಚನಗಳಲ್ಲಿ ವ್ಯಕ್ತವಾಗಿದೆ. ಅಂದರೆ ಈ ಜಗತ್ತಿನ ದಾಂಪತ್ಯಕ್ಕಿರುವ ದೈಹಿಕ ಸುಖ, ಕ್ಷಣಿಕ ತೃಪ್ತಿಗೆ, ಲೌಕಿಕ ಜೀವನ ಸಾಗಿಸುವುದಕ್ಕಿಂತ ಭಿನ್ನವಾದ ಸ್ಥರದಲ್ಲಿ ನಾವು ದಂಪತಿಗಳಾಗಿದ್ದೇವೆ. ಅಂದರೆ ಅಲ್ಪ ಆಸೆಯ ಉಭಯದ ಹಂಗನ್ನು ಹರಿದೊಗೆದು, ಸತಿಗ ಪತಿ ಶಿಶುವಾಗಿ, ಪತಿಗೆ-ಸತಿ ಶಿಶುವಾಗಿದೆ ಎಂದು ಹೇಳುತ್ತಾಳೆ. ಇದಕ್ಕೆ ಸಕಲ ಪ್ರಮಥರ, ಪುರಾತನದ ಸಾಕ್ಷಿಯನ್ನು ಒದಗಿಸುತ್ತಾಳೆ. ಇಲ್ಲಿ ದಂಪತಿಗಳು ಶಿಶುವಾಗಿದ್ದೇವು ಎಂದು ಹೇಳಿದ ನೀಲಾಂಬಿಕೆ ಇನ್ನೊಂದೆಡೆ 'ಮಡದಿ' ಎಂಬ ಶಬ್ದದದ ಬಗೆಯೂ ಚೆನ್ನಾಗಿ ವಿವರಣೆ ನೀಡಿದ್ದಾಳೆ.

"ಮಡದಿ ಎಂಬ ಶಬ್ದ ನಿಶಬ್ದವಾದಡೆ ನಾನೀಗ ನಿಜಸುಖಿ ಬಸವಾ
ಬಸವನಂಗದ ಕಂಡಡೆ ನಾನು ಪರಿಣಾಮ
ಬಸವಣ ಹರಶಿವ ಕಂಡರಿದಡೆ
ನಾನ್ಐಕ್ಯ ಸಂಪನ್ನೆಯಯ್ಯಾ ಸಂಗಯ್ಯ"[೬೮]

ಈ ವಚನದಲ್ಲಿ 'ಮಡದಿ' ಎಂಬ ಶಬ್ದ ದ ಹಿಂದೆ ಕುಟುಂಬ ಸಂಬಂಧಿಗಳಾಗಲಿ ಪರರಾಗಲೀ ದೊಡ್ಡ ಅಪವಾದವನ್ನು ಹಚ್ಚಲು ಮುಂದಿರುತ್ತಾರೆ. ಪ್ರತಿಯೊಂದು ಕುಟುಂಬದಲ್ಲಿಯೂ ಪತಿ ಒಳ್ಳೆಯವನಾಗುತ್ತಾನೆ. ಹೆಂಡತಿಯಿಂದಲೇ ಗಂಡ ಹೀಗಾದ ಮೊಲದ ಎಷ್ಟು ಒಳ್ಳೆಯವನಿದ್ದ, ಅವಳು ಬಂದ ಮೇಲೆ ಹೀಗೆ ಆಡುತ್ತಿದ್ದಾನೆ. ಅವು ಎಲ್ಲ ಹಚ್ಚಿಡುತ್ತಾಳೆ ಕಿವಿವಾದುತ್ತಾಳೆ. ಇತ್ಯಾದಿ ಇತ್ಯಾದಿ ಅವಹೇಳನಗಳೂ 'ಮಡಗಿ'ಯಂಬ ಶಬ್ಬದ ಸುತ್ತ ಸುತ್ತುತ್ತಲೆ ಇರುತ್ತವೆ. ಇವಕ್ಕೆಲ್ಲ ಕೇವಲ ಹೆಂಡತಿ ಸಂಸಾರ ಇವೇ ಕಾರಣವಾಗಿವೆ. ಎಂಬ ಭಾವನೆ ವ್ಯಕ್ತವಾಗುತ್ತದೆ. ಆದ್ದರಿಂದಲೇ ಈ ಮಡದಿ ಎಂಬ 'ಶಬ್ದವೇ' ನಿಶ್ಯಬ್ದವಾಗುವಂತಾದರೆ ಎಷ್ಟು ಚೆಂದ? ಎಂಬ ಭಾವನೆ ನೀಲಾಂಬಿಕೆಯಲ್ಲಿಯೂ ಮೂಡಿ ಬಂದಂತಿದೆ.

ತನ್ನಂತಿರುವ ಎಷ್ಟೋ ಸಂಸಾರಗಳಲ್ಲಿನ ಹೆಣ್ಣು ಮಕ್ಕಳ ಗೊಂದಲಗಳ ಗೋಳನ್ನು ಈ ವಚನದಲ್ಲಿ ಮೂಡಿಸಿದ್ದಾಳೆ. ಹಾಗಾಗಿಯೇ 'ಮಡಿದಿ' ಎಂಬ ಶಬ್ದದ ಕೊಂಡಿಯನ್ನು ಕಳಚಿವಾಗು ಸಿಗುವ ಅಪರಿಮಿತ ಆನಂದದ ಪರಿಣಾಮವನ್ನು ಇಲ್ಲಿ ನಿರೂಪಿಸಿದ್ದಾಳೆ. ಹೀಗೆ ಬಸವಣ್ಣನು ಕಂಡ ಮಾತ್ರಕ್ಕೆ ತನ್ನಲ್ಲಿ ಉಂಟಾಗುವ ಪರಮಾನಂದ ಹರಿವು, ಹರುಷಕಾಗಿ ಮೀತಿಯೇ ಇಲ್ಲ ಎನ್ನುತ್ತಾಳೆ. ಈ ಅರಿವು ತನ್ನಲ್ಲಿ ಉಂಟಾದಾಗ ಐಕ್ಯ ಸಂಪನ್ನೆಯಾಗುತ್ತೇನೆ ಆಕೆಯ ಐಕ್ಯ ಈ ಲಿಂಗದಲ್ಲಿ ಹಾಗಾಗಿ ಲಿಂಗಾಂಗ ಸಾಮರಸ್ಯವನ್ನು ಒತ್ತು ಕೊಟ್ಟು ಹೇಳಿದ್ದಾಳೆ.

ನೀಲಾಂಬಿಕೆ ತನ್ನ ಪತಿ ಬಸವಣ್ಣ ಮಾಡಿರುವ ಸಾಧನೆಯೆನೆಂದು ತನ್ನ ಒಂದು ವಚನದಲ್ಲಿ ಹೇಳಿದ್ದಾಳೆ.

'ಆದಿ ಆಧಾರವಿಲ್ಲದಂದು, ಕಳೆ ಮೊಳೆದೋದಂದು
ಕಾಮ ನಿ:ಕಾಮವಿಲ್ಲವೆಂದು ವೀರ ವಿತರಣವಿಲ್ಲವೆಂದು

ಪರಸಮಯವನಳಿದಾತ ನಮ್ಮ ಬಸವಯ್ಯನು
ಇಪ್ಪತ್ತೈದು ಸಾವಿರ ಚಾರ್ವಾಕರಂ ನೆಗ್ಗಲೊತ್ತಿ
ಅಪ್ರತಿಮ ಶಿವಗಣಂಗಳ ಮಹಾತ್ಮೆಯು ಮೆರೆದಾತ ನಮ್ಮ ಬಸವಯ್ಯನು
ಪುಣ್ಯವ ಬೀಜವ ಬಿತ್ತಿ, ಪಂಚಾಕ್ಷರಿಯ ಬೆಳೆಯ ಬೆಳೆದು
ಪರಮ ಪ್ರಸಾದವನೊಂದು ರೂಪ ಮಾಡಿ ಮೆರೆದು
ಭಕ್ತಿ ಫಲವನುಂಡಾತ ನಮ್ಮ ಬಸವಯ್ಯನು
ಚೆನ್ನ ಬಸವನೆಮಬ ಪ್ರಸಾದಿಯ ಪಡೆದು, ಅನುಭವ ಮಂಟಪವನ್ನು ಮಾಡಿ
ಅನುಭವಮೂರ್ತಿಯಾದ ನಮ್ಮ ಬಸವಯ್ಯನು
ಅರಿವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳ್ನೂರೆಪ್ಪತ್ತು ಅಮನರಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು.
ಈ ಅನುಭವದಲ್ಲಿ ಐಕ್ಯ ಪ್ರಸಾದವನಂಗಗೊಂಡು
ಮಂತ್ರ ನಿರ್ಮಂತವಾದಾತ ನಮ್ಮ ಬಸವಯ್ಯನು
ಭಕ್ತಿ ಸ್ಥಲವನಳಿದು ಭಾವವಡಗಿ ಬಟ್ಟ ಬಂಕುಲ ಕೂಡಿ
ಸಂಗಯ್ಯನಲ್ಲಿ ಸ್ವಯ ಲಿಂಗೆಯಾದ ನಮ್ಮ ಬಸವಯ್ಯನು"[೪೯]

ನೀಲಾಂಬಿಕೆಯು ಈ ವಚನದಲ್ಲಿ ಒಬ್ಬ ಹೆಂಡತಿ ತನ್ನ ಗಂಡನ ಕುರಿತು ಗೌರವ ಮತ್ತು ಅವನು ಮಾಡುವ ಕೆಲಸದಲ್ಲಿ ಹೆಮ್ಮೆ ಇದೆ ಮತ್ತು ಇರುತ್ತದೆ ಎನ್ನುವುದನ್ನು ನೀಲಾಂಬಿಕೆಯು ತನ್ನ ಗಂಡನ ಕಾರ್ಯಸಾಧನೆಯನ್ನು ಈ ವಚನದ ಮೂಲಕ ಸಾದರ ಪಡಿಸುತ್ತಾಳೆ. ಏಕೆಂದರೆ ಏನು ಮಾಡದ ಗಂಡನ್ನನು ಕುರಿತು ಸುಖ ಸುಮ್ಮನೆ ಹೊಗಳುವ ಹೆಣ್ಣುಗಳನ್ನು ಇಂದಿನ ದಿನಗಳಲ್ಲಿ ನಾವು ಕಾಣುತ್ತೇವೆ. ಅಂದರೆ ಗಂಡನ ಅನೇಕ ತಪ್ಪುಗಳನ್ನು ಅವಳು ಮುಚ್ಚಿ ಹಾಕುತ್ತಾಳೆ. ಅವಳು ಇಂದ್ರ, ಚಂದ್ರನಷ್ಟು ಒಳ್ಳೆಯವನು ಎಂದೆಲ್ಲ ಹೋಗಳಿಕೆಗಳ ಮಾತುಗಳನ್ನುಆಡುತ್ತಿರುತ್ತಾಳೆ. ಇದು ನಮ್ಮ ಸಮಾಜ ಹಾಕಿರುವ ಕಟ್ಟು ಪಾಡುಗಳಲ್ಲಿಯೂ ಒಂದಾಗಿದೆ ಏಕೆಂದರೆ ಗಂಡನನ್ನು ಬೈಯ್ಯುವಂತಿಲ್ಲ ಅವನ ವಿರುದ್ಧ ಯಾವುದೇ ಒಂದು ಶಬ್ದ ಬಳಸುವಂತಿಲ್ಲ. ಹೀಗಿರುವಾಗ ಅನೇಕ ಸಾಧನಗೈದ ಬಸವಣ್ಣರ ಮಹಿಮೆಯನ್ನು ಸುಧಾರಣ ಕಾರ್ಯಗಳನ್ನು ಕುರಿತು ಅನೇಕ ಶರಣ–ಶರಣೆಯರು ಮಾಡುವಂತೆ ಇಲ್ಲಿ ನೀಲಾಂಬಿಕೆಯು ಬಸವಣ್ಣನ ಸಾಧನೆಯನ್ನು ಕುರಿತು ತನ್ನ ವಚನದಲ್ಲಿ ಉಲ್ಲೇಖಿಸಿದ್ದಾಳೆ.

ಮೋಳಿಗೆ ಮಾರಯ್ಯ ಮತ್ತು ಮಹಾದೇವಿ :

೧೨ನೇ ಶತಮಾನದಲ್ಲಿ ಶಿವಶರಣರಲ್ಲಿ ಮೋಳಿಗೆ ಮಾರಯ್ಯ ಮತ್ತು ಮಹಾದೇವಿ ಎಂಬ ಪ್ರಮುಖ ದಂಪತಿಗಳಲ್ಲಿ ಒಬ್ಬರು. ಇವನು ಕಾಶ್ಮೀರದ ಮಹಾರಾಜ. ಮಾಂಡವ್ಯ ಪುರವನ್ನು ಆಳುತ್ತಿದ್ದನು. ಕಲ್ಯಾಣದ ಬಸವಣ್ಣ ಆಚಾರ, ವಿಚಾರ, ಕಾಯಕ, ದಾಸೋಹ, ಮುಂತಾದ ಹಿರಿಮೆಯನ್ನು ಕೇಳಿ ತಮ್ಮ ರಾಜ್ಯವನ್ನು ತ್ಯಜಿಸಿ ಕಲ್ಯಾಣದಲ್ಲಿ ಬಂದು ನೆಲೆಯೂರಿರುತ್ತಾರೆ. ಇವರು ಇಲ್ಲಿ ಕಟ್ಟಿಗೆ ಮಾರುವ ಕಾಯಕವನ್ನು ಕೈ ಕೊಂಡು ಶರಣ ಜೀವನವನ್ನು ನಡೆಸುತ್ತಿರುತ್ತಾರೆ. ಪತ್ನಿಯಾದವಳು ಗಂಡನ ವಿಚಾರಗಳಂತೆ ಸರ್ವದರಲ್ಲೂ ಸಮಭಾಗಿಯಾಗಿ ಬಂದವಳು ಮಹಾದೇವಿ, ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಶರಣರ ನುಡಿಯಂತೆ ಈ ಇಬ್ಬರು ದಂಪತಿಗಳ ಕಾಯಕ ನಿಷ್ಠೇ ಇತರ ಶರಣರಿಗೆ ಆದರ್ಶ ಪ್ರಾಯವಾಗಿದ್ದರು.

ಪತ್ನಿಯಾದವಳು ಪತಿಯ ಮನವರಿತು ನಡೆಯಬೇಕು, ಆಚಾರ-ವಿಚಾರಕ್ಕೆ ತಕ್ಕಂತೆ ನಡೆನುಡಿಯನ್ನು ಅಳವಡಿಸಿಕೊಳ್ಳಬೇಕು. ಎನ್ನುವ ಸತಿಧರ್ಮದಂತೆ ಮಹಾದೇವಿ ಗಂಡ ಮಾರಯ್ಯನ ಕಾರ್ಯಗಳಿಗೆ ಪ್ರೇರಕಳಾಗಿದ್ದಳು. ಶರಣದಂಪತಿಗಳು ಎಂದು ಭಿನ್ನ ಅಭಿಪ್ರಾಯ ಹೊಂದಿದವರಲ್ಲ. ಮನವೊಂದು ದೇಹವೆರಡು ಎಂದು ಬದುಕಿದವರು.

ಮಾರಯ್ಯನ ಕಾಯಕದಿಂದ ಬಂದ ಹಣದಲ್ಲಿ ಜಂಗಮರಿಗೆ ಅಂಬಲಿಯನ್ನು ದಾಸೋಹದಲ್ಲಿ ನೀಡುತ್ತದ್ದರು. ಈ ದಾಸೋಹದ ಸವಿಯನ್ನು ಕಾಣಲು ಮತ್ತು ಅವರ ಕಾಯಕ ನಿಷ್ಠೆ ತಿಳಿಯಲು ಬಸವಣ್ಣ ಒಮ್ಮೆ ಮಾರು ವೇಷದಲ್ಲಿ ಅವರ ಮನೆಗೆ ಬರುತ್ತಾನೆ. ಮಾರಯ್ಯವಿಲ್ಲದ ವೇಳೆಯಲ್ಲಿ ಬಂದು ಬಸವಣ್ಣನಿಗೆ ಮಹಾದೇವಿಯು ಬಂದವರು ಯಾರು ತಿಳಿಯದೇ ಅವಳು ಅನುಸರಿಸಬೇಕಾದ ಜಂಗಮ ಸೇವೆಯನ್ನು ಮಾಡುತ್ತಾಳೆ. ಅವರಿಗೆ ಕುಳ್ಳರಿಸಿ ನೀರುಕೊಟ್ಟ ತಮ್ಮಲ್ಲಿರುವ ಅಂಬಲಿಯನ್ನು ಸವಿಯಲು ನೀಡುತ್ತಾರೆ. ಹೀಗೆ ಪತಿಯ ವ್ರತ ನಿಯಮ ಪಾಲಿಸುವಳು. ಬಸವಣ್ಣ ಇವರ ಮನೆಯ ಪ್ರಸಾದವನ್ನು ಸ್ವೀಕರಿಸಿ ಹೋಗುವಾಗ ಎರಡು ಜೋಳಿಗೆ ಹೊನ್ನನ್ನು ಅವಳಿಗೆ ಅರಿಯಂತೆ ಇಟ್ಟು ಹೋಗಿರುತ್ತಾನೆ. ಮಾರಯ್ಯ ಮನೆಗೆ ಬಂದು ಜೋಳಿಗೆ ಕಂಡು ಯಾರು ಬಂದಿದ್ದರು ಎಂದು ಕೇಳಿ ತಿಳದುಕೊಂಡನು ಹೀಗೆ ಮಾರುವೇಷದಲ್ಲಿ ಬಂದು ಪ್ರಸಾದ ಸ್ವೀಕರಿಸಿ ಹೊನ್ನು ಇಟ್ಟು ಹೋದವರು ಬಸವಣ್ಣನೆಂದು ಅರಿತು ಕೊಳ್ಳುತ್ತಾರೆ. ತಮ್ಮ ಭಕ್ತಿಯನ್ನು ಪರೀಕ್ಷಿಸಲು ಬಂದು ಹೀಗೆ ಮಾಡಿರಬೇಕೆಂದು ಅರಿತುಕೊಳ್ಳುತ್ತಾರೆ. ಅಲ್ಲಿರುವ ಹೊನ್ನನ್ನು ಅವರು ಮುಟ್ಟದೆ ತಿರಸ್ಕರಿಸುತ್ತಾರೆ. ಇದು ಆಗಿನ ಶರಣ ದಂಪತಿಗಳು ಕಾಯಕವನ್ನು ಮಾತ್ರ ನಿಷ್ಠೇಯಿಂದ ಮಾಡುವದ್ದಲ್ಲ. ಕಾಯಕದಿಂದ ಬಂದ ಹಣವನ್ನು ಬಿಟ್ಟು ಬೇರೆ ಅನ್ಯ ಮಾರ್ಗದಿಂದ ಬಂದ ಯಾವ ಹೊನ್ನನ್ನು ತೆಗೆದುಕೊಳ್ಳಬಾರದು ಎಂಬ ನಿಯಮಕ್ಕು ಅವರು ಬದ್ದರಾಗಿದ್ದವರು. ಈ ಆಧುನಿಕ ಕಾಲಕ್ಕೆ ಅನ್ವಯಿಸಿಕೊಂಡು ನೋಡಲು ಹೊರಟರೇ ಇಲ್ಲಿ ಇಂತಹ ಯಾವ ತತ್ವ ನಿಯಮವು ಕಂಡುಬರುವುದಿಲ್ಲ. ಇಂದಿನ ದಿನಗಳಲ್ಲಿ ನಾವು ಈ ರೀತಿ ಕಾಯಕ ನಿಷ್ಠೆಯಿಂದ ಬದುಕಲು ಸಾಧ್ಯವೇ ಎಂಬ ಪ್ರಶ್ನೆ ಮೊದಲು ನನ್ನನು ನಾವು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ ಒಬ್ಬರ ತಲೆ ಹಿಡಿದರೆ ಮಾತ್ರ ನಾವು ಬದುಕಲು ಸಾದ್ಯ ಎಂಬ ವಾತಾವರಣ ನಿರ್ಮಾಣವಾಗಿದೆ. ಬೇರೆ ಮೂಲಗಳಿಂದ ಹಣ ಬರಲು ಅನೇಕ ಮಾರ್ಗವನ್ನು

ಮಾಡುವವರು ಕಾಣುತ್ತೇವೆ. ಒಂದು ರೀತಿಯಲ್ಲಿ ಅನ್ಯಮಾರ್ಗ ಹುಡುಕುವುದೇ ಕಾಯಕವೆನಿಸಿಕೊಂಡವರು ಇದ್ದಾರೆ. ತಾವು ದುಡಿದು ಬಂದ ಹಣದಲ್ಲಿ ನಾವು ನೆಮ್ಮದಿ ಕಂಡುಕೊಳ್ಳುತ್ತಿರುವ ಜನರು ತುಂಬಾ ಕಡಿಮೆ. ನೆಮ್ಮದಿ ಎಂದರೆ ಹಣ. ಹಣವಿದ್ದರೆ ನೆಮ್ಮದಿ ತನಗೆ ಒಪ್ಪದು ಎಂಬ ಕಲ್ಪನೆ ನಮ್ಮ ಆಧುನಿಕರದು. ಹಾಗಾಗಿ ಈ ಶರಣ ದಂಪತಿಗಳ ಜೀವನ ನಮಗೆ ಆದರ್ಶವಾಗುತ್ತವೆ.

ಮೋಳಿಗೆ ಮಾರಯ್ಯ ಮತ್ತು ಮೋಳಿಗೆ ಮಹಾದೇವಿ ಇವರಿಬ್ಬರ ಸರಳ ಜೀವನ ವಿಧಾನಕ್ಕೆ ನೆಮ್ಮದಿಯುತ ತೃಪ್ತ ಬದುಕಿಗೆ ಹೊಂದಿಕೊಂಡು ಇತರೆ ಆಸೆಯನ್ನು ಗೆದ್ದು ಬದುಕುವುದನ್ನು ತೋರಿಸಿದವರು. ಒಬ್ಬ ರಾಜನಾಗಿ ಬೊಕ್ಕಸದ ಹಣವನ್ನು ದಾನ-ಧರ್ಮ, ಗುರುಲಿಂಗ, ಪೂಜೆ, ಜಂಗಮ ಇತ್ಯಾದಿ ಸೇವೆ ಮಾಡುವುದಕ್ಕೂ ತನ್ನ ಶರೀರವನ್ನು ದಂಡಿಸಿ ಬಂದ ದ್ರವ್ಯದಿಂದ ಗುರುಲಿಂಗ, ಜಂಗಮ.ಸೇವೆ,ದಾಸೋಹ ಮಾಡುವುದಕ್ಕೂ ಇರುವ ವ್ಯತ್ಯಾಸವನ್ನು ನಮಗೆ ಇವರ ಬದುಕಿನಿಂದ ಅರಿವಾಗುತ್ತದೆ.

ಮಾರಯ್ಯ ಒಮ್ಮೆ ತನ್ನ ಕಾಯಕದಿಂದ ಸಾಕಾಗಿ ಸಾವಿನ ದೇವರಲ್ಲಿ ಮೊರೆ ಇಡುತ್ತಾನೆ. ಇದನ್ನು ಕೇಳಿದ ಮಹಾದೇವಿಯು ಈ ರೀತಿಯಾಗಿ ಹೇಳುತ್ತಾಳೆ.

"ಅದೇತಕೆ ಅಯ್ಯ
ಶಿವನೊಳಗೆ ಕೂಟಸ್ಥಾನದಹೆನೆಂಬ ಹಲುಬಾಟ?
ಇದು ನಿತ್ಯಸತ್ಯದ ಆಟವಲ್ಲ
ಇನ್ನಾರಿಗೆ ಕೇಳಿ,ಮತ್ತಿನ್ನಾರಿಗೆ ಹೇಳುವೆ
ನೀ ಮಾಡುವ ಮಾಟ?
ಮುನ್ನ ನೀನಾಗೆಂದಿದ್ದೆ ಹೇಳಾ?
ಆ ಭಾವವನರಿದು ನಿನ್ನ ನೀನೇ ತಿಳಿ
ಎನ್ನಯ್ಯಪ್ರಿಯ ಇಮ್ಮಡಿನಿಃಕಳಂಕ ಮಲ್ಲಿಕಾರ್ಜುನ?"[೫೦]

ಮಹಾದೇವಿ ಈ ಪ್ರಶ್ನೆಯನ್ನು ಕೇಳುತ್ತಾಳೆ. ನೀನು ಶಿವನೊಳಗೆ ಐಕ್ಯನಾಗಬೇಕೆಂದು ಬಯಸುತ್ತಿರುವೆ. ಇಂತಹ ಹಂಬಲಾಟ ಈಗೇಕೆ ನಿನ್ನಲ್ಲಿ ಹುಟ್ಟುತ್ತಿವೆ. ನೀನು ದಿನನಿತ್ಯ ಕಾಯಕ ಮಾಡಿ ದಾಸೋಹ ನಡೆಸುತ್ತಿರುವುದು ಸತ್ಯವಲ್ಲವೇ? ನೀನು ಬಯಸಿಬಂದ ಈ ಜೀವನ ಯಾರಿಂದಲೋ ಕೇಳಿ ಮತ್ತಿನಾರಿಗೂ ಹೇಳುತ್ತಿರುವ ನೀ ಮಾಡುವ ಮಾಟವೇ? ಎಂದು ಪ್ರಶ್ನಿಸುತ್ತಾಳೆ. ಎಂದರೆ ಇಷ್ಟುದಿನದ ಈ ಜೀವನ ನಿನ್ನ ಮೋಸ ಆಟವಾಗಿತ್ತೇ? ಎಂದು ಪ್ರಶ್ನಿಸುತ್ತಾಳೆ. ಮುನ್ನ ನೀನಾರೆಂದಿದ್ದೆ ಹೇಳಾ? ಮೊದಲು ನೀ ಯಾರಾಗಿದ್ದಿ? ಏನಾಗಿದ್ದೆ? ಹೇಳು ನೀನು ರಾಜನಾಗಿದ್ದಾಗ ಇರುವ ಭಾವದಿಂದ ಮಾತನಾಡುತ್ತಿರುವೆ ಏನು? ನಿನಗೆ ರಾಜ್ಯವನ್ನು ತ್ಯಾಗ ಮಾಡಿದ ಭಾವನೆ ಈಗ ಕಾಡುತ್ತಿದೆಯೇ? ಈಗ ರಾಜನಿಂದ ಕೂಲಿಯಾದೆ ಎಂಬ ಅರಿವು ಆಗುತ್ತಿದೆಯೇ ಎಂದು ಕೇಳುತ್ತಾಳೆ. ಹೀಗೆ ಕುಗ್ಗಿದ ಪತಿಯ ಮನಸ್ಸಿನಿಂದ ಹೊರಬರುವಂತೆ ಮಾಡುತ್ತಾಳೆ. ಮಂಕುಬಡಿದಿರುವ ಮನಸ್ಸನ್ನು ಸ್ವಚ್ಛಗೊಳಿಸಲು ಯತ್ನಿಸುತ್ತಾಳೆ. ಇಲ್ಲಿ ಮಹಾದೇವಿ ಗಂಡನ

ಆತಂಕ ಅಸಮಾದಾನ ಮನಸ್ಸಿನಿಂದ ಹಿಂಸೆ ಅನುಭವವಾದಾಗ ಬೇಸರದ ನುಡಿಗಳು ಹೊರಬಂದಾಗ ಅವನನ್ನು ಎಚ್ಚರಿಸುವ ಮೂಲಕ ಸತಿ ಧರ್ಮ ಪಾಲನೆ ಮಾಡಿರುವುದು ಕಾಣಬಹುದು.

ಆಯ್ದಕ್ಕಿ ಮಾರಯ್ಯ – ಲಕ್ಕಮ್ಮ :

೧೨ನೇ ಶತಮಾನದಲ್ಲಿ ಆಗಿ ಹೋದ ಪ್ರಮುಖ ಶರಣ ದಂಪತಿಗಳಲ್ಲಿ ಇವರು ಒಬ್ಬರು ಕಾಯಕನಿಷ್ಠೆಯ ಸ್ತ್ರೀ ರತ್ನಗಳಲ್ಲಿ ಆಯ್ದಕ್ಕಿ ಲಕ್ಕಮನ ಹೆಸರು ಪ್ರಸಿದ್ಧವಾಗಿದೆ. ಇವರು ಮಹಾಮನೆ ಆವರಣವಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ಜಂಗಮ ದಾಸೋಹ ಮಾಡಿಕೊಂಡು ಸುಖವಾಗಿದ್ದ ಅನುಪಮ ಕಾಯಕ ನಿಷ್ಠ ದಂಪತಿಗಳು.

ದಿನಾ ಬೆಳಗಿನ ಜಾವ ಎದ್ದು ಅಕ್ಕಿಯ ಆಯ್ದು ತರುವ ಕಾಯಕ ಮಾರಯ್ಯ ಮಾಡುತ್ತಿರುತ್ತಾನೆ. ಅವುಗಳಿಂದ ಹಸಿದು ಬಂದ ಜಂಗಮರನ್ನು ಉಣಬಡಿಸಿ ತೃಪ್ತಿ ಪಡಿಸುತ್ತಿರುವ ದಂಪತಿಗಳು. ಆದರೆ ಒಂದು ದಿನ ಅವರನ್ನು ಪರೀಕ್ಷಿಸಲೆಂದೆ ಬಸವಣ್ಣ ಮಹಾಮನೆ ಆವರಣದಲ್ಲಿ ಹೆಚ್ಚಿನ ಪ್ರಮಾಣದ ಅಕ್ಕಿ ಚೆಲ್ಲಿಸುತ್ತಾನೆ. ಆದಿನ ಎಂದಿನಂತೆ ಮಾರಯ್ಯ ಸಂತಸದಿಂದ ದಿನಾಲು ತರುವ ಅಕ್ಕಿಗಿಂತ ಹೆಚ್ಚು ಅಕ್ಕಿ ತಂದಿರುವದು ಕಂಡ ಕ್ಷಣವೇ ಲಕ್ಕಮ್ಮ ಹೀಗೆ ಹೇಳುತ್ತಾಳೆ.

> [೩]"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
> ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೋ?
> ಈ ಮಾತು ಮಾರಯ್ಯ ಪ್ರಿಯೆ ಅವರೇಶ್ವರಲಿಂಗಕ್ಕೆ ಸಲ್ಲದ ಬೋನು
> ಅಲ್ಲಿಯೇ ಸುರಿದು ಬನ್ನಿ ಮಾರಯ್ಯ"[೫೧]

ಎಂದು ಕೇಳಿ ಕಳುಹಿಸುತ್ತಾಳೆ. ಅಂದರೆ ಇಲ್ಲಿ ಮಾರಯ್ಯ ದಿನನಿತ್ಯ ಒಂದೇ ಮನದಿಂದ ಕಾಯಕ ಮಾಡುತ್ತಿದ್ದ. ಇಂದು ಹೆಚ್ಚು ಅಕ್ಕಿಯ ಕಂಡೊಡನೇ ಮನಸ್ಸು ಚಂಚಲತೆಗೆ ಒಳಗಾಗಿ ಎರಡು ಮನವಾಗಿ ನೀವು ಅಕ್ಕಿ ತಂದಿರುವಿರಿ. ಇದು ಹುಟ್ಟಿರುವುದು ನಿಮ್ಮ ಮನದಲ್ಲಿನ ಭಾವವೋ,ಅಥವಾ ಬಸವಣ್ಣನ ಅನುಮಾನದ ದೃಷ್ಟಿಯೋನಾ ಅರಿಯೇ ಮಾರಯ್ಯ ಇದು ಸಲ್ಲದು ಬೋನ ಇದು ನಮ್ಮ ವ್ರತ ನಿಯಮಕ್ಕೆ ಆಗದ ಆಹಾರ, ಈ ಹೆಎಚ್ಚಗಿರುವಒಪ್ಪಿಗೆಯಿಲ್ಲದ ಅಕ್ಕಿಗಳು ಇವುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿಯೇ ಸುರಿದು ಬನ್ನಿ ಎಂದು ಕಳುಹಿಸುತ್ತಾಳೆ.

ಇಲ್ಲಿ ಹೆಂಡತಿ ಲಕ್ಕಮ್ಮ ಗಂಡ ಆಸೆಯ ಸುಳಿಗೆ ಸಿಲುಕಿದ್ದಾನೆ. ತನ್ನ ಗಂಡನು ಮಾಡಿರುವ ಕೆಲಸವನ್ನು 'ತಪ್ಪು' ಎಂದು ಗುರುತಿಸುತ್ತಾಳೆ ಜೊತೆಗೆ ಗಂಡನು ಮಾಡಿರುವ ತಪ್ಪನ್ನು ಅರಿತು ತಿದ್ದಿ ಸರಿಪಡಿಸುವುದಕ್ಕಾಗಿ ಅವನು ಹೆಚ್ಚಿಗೆ ತಂದಿರುವ ಅಕ್ಕಿಯನ್ನು ಸುರಿದು ಬನ್ನಿ ಎಂದು ಹೇಳುತ್ತಾಳೆ ಗಂಡನನ್ನ ಚಂಚಲತೆ ಮಾರ್ಗಕ್ಕೆ ಒಳಗಾಗದಂತೆ ಎಚ್ಚರಿಸುತ್ತಾಳೆ. ನಾವು ಕಾಯಕ ಮಾಡಿ ದಾಸೋಹ ನಡೆಸುತ್ತಿದ್ದೇವೆ. ಈ ದಾಸೋಹ ಹೇಗೆ ನಡೆಸಬೇಕು, ಇದನ್ನು ಯಾವ ರೀತಿ ಮಾಡಬೇಕು ಎಂಬುವುದನ್ನು ಲಕ್ಕಮ್ಮ ಹೀಗೆ ಹೇಳಿದ್ದಾಳೆ.

"ಭಕ್ತರ ಕಾಯಕವೆಂದು ದಾಯಗಾರಿಕೆಯಲ್ಲಿ ತಂದು
ದಾಸೋಹ ಮಾಡಬಹುದೇ?
ಒಮ್ಮನವ ತಂದು ಒಮ್ಮನದಲ್ಲಿಯೇ ಮಾಡಿ
ಇಮ್ಮನವಾಗದ ಮುನ್ನವೆ
ಮಾರಯ್ಯ ಪ್ರೀಯ ಅಮರೇಶ್ವರ ಲಿಂಗಕ್ಕೆ ಸಲ್ಲಬೇಕಮಾರಯ್ಯ"[೫೨]

ನಾವು ಮಾಡುತ್ತಿರುವದು ಭಕ್ತರ ಕಾಯಕವೆಂದು ಅತಿಯಾಸೆಯಲ್ಲಿ ಅಕ್ಕಿಯ ತಂದು ದಾಸೋಹ ಮಾಡಬಹುದೇ? ಎಕ ಭಾವದಿಂದ ತಂದು ಎಕ ಭಾವದಲ್ಲಿ ಮಾಡಿ ಆ ಮನ ಎರಡಾಗುವ ಮೊದಲೇ ನಮ್ಮ ಭಕ್ತಿ ಆ ದೇವರಿಗೆ ಸಲ್ಲಬೇಕು. ಒಂದು ರೀತಿಯಲ್ಲಿ ಕಾಯಕದ ಏಕಾಗ್ರತೆಯ ಬೋಧನೆ ಇಲ್ಲಿ ಕಂಡುಬರುತ್ತದೆ. ಹೆಚ್ಚು ಅಕ್ಕಿಯನ್ನು ತಂದು ಸುರಿದು ಬರಲು ಮನಸ್ಸಿಲ್ಲದ ಗಂಡನಿಗೆ ತಿಳಿಹೇಳುವ ಈ ಪರಿಯ ಲಕ್ಕಮ್ಮ ಕಾಯಕನಿಷ್ಠೆಗೆಂದೆ ಹಿಡಿದ ಕನ್ನಡಿಯಾಗಿದೆ. ಲಕ್ಕಮ್ಮ ಹೆಚ್ಚಿನ ಅಕ್ಕಿಯನ್ನು ತಂದು ಸುರಿದು ಬರಲು ಹೇಳುವ ನುಡಿಗಳು ಅವಳ ವೈಚಾರಿಕತೆ ಜ್ಞಾನವನ್ನು ತಿಳಿಸುತ್ತದೆ. ಅಂತಹ ಇನ್ನೊಂದು ವಚನ ಹೀಗದೆ.

"ಸಂದಣಿಗೊಂಡು ಮನ ಹರುಷದಿಂದ
ಬಸವಣ್ಣನ ಅಂಗಳಕ್ಕೆ ಹೋಗಿ
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ?
ನಮಗೆ ಎಂದಿನಂದವೆ ಸಾಕು
ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ
ಮಾರಯ್ಯ ಅಪ್ರಿಯೆ ಅಮರೇಶ್ವರ ಲಿಂಗಕೊಟ್ಟ
ಕಾಯಕವೇ ಸಾಕು ಮಾರಯ್ಯ"[೫೩]

ನಮಗೆ ಈಗಿರುವ ಕಾಯಕವೇ ಸಾಕು. ಹೆಚ್ಚಿನ ಅಕ್ಕಿಯ ಆಸೆ ಸಾರ್ಥಕ್ಕೆ ದಾರಿಮಾಡಿಕೊಡುತ್ತದೆ. ಇದು ನಮ್ಮಗೆ ಸಲ್ಲದು.ಅಲ್ಲಿಯೇ ಅಕ್ಕಿಯು ಸುರಿದು ಬಾ ಎಂದು ಹೇಳುತ್ತಿರುವುದು ಲಕ್ಕಮನ ಏಕನಿಷ್ಠೆ ಭಾವನೆಯನ್ನು ಮತ್ತೆ ಮತ್ತೆ ಎತ್ತಿ ತೋರಿಸುತ್ತದೆ. ಅವಳ ಇನ್ನೊಂದು ವಚನದಲ್ಲಿ ಗಂಡ ಮಾರಯ್ಯನನ್ನು ಆಸೆ ಬಿಡಿಸಲು ಯತ್ನಿಸಿದ್ದಾಳೆ. ಆ ವಚನವು ಹೀಗಿದೆ

"ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯ
ರೋಷವೆಂಬುದು ಯಮಧೂತರಿಗಲ್ಲದೆ
ಅಜಾತರಿಗುಂಟೆ ಅಯ್ಯ
ಈ ಸಕ್ಕಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"[೫೪]

ಈ ವಚನದಲ್ಲಿ ಲಕ್ಕಮ್ಮ ಗಂಡನಿಗೆ ಬುದ್ಧಿ ಮಾತು ಹೇಳುವುದರೊಂದಿಗೆ ನಾವು ಶರಣರ ಸಾತ್ವಿಕ ಬದುಕನ್ನು ಜೀವಿಸುತ್ತಿರುವವರು ಹಾಗಾಗಿ ನಮ್ಮ ಆಸೆ, ರೋಷ, ಕೋಪ, ಮುಂತಾದ ಅರಿಷಡ್ ವರ್ಗಗಳ ಮೇಲೂ ಹತೋಟಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಗುಣಗಳು ನಮಗೆ ಇರಬೇಕಾದ ಗುಣಗಳಲ್ಲ.

ಆಸೆಯೆನ್ನುವುದು ಅರಸರಿಗೆ ಇರುವುದು. ನಾಡಿನ ಅರಸವನಾದವನು ಸದಾಕಾಲ ನಾಡಿನ ಸೀಮೆಯನ್ನು ವಿಸ್ತರಿಸಲು ಇತರರನ್ನು ಸದೆಬಡಿಯಲು ಚಿನ್ನ-ಬೆಳ್ಳಿ ನಗ-ನಾಣ್ಯಗಳನ್ನು ಒಟ್ಟುಗೂಡಿಸಿ ತನ್ನ ಬೊಕ್ಕಸದ ಸಂಪತ್ತನ್ನು ಹೆಚ್ಚುಮಾಡಿಕೊಳ್ಳುವುದು. ಆದರಿಂದ ಆಸೆಯೆಂಬುದು ಅರಸನಿಗೆ ಇರುವುದು ಸಹಜ. ಆದರೆ ಸಹಮಾನವರೊಡನೆ ಹಂಚಿ ಉಣ್ಣಬೇಕೆಂಬುದು ಎಲ್ಲರ ಒಳಿತನೊಡನೆ ತಮ್ಮ ಒಳಿತನ್ನು ಕಾಣಬೇಕೆಂಬ ಹಂಬಲವಿರುವ ಶರಣರಿಗೆ ಹೀಗೆ ಎಲ್ಲವನ್ನು ತನಗೆ ಬೇಕೆಂಬ ಆಸೆ ಇರುವುದು ಸರಿಯೇ? ರೋಷ, ಕೋಪ, ಎನ್ನುವುದು ಯಮಧೂತರಿಗೆ ಒಪ್ಪಿಗೆಯಾಗುವ ಗುಣ ಶಿವಭಕ್ತರಸಾದ ನಿಮ್ಮಗೆ ಇಷ್ಟು ಅಕ್ಕಿಯಾಸೆ ಯಾಕೆ? ಇದನ್ನು ಶಿವನು ಒಪ್ಪನು ಮಾರಯ್ಯ ಎಂದು ಪ್ರೀತಿಯಿಂದ ಅತಿ ವಿನಯದಿಂದ ಅವಳು ಅವನನ್ನು ಶಿವಭಕ್ತರನಡೆಯ ಕುರಿತು ಎಚ್ಚರಿಸುತ್ತಾಳೆ.

ಹೀಗೆ ಶರಣರು ಎಲ್ಲಿ ದಾರಿ ತಪ್ಪುತ್ತಿದ್ದಾರೆ ಆವಾಗ ಅಲ್ಲಿಯೇ ಅವರನ್ನು ಸರಿಯಾದ ದಾರಿಗೆ ನಡೆಸುವ ಕೆಲಸ ಮಾಡಿದ್ದಾರೆ. ಅವರ ಸಹಧರ್ಮಿಯರು ತಮ್ಮ ಗಂಡಂದಿರು ಮನಸ್ಸು ಅರಿತು ಎಚ್ಚರಿಸುವ ಮನಸ್ಸು ಹಿಂಸೆಗೆ ಒಳಗಾದಾಗ ಅದನ್ನು ದೂರ ಮಾಡಿರುವ ಅನೇಕ ಪ್ರಸಂಗಗಳು ನಮ್ಮ ವಚನಕಾರರಲ್ಲಿ ಕಂಡುಬರುತ್ತದೆ.

ಮಾರಯ್ಯ ಬಸವಣ್ಣನವರ ಮಹಾಮನೆಯ ಅಂಗಳದಿಂದ ಎಂದಿನಂತೆ ಅಕ್ಕಿಯನ್ನು ಆಯ್ದು ತರಲು ಹೋಗಬೇಕಾಗಿದ್ದ ಅವನು ಅಂದು ಹೋಗಿರಲಿಲ್ಲ. ಅನುಭವ ಮಂಟಪದಲ್ಲಿ ನಡೆಯುತ್ತಿರುವ ಚರ್ಚೆಯಲ್ಲಿ ಮೈಮರೆತ ಕುಳಿತಿದ್ದ. ಅಲ್ಲಿ ಕುಳ್ಳಿತಿದ್ದವನನದನು ಕರೆತಂದು ಕಾಯಕದಲ್ಲಿ ತೊಡಗಿಸುತ್ತಾಳೆ. ಆಗ ಲಕ್ಕಮಳು ತನ್ನ ಗಂಡನಿಗೆ ಅಲ್ಲಿಗೆ ಹೋಗಿಬರಬೇಕಾಗಿರುವುದನ್ನು ಹೀಗೆ ನೆನಪಿಸುತ್ತಾಳೆ. ಆಗ ವಚನ ಹೀಗದೆ,

"ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ
ಭಾವಶುದ್ದವ್ವಾ ಮಹಾಶರಣರ
ತಿಪ್ಪೆಯ ತೆಪ್ಪಲ ಅಕ್ಕಿಯ ತಂದು
ನಿಶ್ಚೃಸಿ ಮಾಡಬೇಕು ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗಕ್ಕೆ ಬೇಗ ಹೋಗುಮಾರಯ್ಯ"[೫೫]

ಹೀಗೆ ಗಂಡನನ್ನು ಕಾಲ ಕಾಲಕ್ಕೆ ಲಕ್ಕಮ್ಮ ಎಚ್ಚರಿಸಿದ್ದಾಳೆ. ನಮ್ಮ ಚರ್ಚೆ ವಿಚಾರಕ್ಕಿಂತ ನುಡಿಗಿಂತ ನಡೆಮುಖ್ಯ. ನಡೆಯಿಲ್ಲದ ನುಡಿ ಎಷ್ಟಿದರೇನು? ಎನ್ನುವಂತೆ ಕಾಯಕವನ್ನು ಮರೆತು ಚರ್ಚೆಯಲ್ಲಿ ತೊಡಗುವುದರಿಂದ ಆಗುವ ಪ್ರಯೋಜನವೇನು. ಮೊದಲ ಕಾಯಕ ಅದಕ್ಕೆ 'ಕಾಯಕವೇ ಕೈಲಾಸ' ಎಂದು ಆಯ್ದಕಿ ಲಕ್ಕಮ್ಮ ಹೀಗೆ ಕಾಯಕ ಪ್ರಜ್ಞೆಯ ಜೊತೆ ಜೊತೆ ಸಮಯ ಪ್ರಜ್ಞೆಯನ್ನು ಅವಳು ಹೇಳಿದ್ದಾಳೆ.

ಹೀಗೆ ೧೨ನೇಶತಮಾನ ಕಾಲದ ಶರಣೆಯರು ಪುರುಷರಿಗಿಂತಲು ಹೆಚ್ಚು ವೈಚಾರಿಕವಾಗಿ ಜ್ಞಾನ ಹೊಂದಿರುವುದನ್ನು ಕಾಣಸಿಗುತ್ತವೆ.

ಹಡಪದ ಅಪ್ಪಣ್ಣ–ಲಿಂಗಮ್ಮ :

ಸತಿಪತಿಗಳೊಂದಾದ ಭಕ್ತಿ ಶಿವಂಗೆ ಹಿತವಪ್ಪುದು ಎಂಬಂತೆ ಹಡಪದ ಅಪ್ಪಣ್ಣ ಮತ್ತು ಲಿಂಗಮ್ಮ ಶಿವಂಗೆ ಹಿತವಪ್ಪ ಭಕ್ತಿಯನ್ನಾಚರಿಸಿ ಅಪ್ಪಣ್ಣ ನಿಜಸುಖಿಯಾದರೆ, ಲಿಂಗಮ್ಮ ನಿಜಮುಕ್ತಿಯಾಗಿದ್ದಾಳೆ. ಲಿಂಗಮ್ಮ ಬಸವಣ್ಣನವರ ಆಪ್ತ ಕಾರ್ಯದರ್ಶಿ ಹಡಪದ ಅಪ್ಪಣ್ಣನ ಪತ್ನಿ, ಹಿರಿಯ ಶರಣೆ ಶ್ರೇಷ್ಠ ವಚನಗಾರ್ತಿಯಾಗಿದ್ದಾಳೆ. ಗುರುರಾಜ ಚಾರಿತ್ರದ ಶಿವಗಣನಾಮ ಸಂಕೀರ್ತನೆಯಲ್ಲಿ ಚಾರಗುರುಭಕ್ತಿ ಲಿಂಗಮ್ಮ ಎಂಬ ಉಲ್ಲೇಖ ದೊರೆಯುತ್ತದೆ.

ಮಹಾನೆಯಲ್ಲಿ ಎಲ್ಲರಿಂದಲೂ ನಿಜಮುಕ್ತಿ ಎಂದು ಕರೆಯಿಸಿಕೊಂಡ ಲಿಂಗಮ್ಮ ಅಪ್ಪಣ್ಣ ಪ್ರೀಯ ಚೆನ್ನ ಬಸವಣ್ಣ ಎಂಬ ಅಂಕಿತದಲ್ಲಿ ೧೧೪ ವಚನಗಳು ರಚಿಸಿದ್ದಾಳೆ. ಇವಳು ಕೆಳವರ್ಗದಿಂದ ಬಂದವಳು. ಶರಣರ ಅಂಗದಲ್ಲಿ ತನ್ನ ವ್ಯಕ್ತಿತ್ವ ರೂಪಿಸಿಕೊಂಡು ವಚನ ರಚನಾ ಕಾರ್ಯದಲ್ಲಿ ತೊಡಗಿದಳು. ಅಪ್ಪಣ್ಣನವರಿಗೆ ಗುರುವಾಗಿದ್ದ ಚೆನ್ನಮಲ್ಲೇಶ್ವರ ಲಿಂಗಮ್ಮನ ಗುರುವೂ ಆಗಿದ್ದ. ಗುರುಲಿಂಗ ಜಂಗಮ, ಮುಂತಾದ ತಾತ್ವಿಕ ವಿಷಯಗಳ ವಿವೇಚನೆ ವ್ರತ ನಿಯಮಗಳ ಬಗ್ಗೆ ಅಪಾರ ನಂಬಿಕೆ ಕೋರಿಕೆ, ಆತ್ಮ ವಿಶ್ವಾಸದ ಕೆಚ್ಚು, ತನ್ನನ್ನು ಕೈಹಿಡಿದು ಮೇಲೆತ್ತಿದ ಗುರು ಶರಣರ ಮೇಲಿನ ಗೌರವ ಲಿಂಗಮ್ಮನ ವಚನಗಳಲ್ಲಿ ಕಂಡು ಬರುವ ವಿಶಿಷ್ಟ ಅಂಶಗಳಾಗಿವೆ.

ಕೆಳವರ್ಗದಲ್ಲಿ ಹುಟ್ಟಿ ಬಂದ ಲಿಂಗಮ್ಮ ತನ್ನ ಕುಲದ ಸೂತಕವನ್ನು ಕಳೆದುಕೊಂಡು ಶರಣರ ಸಂಗತಿಯನ್ನು ಮುಚ್ಚು ಮರೆಯಿಲ್ಲದೆ ಪ್ರಾಮಾಣಿಕವಾಗಿ ತನ್ನ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ. ಆ ವಚನ ಹೀಗದೆ.

"ಕೈಲಾಸ ಮರ್ತ್ಯಲೋಕವೆಂಬರು,
ಕೈಲಾಸವೆಂದರೇನೋ?ಮರ್ತ್ಯ ಲೋಕವೆಂದರೇನೋ?
ಅಲ್ಲಿಯ ನಡೆಯೊ ಒಂದೇ ಇಲ್ಲಿಯ ನಡೆಯೂ ಒಂದೇ
ಅಲ್ಲಿಯ ನುಡಿಯೂ ಒಂದೇ, ಇಲ್ಲಿಯ ನುಡಿಯೂ ಒಂದೇ
ಕಾಣೆರಯ್ಯ? ಎಂಬರು ಕೈಲಾಸದವರೇ ದೇವಕೇಳಂಬವರು
ಮರ್ತ್ಯಲೋಕದವರೇ ಮಹಾಗಣಂಗಳೆಂಬರು
ಭವದ ದಾಂಟಿ ತಮ್ಮ ತಮ್ಮ ಹುಟ್ಟಿನಳಿದು ಮಹಾಬೆಳಗನೇ
ಕೂಡಿ ಬೆಳಗಿನಲ್ಲಿ ಬಯಲಾರದಯ್ಯ"[೫೭]

ಈ ವಚನದ ಮೂಲಕ ದೇವರಿಗೆ ಸಾವಿಲ್ಲ. ವೃತ್ಯದ ಈ ಭೂಮಿಯ ಮೇಲಿರುವ ಜನರಿಗೆ ಮಾತ್ರ ಸಾವು ಇದೆ ಎಂದು ಹೇಳುತ್ತಾಳೆ. ಅಲ್ಲಿಯ ನಡೆ, ಇಲ್ಲಿಯ ನಡೆ ಬೇರೆ ಬೇರೆ ಎಂಬುದನ್ನು ಲಿಂಗಮ್ಮ ಒಪ್ಪುವುದಿಲ್ಲ. ಸಂಸಾರ ಎಂಬುದೊಂದು ಗಾಳಿಯ ಸೊಡರು ಎಂಬುದನ್ನು ಲಿಂಗಮ್ಮ ತನ್ನ ಅನುಭವದಿಂದ ಕಂಡುಕೊಂಡು ಸಂಸಾರವು ನಶ್ವರ ಮಧ್ಯ ಬಂದು ಮದ್ಯೆಯೇ ಹೊರಟು ಹೋಗುತ್ತದೆ.

ಕೊನೆಗೆ ತನ್ನಲ್ಲಿ ಉಳಿದುದುಲಿಂಗ ಲಿಂಗ ಮಾತ್ರ ಅಂದಿದ್ದಾಳೆ. ಆಗ ಜಲದೊಳಗಣ ಸೂರ್ಯನ ಪ್ರತಿಬಿಂಬದಂತೆ ಮೋಡವಿಲ್ಲದ ಚಂದ್ರನಂತೆ ಮನಶುದ್ಧವಾಗುತ್ತದೆ. ಈ ಭವಬಂಧನ ನೀಗಲು ಅನುವು ಮಾಡಿಕೊಡುತ್ತದೆ ಎಂದು ಲಿಂಗಮ್ಮ ಹೇಳಿದ್ದಾಳೆ. ಹೀಗೆ ೧೨ನೇ ಶತಮಾನದಲ್ಲಿ ದೊರತ ಸ್ತ್ರೀ ಸ್ವಾತಂತ್ರ್ಯಕ್ಕೆ ಸ್ಪಂದಿಸಿ ಆಧ್ಯಾತ್ಮ ಸಾಧನೆ ಮಾಡಿಕೊಂಡು ಇತರರಿಗೆ ಬೋಧಿಸುವ ಧೈರ್ಯ ತೋರಿದ ಅಪ್ಪಣ್ಣನ ರಾಣಿ ಲಿಂಗಮ್ಮ.

ಹರಳಯ್ಯ ಕಲ್ಯಾಣಮ್ಮ :

೧೨ನೇ ಶತಮಾನದಲ್ಲಿದ್ದ ಶರಣ ದಂಪತಿಗಳಲ್ಲಿ ಇವರು ಒಬ್ಬರು. ಇವರು ಬದುಕಿನಲ್ಲಿ ಮಾಡಿದ ಬೋಧನೆ, ಸಾಧನೆ ಜಗತ್ತನ್ನು ವಿಸ್ಮಯಗೊಳಿಸಿದೆ. ಒಮ್ಮೆ ಕಲ್ಯಾಣದ ಬೀದಿಯಲ್ಲಿ ನಡೆದು ಬರುತ್ತಿರುವಾಗ ಇವರಿಗೆ ಹರಳಯ್ಯ ಮತ್ತು ಧರ್ಮಪತ್ನಿ ಕಲ್ಯಾಣಮ್ಮ ಎಂಬ ಶರಣ ದಂಪತಿಗಳು ಎದುರಾಗುತ್ತಾರೆ. ಆಗ ಹರಳಯ್ಯ ಬಸವಣ್ಣನಿಗೆ ಶರಣಾರ್ಥಿ ಎಂದು ಕೈಮುಗಿದು ನಮಸ್ಕರಿಸುತ್ತಾನೆ.

ಇದಕ್ಕೆ ಪ್ರತಿಯಾಗಿ ಬಸವಣ್ಣ ಶರಣು ಶರಣಾರ್ಥಿಗಳು ಎಂದಾಗ ಹರಳಯ್ಯ ಭಾವಪರವಶಕೊಳ್ಳಗಾಗುತ್ತ ನನಗಿಂತ ಗುರು ಸ್ಥಾನದಲ್ಲಿದ್ದ ಅಣ್ಣ ಬಸವಣ್ಣನಲ್ಲಿ ಇಷ್ಟೊಂದು ಅಗಾನದ ನಮ್ರತೆ ಕಂಡು ಹರಳಯ್ಯ ತನ್ನ ಗುರುವಿಗೆ ಏನಾದರೂ ಸಮರ್ಪಿಸಬೇಕೆನ್ನುವ ಮಹಾದಾಸೆಯಲ್ಲಿ ಚಿಂತಾಕ್ರಾಂತದಲ್ಲಿರುವಾಗ ಪತಿಯ ಮಾನಸಿಕ ಚಿಂತನೆಯನ್ನು ಕಂಡು ಪತ್ನಿ ಕಲ್ಯಾಣಮ್ಮ ಒಂದು ಉಪಾಯ ಹೇಳುತ್ತಾಳೆ.

ಅದೇನೆಂದರೆ, ಪತಿ ಪತ್ನಿಯರ ತೊಡೆಯ ಚರ್ಮ ತೆಗೆದು ಅಣ್ಣ ಬಸವಣ್ಣನಿಗೆ ಕಾಲಿನ ಪಾದರಕ್ಷೆಗಳು ಮಾಡುವುದು ಎಂದು ಹೇಳಿದಾಗ ತಕ್ಷಣವೇ ಒಪ್ಪಿದ ಹರಳಯ್ಯ ಇಬ್ಬರ ತೊಡೆಯ ಚರ್ಮದ ಪಾದರಕ್ಷೆಗಳನ್ನು ಮಾಡಿ ಬಸವಣ್ಣವರಿಗೆ ನೀಡಿದರು. ಇವರೀರ್ವ ಶರಣ ದಂಪತಿಗಳ ಅದಮ್ಯ ಭಕ್ತ ಕಂಡು ಬಸವಣ್ಣ ಪಾದರಕ್ಷೆಗಳನ್ನು ತನ್ನ ತಲೆಯ ಮೇಲೆ ಇಟ್ಟು ಈ ಪಾದರಕ್ಷೆಗಳನ್ನು ತೊಡಲು ಸಂಗಮ್ಮನಿಗೆ ಸಲ್ಲುವಂತಹುಗಳು ಎಂದು ಹಿಂದುರುಗಿಸುತ್ತಾರೆ. ಹೀಗೆ ಶರಣ–ಶರಣಿಯರು ಪತಿಯ ಮನೋಧರ್ಮವನ್ನು ಅರಿತು ಅವರ ಮನಸ್ಸಿನಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಮಹತ್ವದ ಪಾತ್ರ ವಹಿಸಿದ್ದಾರೆ.

ಇಂತಹ ಅನೇಕ ಜನ ದಂಪತಿಗಳ ೧೨ನೇ ಶತಮಾನದಲ್ಲಿ ಆದರ್ಶಯುತ ಜೀವನ ನಡೆಸಿ, ಸಾರ್ಥಕ ಬದುಕನ್ನು ನಡೆಸಿದರು. ಅವರ ಹೆಸರುಗಳು ಇಂತಿವೆ. ಕಂಬಾರ ಗುಂಡಯ್ಯ ಮತ್ತು ಅವರ ಪತ್ನಿ ಕೇತಲದೇವಿ, ದಾಸಿಮಯ್ಯ ಮತ್ತು ದುರ್ಗಳೆ, ದಸರಯ್ಯ ಮತ್ತು ವೀರಮ್ಮ, ಉರಿಲಿಂಗ ಪೆದ್ದಿ ಮತ್ತು ಕಾಳವ್ವೆ ಇಂತಹ ಅನೇಕ ಶರಣ ದಂಪತಿಗಳು ಆಧುನಿಕತೆಗೆ ಮಾದರಿಯಾಗುವಂತಹ ಜೀವನ ನಡೆಸಿ ಮಾದರಿಯುತ ಸಂಸಾರವನ್ನು ನಡೆಸಿದ್ದಾರೆ.

ಹೀಗೆ ೧೨ನೇ ಶತಮಾನದ ವಚನಕಾರ್ತಿಯರು ತಮ್ಮ ಪತಿಗಳೊಂದಿಗೆ ಸಹಧರ್ಮಿನಿ ಎನಿಸಿಕೊಂಡು ಸಹ ಜೀವನದಲ್ಲಿ ಸಮವಾಗಿ, ಸಹಬಾಳ್ವೆಯನ್ನು ಸರಳ ಜೀವನ ನಡೆಸುತ್ತಾ ಸಮಾಜಕ್ಕೆ ಆದರ್ಶ ಪ್ರಾಯರಾಗಿದ್ದಾರೆ. ಹೆಣ್ಣಾಗಿ ಹೇಂಡತಿಯಗಿ ಪತಿಯ ಸರ್ವ ಕಾರ್ಯದಲ್ಲೂ ಸಹಕಾರಿಯಾಗಿದ್ದಾಳೆ. ಕಾಲಕಾಲಕ್ಕೆ ಎಚ್ಚರಿಕೆಯ ಗಂಟೆಯಾಗಿ ಕಾರ್ಯನಿರ್ವಹಿಸಿದ್ದಾಳೆ.ಸಮಸ್ಯೆಯೆಂದು ಭಾವಿಸಿ ಚಿಂತಾಕ್ರಾಂತನಾಗಿ

ಕುಳಿತಾಗ ಸರಳವಾಗಿ ಸುಲಭವಾಗಿ ಸಮಸ್ಯೆಗಳನ್ನು ಪರಿಹರಿಸಿ ಚಿಂತೆ, ಮಾನಸಿಕ ನೋವನ್ನು ಶಮನಗೊಳಿಸಿದ್ದಾಳೆ. ಪತಿಯ ವಿಚಾರ ಮಟ್ಟಕ್ಕೆ ಸಮನಾಗಿ ತಾನು ವಿಚಾರ ಮಾಡಿ ವಿಚಾರ ಪತ್ನಿಯಾಗಿದ್ದಾಳೆ.ದಾರಿ ದೀಪವಾಗಿದ್ದಾರೆ. ತಪ್ಪಿದಾಗ ತಿದ್ದಿ ಹೇಳುವ ಗುರುವಾಗಿದ್ದಾಳೆ. ಸ್ವಾಭಿಮಾನದ ಜೀವನ ಸಾಗಿಸುವ ದಾರಿ ಹೇಳಿದ್ದಾಳೆ.ಮುಕ್ತಿ ಮಾರ್ಗದಲ್ಲಿ ನಡೆಯುವಾಗ ಬೆಂದು ಬೇಸತ್ತಾಗ ಸ್ಫೂರ್ತಿಯು ನೀಡಿದ್ದಾಳೆ.

೩.೫. ಶರಣೆಯರ ವಚನಗಳಲ್ಲಿ ಮೌಢ್ಯ ಮತ್ತು ಡಾಂಭಿಕತೆಯ ನಿರಾಕರಣೆ:

ನಮ್ಮ ಸಮಾಜದಲ್ಲಿ ಮೂಢ ನಂಬಿಕೆಗಳ ಆಚರಣೆ ಮೊದಲಿನಿಂದಲೂ ಇರುವುದು ಕಾಣುತ್ತೇವೆ. ಈ ಮೂಢನಂಬಿಕೆಗಳು ಎಲ್ಲಾ ಕಾಲದ, ಎಲ್ಲಾ ದೇಶದ, ಎಲ್ಲಾ ಜನಾಂಗಗಳಲ್ಲುಂಟಾದರೂ ನಮ್ಮ ಭಾರತೀಯುರಲ್ಲಿ ಸ್ವಲ್ಪ ಹೆಚ್ಚು ಎಂದೇ ಹೇಳಬೇಕಾಗಿದೆ. ಈ ಮೂಢನಂಬಿಕೆಗಳಿಂದಲೇ ನಾವು ಭಾರತೀಯರು ಹಿಂದೆ ಉಳಿದಿದ್ದಾರೆ ಎಂಬ ಮಾತುಗಳು ಕೇಳಿರುತ್ತನೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದು ವಿಚಾರಾರ್ಹವಾಗಿದೆ. ಯಾರು ದೇವರನ್ನು ಕುರಿತು ಪೂಜೆ, ಪರಕೆ, ಇತ್ಯಾದಿಗಳನ್ನು ಮಾಡುತ್ತಿರುವರೇ ಅವರ ಕ್ರಿಯೆಗಳಲ್ಲಿ ಮೂಢ ನಂಬಿಕೆಗಳೇ ಕಾರಣವೆಂದೂ, ದೇವರ ಅಸ್ತಿತ್ವವನ್ನು ಒಪ್ಪದವರು ಎಂದು ಹೇಳುತ್ತಿರುತ್ತಾರೆ. ಆದರೆ ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುವುದೋ ಅದನ್ನು ಮೂಢನಂಬಿಕೆಗಳೆಂದು ಕರೆಯುವದು ಸೂಕ್ತವೆನಿಸುತ್ತದೆ.

ಒಂದು ದೃಷ್ಟಿಯಲ್ಲಿ ಆಳವಾಗಿ ಆಲೋಚನೆ ಮಾಡಿದರೆ ನಮ್ಮ ದೇಶದ ಸಿದ್ಧಾಂತಕ್ಕೂ ಮೂಢ ನಂಬಿಕೆಗೂ ನೇರ ಸಂಬಂಧವಿಲ್ಲವೆನ್ನಬಹುದು ದೇವರ ಸರ್ವಶಕ್ತನಾಗಿರುವುದರಿಂದ ಓದದೇ ಪಾಸಾಗಲಿ, ಕೆಲಸ ಮಾಡದೇ ಬಡ್ತಿ ದೊರೆಯಲಿ ದುಡಿಯದೆ ಹಣ ಬರಲಿ ಎಂಬ ಕೆಟ್ಟ ಸ್ವಾರ್ಥಪರ ದೃಷ್ಟಿಯಿಂದ ದೇವರನ್ನು ಪೂಜಿಸಲಾರಂಭಿಸಿದರು. ಒಂದೊಂದರ ಪರಿಹಾರಕ್ಕೆ ಒಂದೊಂದು ಬಗೆಯ ಪೂಜೆ ಮಾಡಬೇಕೆಂದು ಆಯಾ ದೇಶ ಜನಾಂಗಗಳಲ್ಲಿ ಒಂದೊಂದು ಬಗೆಯ ಪೂಜೆ ಮಾಡಬೇಕೆಂದು ಆಯಾ ದೇಶ ಜನಾಂಗಗಳಲ್ಲಿ ಒಂದೊಂದು ಬಗೆಯಾಗಿ ನಿರ್ಣಯವಾಯಿತು. ಮಾನವನು ಜೀವನದಲ್ಲಿ ಅವನೆಷ್ಟೆ ಪ್ರಾಮಾಣಿಕವಾಗಿದ್ದರೂ ಹಲವು ಪ್ರಸಂಗಗಳಲ್ಲಿ ಅವನ ಸೋಲಬಹುದು. ಅಂತಹ ಸಂದರ್ಭದಲ್ಲಿ ಅವನು ಹುಚ್ಚನಾಗದಿರಬೇಕಾದರೆ ತನ್ನ ಅಭಿವೃದ್ಧಿಗೆ ದೈವಚಿತ್ತದಿಂದ ಸಮಾಧಾನ ಪಡಿಸಲಾಗುವುದು.

ಈ ಮೂಢನಂಬಿಕೆಗಳನ್ನು ಹುಟ್ಟು ಹಾಕುವವರು ಸಮಾಜಘಾತರು, ಜನರ ಸಮಸ್ಯೆಗಳನ್ನು ಬಂಡವಾಳವಾಗಿಟ್ಟುಕೊಂಡು, ಜನಗಳ ಆತಂಕ-ಭಯಗಳನ್ನು ಬಂಡವಾಳವಾಗಿಟ್ಟು ತಮ್ಮ ಬೇಳೇ ಬೇಯಿಸಿಕೊಳ್ಳುವ ಡೋಂಗಿಗಳು ನಮ್ಮ ಸಮಾಜದಲ್ಲಿ ಬಹಳಷ್ಟು ಜನರಿದ್ದಾರೆ. ಈ ಮೂಢನಂಬಿಕೆಗಳು ಬಿಡಬೇಕೆಂದರೆ ಸತ್ಯ ಅರಿವು ಮುಖ್ಯ, ಸತ್ಯದ ಅರಿವಾಗಿ ಮೌಢ್ಯ ಬಿಟ್ಟಾಗ ಮೂಢನಂಬಿಕೆಗಳು ತೊಲಗುತ್ತವೆ. ಇದಕ್ಕೆ ನಮ್ಮಲ್ಲಿ ವಿಚಾರ ಶಕ್ತಿ ಬೆಳೆಸಿಕೊಳ್ಳಬೇಕು. ವಿಚಾರ ವಿನಿಮಯದ ಜೊತೆಗೆ ಸತ್ಯವನ್ನುಜು ಅರಿಯುವ ತವಕವಿರಬೇಕು.

ಪ್ರತಿ ವ್ಯಕ್ತಿಗೂ ಸತ್ಯದ ಅರಿವಾದಾಗ ಯಾವುದೇ ಆಚಾರವನ್ನು ವಿಚಾರ ಓರೆಗಲ್ಲಿಗೆ ಹಚ್ಚಿ ತಿಕ್ಕಿದರೆ ಅದರ ನಿಜ ಸ್ವರೂಪ ಅರಿತು ಮೌಢ್ಯವನ್ನು ತೊರೆದು ಮೂಢನಂಬಿಕೆಗಳ ಸ್ಥಾನದಲ್ಲಿ ಶುದ್ಧ ನಂಬಿಕೆಗಳು

ಆಕ್ರಮಿಸುತ್ತವೆ. ಇಂತಹ ಮೌಢ್ಯತೆಯನ್ನು ಕೊಳಗಿಸಿ ಅವರಲ್ಲಿ ಅರಿವು ಮೂಢಿಸುವ ವೈಚಾರಿಕತೆಯನ್ನು ಬೆಳೆಸುವ ಪ್ರಯತ್ನ ಶರಣರು ಮಾತ್ರವಲ್ಲದೇ ಶಿವಶರಣೆಯರು ಮಾಡಿದ್ದಾರೆ.

ಸಮಾಜದಲ್ಲಿನ ಮೌಢ್ಯತೆಯನ್ನು ತೊಳಗಿಸಿ ವೈಚಾರಿಕತೆಯನ್ನು ಮೂಡಿಸುವಲ್ಲಿ ಅಕ್ಕಮಹಾದೇವಿಯ ಪಾತ್ರವು ಮಹತ್ವವಾಗಿದೆ. ಆದರೆ ಅಕ್ಕನ ಈ ವಚನದಲ್ಲಿ ವೈಚಾರಿಕತೆಗಿಂತ ವಿಜ್ಞಾನವು ಹೆಚ್ಚಾಗಿ ಕಂಡು ಬರುವ ಒಂದು ವಚನ ಹೀಗಿದೆ.

"ಆಹಾರವ ಕಿರಿದು ಮಾಡಿರಣ್ಣಾ
ಆಹಾರವ ಕಿರಿದು ಮಾಡಿ
ಆಹಾರದಿಂದ ವ್ಯಾಧಿ ಹಬ್ಬಿ ಒಲಿವುದಯ್ಯ
ಆಹಾರದಿಂದ ನಿದ್ರೆ, ನಿದ್ರೆಯಿಂತಾಮಸ, ಅಜ್ಞಾನ, ಮೈಮರಹು
ಅಜ್ಞಾನದಿಂ ಕಾಮವಿಕಾರ ಹೆಚ್ಚಿ
ಕಾಯವಿಕಾರ, ಮನೋವಿಕಾರ, ಇಂದ್ರಿಯ ವಿಕಾರ
ಭಾವವಿಕಾರ, ವಾಯುವಿಕಾರವನುಂಟು ಮಾಡಿ
ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿ ಪೋಷಣ ಬೇಡ
ಅತಿ ಪೋಷಣೆ ಮೃತ್ಯುವೆಂದುದು
ಜಪ ತಪ ಧ್ಯಾನ ಧಾರಣ ಪೂಜೆಗೆ
ಸೂಕ್ಷ್ಮದಿಂ ತನು ಮಾತ್ರವಿದ್ದರೆ ಸಾಲದೆ?
ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು
ತನು ಪೋಷಣೆಯಿಂದ ತಾಮಸ ಹೆಚ್ಚಿ
ಅಜ್ಞಾನದಿಂ ವಿರಕ್ತಿ ಹಾನಿ
ಅರಿವು ನಷ್ಟ, ಪರವು ದೂರ, ನಿರಕೆ-ನಿಲುವಿಲ್ಲದ ಕಾರಣ
ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ
ಕೆಡಿಸದೆ ಉಳಿಸಿ ಕೊಳಿರಯ್ಯ"[೫೭]

ಈ ವಚನ ಅನೇಕ ವಿಧವಾದ ಜ್ಞಾನ, ಅರಿವು ತಿಳುವಳಿಕೆಯನ್ನು ಒಳಗೊಂಡಿದೆ. ಆಹಾರವ ಕಿರಿದು ಮಾಡಿರಣ್ಣಾ ಆಹಾರವ ಕಿರಿದು ಮಾಡಿ ಎನ್ನುವ ಸಾಲ ಇಂದಿನ ಆಧುನಿಕ ಕಾಲದಲ್ಲಿ ಡೈಟಿಂಗ್ ಹೆಸರಿನಲ್ಲಿ ಅನೇಕ ಪದಾರ್ಥಗಳನ್ನು ತೇಜಿಸಿರೆಂದು.

ಅಂದಿನ ೧೨ನೇ ಶತಮಾನದಲ್ಲಿಯೇ ಅಕ್ಕ ಮಹಾದೇವಿ ಹೇಳಿದ್ದಾಳೆ. ಆಹಾರ ಕಿರಿದು ಮಾಡಿ ಅಂದರೆ ಹೆಚ್ಚು ಆಹಾರ ಸೇವಿಸಬೇಡಿ ಇದರಿಂದ ರೋಗ ಹೆಚ್ಚಾಗಿ ಅವುಗಳು ಕೂಡ ದೊಡ್ಡದಾಗುತ್ತವೆ. ಆಹಾರದಿಂದ ನಿದ್ದೆ ಹೆಚ್ಚಾಗುತ್ತದೆ. ನಿದ್ದೆಯಿಂದ ಆಲಸ್ಯ ಹೆಚ್ಚಾಗುತ್ತದೆ ಆಲಸ್ಯದಿಂದ ಅಜ್ಞಾನ ಹೆಚ್ಚಾಗುತ್ತದೆ ಅಜ್ಞಾನದಿಂದ ಮೈಮರಹು, ಕಾಮದ ವಿಕಾರವು ಹೆಚ್ಚಾಗುತ್ತದೆ. ಇದರಿಂದ ದೇಹ ವಿಕಾರವಾಗದಂತೆ ಅಂದರೆ ದೇಹದಲ್ಲಿ ಅಲ್ಲಲ್ಲಿ ಕೊಬ್ಬಿನಾಂಶ ಹೆಚ್ಚಾಗುತ್ತದೆ ಇವುಗಳಲ್ಲದೇ ಮನೋವಿಕಾರ, ಇಂದ್ರಿಯ ವಿಕಾರ,

ಭಾವವಿಕಾರವಾಗುತ್ತವೆ. ಆದರಿಂದ ದೇಹಕ್ಕೆ ಅತಿಯಾದ ಪೋಷಣೆ ಬೇಡ ಈ ದೇಹದ ಅತಿ ಪೋಷಣೆಯಿಂದ ಮೃತ್ಯುವಿಗೆ ದಾರಿ ಮಾಡುತ್ತದೆ. ಜಪ, ತಪ, ಧ್ಯಾನ ಧಾರಣೆ ಪೂಜೆಗೆ ಸೂಕ್ಷ್ಮವಾದ ತನುವಿದ್ದರೆ ಸಾಕು ಎನ್ನುವಲ್ಲಿ ಯಾವುದೇ ಕಾರ್ಯ ಸಾಧನೆಗೆ ಸೂಕ್ಷ್ಮವಾದ ದೇಹ ಬೇಕು ದೇಹದ ಪೋಷಣೆಯಿಂದ ತಾಮಸ ಗುಣಮೂಡಿ ಅಜ್ಞಾನ ಹೆಚ್ಚಾಗುತ್ತದೆ ಅಜ್ಞಾನದಿಂದ ಆಸಕ್ತಿ ಕಡಿಮೆಯಾಗುತ್ತದೆ. ಈ ಎಲ್ಲ ಅರಿವು ನಷ್ಟವಾಗಿ ಪರರಿಗೆ ದೂರವಾಗುವ ಕಾರಣ ಈ ದೇಹವು ವಿಕಾರ ಕೆಡಿಸದರೆ ಸೂಕ್ಷ್ಮದೇಹವಾಗಿ, ಸದೃಢದೇಹವಾಗಿ ಉಳಿಸಿಕೊಳ್ಳಿರಿ ಎಂದು ಅಕ್ಕಮಹಾದೇವಿ ಹೇಳಿದ್ದಾಳೆ. ಇಲ್ಲಿ ಮನುಷ್ಯ ಹುಟ್ಟಿರುವುದೇ ತಿನ್ನುವುದಕ್ಕಾಗಿ ಎಂದು ಬದುಕುತ್ತಿರುವ ಜನರಿಗೆ ಎಚ್ಚರಿಕೆಯ ಮಾತು ಆಗಿದೆ. ಆಹಾರ ಮತ್ತ ದೇಹದ ಕ್ರಮದಲ್ಲಿನ ವೈಜ್ಞಾನಿಕತೆಯ ಇಲ್ಲಿಅಡಗಿದೆ.

ಹೀಗೆ ಅಕ್ಕ ಮಹಾದೇವಿ ಈ ವಚನದಲ್ಲಿ ಅನೇಕ ಅಂಶಗಳ ಅರಿವು ಮಾಡಿರುವುದಾಗಿದೆ. ಅದೇ ರೀತಿ ಅವರಿಗೆ ರಾಯಮ್ಮಳು ಡಾಂಭಿಕಭಕ್ತಿ ಮತ್ತು ಅಜ್ಞಾನಿಗಳ ಸಂಗವನ್ನು ಕುರಿತು ತನ್ನ ವಚನಗಳಲ್ಲಿ ಹೀಗೆ ಹೇಳಿದ್ದಾರೆ.

"ಅನುಭಾವಿ ಅನುಭಾವಿಗಳೆಂಬ ಅಜ್ಞಾನಿಗಳ
ಮುಖವ ನೋಡಲಾಗದು
ಕಂಗಳ ಮುಂದಣ ಕಾಯ, ಮನದ ಮುಂದಣ ಆಸೆ
ಅಂಗದಲ್ಲಿ ಅಹಂಕಾರಿವಾಗಿಪ್ಪವರ ಅನುಭಾವಗಳೆಂಬೆನೆ!
ಸುಳೆಯ ಮನೆಯಲ್ಲಿಪ ಗವುಡಿಯಂತೆ
ತಮ್ಮ ತಮ್ಮ ಹಿರಿಯತನದ ಮುಂದುಗೊಂಡು
ಕುರಿಗಳಂತೆ ತಿರುಗುವ ಜಡರುಗಳ
ಅನುಭಾವಗಳೆಂಬೆನೆ?
ಹತ್ತೈದ ಕೂಡಿಕೊಂಡು ಇಕ್ಕಿ ಎರೆವವರ ಮನೆಗೆ ಹೋಗಿ
ಭಕ್ತಿ ಭಿನ್ನಹವ ಕೈಕೊಂಡದೆ ಬೆಕ್ಕು ಹಾಲು ಕುಡಿದಂತೆ
ಅತ್ಯತಿಷ್ಠದ್ರೆ ಶಾಂಗುಲನೆಂದು ಘಟವ ಹೊರೆವ
ಮಿಟ್ಟೆಯ ಭಂಡರು
ಕಟ್ಟಿಗೆ ಮಣ್ಣು ಹಾಕಿ ಹೊಟ್ಟೆಯ ಹೊರೆವವನಂತೆ
ಇಷ್ಟಲಿಂಗವನರಿಯದೆ ಸತ್ಯರೆಂದು
ಘಟವ ಹೊರೆವ ಘಟಿಕರ್ಮಿಗಳ ಮುಖವ
ನೋಡಲಾಗದು ಅಮುಗೇಶ್ವರ ಲಿಂಗವೇ"[೫೮]

ಈ ವಚನದ ಮೂಲಕ ಅವರಿಗೆ ರಾಯಮ್ಮಳು ಅನುಭಾವಿಗಳೆಂದು ಓಡಾಡುವ ಅನುಭಾವಿ ಅಜ್ಞಾನಿಗಳ ಮುಖವ ನೋಡಲಾಗದು ನೇರವಾಗಿ ಹೇಳಿದ್ದಾಳೆ. ಅವರ ದೇಹ ಅವರ ಮನದೊಳಗಿನ ಆಸೆಗಳು ಅವರ ಅಂಗದಲ್ಲೂ ಅಹಂಕಾರವಿದ್ದಡೆ ಅವರನ್ನು ಕಂಡು ಅನುಭಾವಿಗಳೆಂದು ಹೇಳಲು ಸಾಧ್ಯವೇ ತಮ್ಮ ಹಿರಿತವನ್ನು ಹೇಳಿಕೊಂಡು ತಿರುಗುವ ಅಜ್ಞಾನಿಗಳ ಕುರಿತು ನುಡಿದಿದ್ದಾಳೆ.

ಕುರಿಗಳಂತೆ ತಿರುಗುವಕ ಹಿಂಬಾಲಕನನ್ನು ಹತ್ತೈದು ಮಂದಿಗಳೊಡನೆ ಕೂಡ ಪ್ರಸಾದಕ್ಕೆಂದು ಮನೆ ಮನೆಗೆ ಹೋಗಿ ಸ್ವೀಕರಿಸುವುದನ್ನು ಕಂಡು ಬೆಕ್ಕು ಬೇರೆಯವರ ಮನೆಗೆ ಹೋಗಿ ಹಾಲು ಕುಡಿದಂತೆ ಎಂದು

ಹೇಳುತ್ತಾಳೆ. ಇವರು ಇಷ್ಟಲಿಂಗದ ಮಹತ್ವವನ್ನು ಅರಿಯದ ಕ್ಷುದ್ರ ಜೀವಿಗಳೆಂದು ವ್ಯಂಗ್ಯವಾಗಿ ಕರೆಯುತ್ತಾಳೆ.

ಇನ್ನೊಂದು ಕಡೆ ಅಮ್ಮಗೆ ರಾಯಮ್ಮ ವೇಷಧಾರಿಗಳು ಇಷ್ಟಲಿಂಗದ ಸಂಬಂಧವನ್ನು ಬೆಳೆಸಲು ಸಾಧ್ಯವೇ ಎಂದು ತನ್ನ ಈ ವಚನದಲ್ಲ ಹೇಳಿದ್ದಾಳೆ. ಆವಚನವು ಹೀಗಿದೆ.

"ಕತ್ತೆಯಂತೆ ಬತ್ತಲೆಯಿದ್ದಡೇನು, ಇಷ್ಟಲಿಂಗಸಂಬಂಧಿಯಾಗಬಲ್ಲನೆ?
ಕಟ್ಟಿದ ಲಿಂಗವ ಕೈಯಲ್ಲಿ ಹಿಡಿದಡೇನು ನಿತ್ಯನಾಗಬಲ್ಲನೆ?
ಆನಿತ್ಯವ ಹೊತ್ತುಕೊಂಡು ತಿರುಗುವ
ಅಘೋರಿಗಳ ಕಂಡಡೆ ಮೂಗಿಯ ಕೋಗಿಲೆಯಂತೆ
ಮೋರೆಯ ತೋರೆನು ಅಮ್ಮುಗೇಶ್ವರ"[೫೯]

ಈ ವಚನದಲ್ಲಿ ಬತ್ತಲೆ ಇರುವ ವೇಷಧಾರಿಗಳನ್ನು ಕತ್ತೆಯೊಂದು ಕರೆಯುತ್ತಾಳೆ. ಅವರು ಇಷ್ಟಲಿಂಗದಲ್ಲಿ ಭಕ್ತಿ ಹುಟ್ಟುವುದೇ ಬಂದು ಕೇಳುತ್ತಾಳೆ. ಇಷ್ಟಲಿಂಗ ಕೈಯಲ್ಲಿ ಹಿಡಿದುಕೊಂಡು ಕುಳಿತರೇ ಅವನು ಭಕ್ತನಾಗುವನೇ? ಹೀಗೆ ಲಿಂಗವನ್ನು ಹಿಡಿದುಕೊಂಡು ತಿರುಗುವರ ವೇಷಧಾರಿಗಳ ಕಂಡರೆ ಮಾಗಿಯ ಕೋಗಿಲೆಯಂತೆ ಮುಖವನ್ನು ತೋರಬೇಕೆಂದು ಹೇಳುತ್ತಾಳೆ ಅಮ್ಮಗೆ ರಾಯಮ್ಮ ಅವಳ ಇನ್ನೊಂದು ಅನೇಕ ವಚನಗಳಲ್ಲಿ ಡಾಂಭಿಕತೆಯ ಭಕ್ತರ ಅನೇಕ ವೇಷಧಾರಿಗಳ ಕುರಿತು ಬರೆಯುತ್ತಾಳೆ. ಇವು ಹೀಗಿವೆ

"ಮುಂಡೆ ಬೋಳಾಗಿ ತುಂಡುಗಂಬಳಿ ಹೊದ್ದ ಬಳಿಕ
ಅಂದಚಂದಗಳೇಕೆ?
ಖಂಡಿತನೆ, ಕಂಡ ಕಂಡವರ ಮನೆ ಮುಚ್ಚುವಂತೆ
ಅಂದ ಚಂದಗಳೇಕೆ?
ಮಂಡೆ ಬೋಳಾದಡೆ ಮಹಾನುಭಾವಿಗಳು ಮೆಚ್ಚುವಂತೆ ಇರಬೇಕು
ಕಾಣಾ ಅಮುಗೇಶ್ವರಾ"[೬೦]

"ಮುಂಡೆಯ ಬೋಳಿಸಿಕೊಂಡು
ತುಂಡು ಗಂಬಳಿಯ ಹೋದ್ದವರ ಕಂಡಡೆ
ನಂಬಲಾರೆ ಹಚ್ಚಲಾರೆ
ಈ ವೇಷವ ನಾಚಿದೆ ಅಮ್ಮುಗೇಶ್ವರಾ"[೬೧]

ಹೀಗೆ ತಲೆ ಬೋಳಿಸಿಕೊಂಡು ತುಂಡು ಬಟ್ಟೆಯ ಸುತ್ತಿ ಹೊರಟರೆ ಚೆಂದವಾಗಿ ಕಾಣುವರೇನು? ಕಂಡ ಕಂಡವರ ಮನಮೆಚ್ಚುವಂತೆ ಅಂದಚಂದಗಳೇಕೆ? ಎಂದು ತೋರಪಡಿಕೆಯನ್ನು ವಿರೋಧಿಸುತ್ತಾಳೆ. ತೋರ್ಪಡಿಕೆಯ ಭಕ್ತಿ ವೇಷಗಳಿಂದ ಅನುಭಾವಿಗಳು ಎನಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಅವರನ್ನು ನಾನು ನಂಬಲಾರೆ ಮತ್ತು ಮೆಚ್ಚುವುದಿಲ್ಲವೆಂದು ಸ್ಪಷ್ಟವಾಗಿ ನೇರವಾಗಿ ಹೇಳಿದ್ದಾಳೆ.

ನಮ್ಮ ನಡೆ-ನುಡಿ ಶುದ್ಧವಿಲ್ಲದ ಆಚರಣೆಯಿಂದ ನಾವು ಯಾವ ಸ್ಥಿತಿಗೆ ತಲುಪಬಹುದು ಎಂಬ ಮಾತನ್ನು ಮೋಳಿಗೆ ಮಹಾದೇವಿ ತನ್ನ ವಚನದಲ್ಲಿ ತುಂಬಾ ಸುಂದರವಾಗಿ ಈ ವಚನದಲ್ಲಿ ಹೇಳಿದ್ದಾಳೆ. ಆ ವಚನ ಹೀಗಿದೆ

"ಊರ್ವಸಿ ಕರ್ಪೂರರವ ತಿಂದ್ದು
ಎಲ್ಲರಿಗೆ ಮುತ್ತು ಕೊಟ್ಟಡೆ ಮುಚ್ಚುವರಲ್ಲದೆ
ಹಂದಿ ಕರ್ಪೂರರದ ತಿಂದು
ಎಲ್ಲರಿಗೆ ಮುತ್ತು ಕೊಟ್ಟಡೆ ಮುಚ್ಚುವರೆ
ಹುಡುಹುಡು ಎಂದಟ್ಟುವರಲ್ಲದೆ?
ನಡೆ-ನುಡಿ ಶುದ್ಧವುಳ್ಳವರು ಪುರಾತನರ ವಚನವ ಓದಿದಡೆ
ಅನುಭಾವವ ಮಾಡಿದಡೆ ಮುಚ್ಚುವರಲ್ಲದೆ
ನಡೆ-ನುಡಿ ಶುದ್ಧವಿಲ್ಲದವರು ಪುರಾತನರ ಓದಿದಡೆ
ಅನುಭಾವವ ಮಾಡಿದಡೆ ಮುಚ್ಚುವರೆ?
ನಡೆ-ನುಡಿ ಶುದ್ಧವಿಲ್ಲದವರು ಪುರಾತನರ ವಚನ ಓದಿದಡೆ
ಆ ಹಂದಿಗಿಂತ ಕರಕಷ್ಟ
ಎನ್ನಯ್ಯ ಪ್ರಿಯ ಇಮ್ಮಡಿ ನಿ:ಕಳಂಕ ಮಲ್ಲಿಕಾರ್ಜುನಾ"[31]

ಮೋಳಿಗೆ ಮಹಾದೇವಿ ಈ ವಚನದ ಮೂಲಕ ನಡೆ, ನುಡಿ ಶುದ್ಧತೆಯನ್ನು ಕುರಿತು ಹೇಳಿದ್ದಾಳೆ. ನಮ್ಮ ಅರಿವು, ಜ್ಞಾನ, ಆಚಾರ, ವಿಚಾರಗಳು ನಮ್ಮ ಜೀವನದ ತುಂಬಾ ಪರಿಣಾಮ ಬೀಳುವಂತಹದು. ಏಕೆಂದರೆ ಹೇಳುವುದು ಆಚಾರ, ತಿನ್ನುವುದು ಬದನೆಕಾಯಿ ಎಂಬತಾಗ ಬಾರದು ನಡೆ ನುಡಿಗಳು. ನಮ್ಮಲ್ಲಿ ಅನೇಕ ಮೌಢ್ಯ ಆಚರಣೆ ಇರುವದು ಕಂಡು ಅವುಗಳ ಬಳಕೆ ಅಳವಡಿಕೆ ಜೀವನದಲ್ಲಿ ಹೆಚ್ಚಾಗಿತ್ತು. ದಿನನಿತ್ಯ ಮೌಢ್ಯ ಆಚರಣೆಗಳು ಅಳವಡಿಸಿಕೊಂಡು ಕಾಯಕ ದಾಸೋಹ ಎಂದು ಬೋಧಿಸಿದರೆ ಅದನ್ನು ಯಾರು ನಂಬುದಿಲ್ಲ ಮತ್ತು ಅವರನ್ನು ಯಾರು ಹತ್ತರವು ಸೇರಿಸುವದಿಲ್ಲ ಎನ್ನುವದನ್ನು ಮೋಳಿಗೆ ಮಹಾದೇವಿಯು ಹೇಳಿದ್ದಾಳೆ. ಅದಕ್ಕೆ ಇಲ್ಲಿ ಊರ್ವಸಿ ಮತ್ತು ಹಂದಿಗಳ ಉದಾಹರಣೆಯನ್ನು ನೀಡಿದ್ದಾರೆ. ಊರ್ವಸಿಯು ಕರ್ಪೂರರವ ತಿಂದು ಎಲ್ಲರಿಗೆ ಮುತ್ತು ಕೊಟ್ಟರೆ ಇಷ್ಟಪಡುವರು. ಊರ್ವಸಿಯಂತೆ ಹಂದಿಯ ಕರ್ಪೂರರವು ತಿಂದು ಎಲ್ಲರಿಗೂ ಮುತ್ತು ಕೊಟ್ಟರೆ ಮೆಚ್ಚುವರೇ? ಎಂದು ಪ್ರಶ್ನಿಸುತ್ತಾಳೆ.

ಹಂದಿಯು ಹತ್ತಿರ ಬರುತ್ತಿದಂತೆ ಹುಡು ಹುಡು ಎಂದು ದೂರ ಸರಿಸುವಂಲ್ಲೆ. ನಡೆ-ನುಡಿ ಶುದ್ಧವಿದ್ದು ಪುರಾತನರ ವಚನ ಓದಿದರೆ ಎಲ್ಲರು ಮೆಚ್ಚುವರು. ನಡೆ-ನುಡಿ ಶುದ್ಧವಿದ್ದಲೇ ಪುರಾತನರ ವಚನ ಓದಿದರೆ ಹಂದಿಯ ಹಾಗೆ ಹುಡು ಹುಡು ಎನ್ನುವರ ಮತ್ತು ಹಂದಿಗಿಂತ ಬಹುಕಷ್ಟದ ಜೀವನ ಜೀವಿಸಬೇಕಾಗುತ್ತದೆ ಎಂದು ಮೋಳಿಗೆ ಮಹಾದೇವಿ ಎಚ್ಚರಿಸುತ್ತಾಳೆ.

ಹೀಗೆ ನಡೆ ನುಡಿ ಶುದ್ಧತೆ ಕುರಿತು ಹೇಳಿದ ಮೋಳಿಗೆ ಮಹಾದೇವಿ ಅರಿವನ್ನು ಕುರಿತು ಮಾಡುವ ಆಚರಣೆಯ ಕುರಿತು ಹೀಗೆ ಹೇಳುತ್ತಾಳೆ ಆ ವಚನ ಹೀಗಿದೆ.

"ಪೂಜಿಸುವವರ ಕಂಡವರ ಕಂಡು
ಆ ಗುಣವ ತಾ ಕೈಕೊಂಡು ಪೂಜಿಸದೆ
ವಾಗ್ಬ್ರಹ್ಮವ ನುಡಿವವರ ಕಂಡು
ಶೇಷವನ್ನು ಈಚೆಯಲ್ಲಿ ನುಡಿಯದೆ
ತನ್ನ ಸ್ವಯಾನುಭಾವ ಪೂಜೆ, ತನ್ನ ಸ್ವಯಂ ಸಿದ್ಧವಾದನುಡಿ
ಇಂತೀ ಉಭಯಸ್ಥಲಗೂಡಿ
ಕ್ಷೀರ ನೀರಿನಂತೆ ಹೊರೆಯಿಲ್ಲದೆ
ಎನ್ನಯ್ಯ ಪ್ರಿಯ ಇಮ್ಮ ನಿ:ಕಳಂಕ ಮಲ್ಲಿಕಾರ್ಜುನನಲ್ಲಿ"[೬೩]

ಈ ವಚನದ ಮೂಲಕ ತಾವು ಮಾಡುವ ಆಚರಣೆಯ ಕುರಿತು ಅವರಿಗೆ ಅರಿವಿರಬೇಕು. ಯಾರೋ ಪೂಜಿಸುವವರ ಕಂಡು ತಾವು ಪೂಜಿಸುವುದು ಪೂಜೆಯನ್ನು ಮಾಡುವುದಾಗಿ ಹೇಳಿ ಕೈಗೊಳ್ಳದೇ ಕೇವಲ ತಾನು ಹಾಗೇ ಮಾಡುವೇ, ಹೀಗೆ ಮಾಡುವೇ, ಅಥವಾ ಮಾಡಿದೆ ಎಂದು ಬೀಗುವವರಅಂತ್ಯ ಅವನತಿ ಹೊರ ಬೀಳದೇ ಇರುವುದೇ? ತಾವು ಮಾಡು ಕೈಕರ್ಯಗಳು ಹೊರ ಬೀಳದೆ ಸ್ವತ್ತನ್ನು ಸ್ವ-ಅನುಭವದಿಂದ ಪೂಜೆಯನ್ನು ಸ್ವಯಂ ಸಿದ್ಧತೆಯನ್ನು ಮಾಡಿಕೊಳ್ಳುವ ಪೂಜೆ ಸ್ವ-ಅನುಭವದೀದ ಪೂಜೆಯನ್ನು ಸ್ವಯಂ ಸಿದ್ಧತೆಯನ್ನು ಮಾಡಿಕೊಳ್ಳುವ ಪೂಜೆಯ ಫಲಿತವಾಗುವದು ಮತ್ತು ಅಪರ ಭಕ್ತಿ ಆಚರಣೆಗಳು ಹಾಲು ಮತ್ತು ನೀರಿನಂತೆ ಒಂದರೊಳಗೊಂದು ಕೂಡಿಕೊಳ್ಳುವುದು ಎಂದು ಹೇಳಿದ್ದಾಳೆ ಮೋಳಿಗೆ ಮಹಾದೇವಿ.

ಹೀಗೆ ಅನೇಕ ಶರಣೆಯರ ವಚನಗಳಲ್ಲಿ ಮೌಢ್ಯತೆಯ ನಿರಾಕರಣೆ ಮತ್ತು ಡಾಂಭಿಕತೆ ಕುರಿತು ನೇರ ನುಡಿಗಳೊಂದಿಗೆ, ವ್ಯಂಗ್ಯನುಡಿಗಳೊಂದಿಗೆ ಕಠೋರ ಸತ್ಯವನ್ನು ಹೇಳುವ ಮೂಲಕ ಸಮಾಜದ ಸುಧಾರಣೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಈ ಸಮಾಜದಲ್ಲಿನ ಮೌಢ್ಯತೆಯನ್ನು ತೊಳಗಿಸಲು ಆಗಿನ ೧೨ನೇ ಶತಮಾನಗಳು ಇಂತಹ ವಚನಗಳ ಅವಶ್ಯಕತೆಗಳ ಇತ್ತು. ಏಕೆಂದರೆ ಸಮಾಜ ಸುಧಾರಣೆಯ ಪುರುಷನಿಗಿಂತಲೂ ಮಹಿಳೆಯ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಅಂತಹ ವೈಚಾರಿಕತೆ ನಾವು ಆಗಿನ ಶರಣೆಯದಲ್ಲಿ ಕಾಣುವುದು ಮತ್ತು ಅವು ಇಂದಿಗೂ ಪ್ರಸ್ತುತವೆನಿಸಿಕೊಂಡಿದೆ. ಹಾಗಾಗಿಯೇ ಇಂದಿನ ಯುವಪೀಳಿಗೆ ಅವರ ವಚನಗಳು ಆದರ್ಶಪ್ರಾಯವಾಗಿವೆ ಎನ್ನುವುದರಲ್ಲಿ ಯಾವ ಸಂಶಯವು ಇಲ್ಲ.

೩.೬) ಜಾತಿ ಸೂತಕಗಳನ್ನು ಜಾಲಾಡಿದ ವಚನ ಕಾರ್ತೆಯರು :

ಭಾರತದಲ್ಲಿ ಜಾತಿ ಪದ್ಧತಿ ಮೊದಲಿನಿಂದಲೂ ಕಾಣುತ್ತೇವೆ. ನಮ್ಮಲ್ಲಿ ಚರ್ತುವರ್ಣ ಪದ್ಧತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂಬ ಭಿನ್ನ ವ್ಯವಸ್ಥೆಗಳೊಂದಿಗೆ ಹುಟ್ಟಿರುವುದು ಕಾಣುತ್ತೇವೆ. ನಮಗೆ ವರ್ಗ, (ಮೇಲ್ವರ್ಗ, ಕೆಳವರ್ಗ) ವರ್ಣ (ಚತುವರ್ಣಗಳು) ಧರ್ಮ ಮುಂತಾದ ಪದಗಳು ಹೊಸದೇನು ಅಲ್ಲ. ಆಧುನಿಕತೆ, ವೈಚಾರಿಕತೆ ಬೆಳೆದಂತೆ ಇವುಗಳು ಕಡಿಮೆಯಾಗುತ್ತೆವೆ. ಎಂಬಂತೆ ಒಂದೆಡೆ ಕಂಡರೇ ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಜಾತಿ ಎಂಬುದು ಪರಮಾತ್ಮನ ಒಂದು ಸೃಷ್ಟಿ.

ಪ್ರತಿಯೊಂದು ಪ್ರಾಣಿ ಪಕ್ಷಿಗಳು ಬೇರೆ ಬೇರೆ ಜಾತಿಗೆ ಸೇರಿದಂತವು. ಹೀಗಾಗಿ ಮಾನವ ಕುಲದಲ್ಲಿ ಹುಟ್ಟಿದ ಚತುರ್ವರ್ಣದ ಈ ನಾಲ್ಕು ವ್ಯವಸ್ಥೆ ಆಧುನಿಕರು ಅಲ್ಲಗಳೆಯುತ್ತಿದ್ದಾರೆ. ಇದು ಒಂದು ರೀತಿ ಸರಿಯೇ ಆದರೆ ಈ ಜಾತಿ ಎಂಬ ಪದಕ್ಕೆ ಬೇರೆಯೇ ಅರ್ಥವಿದೆ.

೧೨ನೇ ಶತಮಾನದ ವಚನಕಾರರು ಜಾತಿಗಳಿಗೆ ವಿರೋಧವಾಗಿದ್ದರು. ಹಾಗಾಗಿಯೇ ಅನುಭವಮಂಟಪದಲ್ಲಿ ಎಲ್ಲಾ ಜಾತಿಯರಿಗೂ ಗೌರವವಿತ್ತು. ಅವರು ಕಾಯಕವನ್ನು ಕೈಲಾಸ ಎಂದು ಭಾವಿಸಿದವರು. ಅವರು ಕಾಯಕ ಕೀಳಾಗಿ ಕಾಣಲಿಲ್ಲ. ಅದಕ್ಕೂ ಮುಂಚೆ ಕಾಯಕದ ಆಧಾರದ ಮೇಲ ಕೀಳೂ ಜಾತಿ ಎಂದು ಭೇದವನ್ನು ಮಾಡಿ ಅವರನ್ನು ಅಗೌರವದಿಂದ ಕಾಣಲಾಗುತ್ತದೆ. ಶರಣರು ಜಾತಿಗೆ ಪ್ರಾಮುಖ್ಯತೆ ನೀಡದೆ ಮಾನವೀಯತೆಗೆ, ಕಾಯಕ ನಿಷ್ಠೆಗೆ ಗೌರವ ನೀಡಿದರು. ಹಾಗಾಗಿಯೇ ಅವರು ಜಾತಿಯ ವಿರೋಧಿಸಿ ಬರೆದ ಅನೇಕ ವಚನಗಳು ನಮಗೆ ದೊರೆಯುತ್ತವೆ. ಅಂತಹುದೇ ಪ್ರಶ್ನೆಗಳನ್ನು ಶರಣೆಯರು ಕೇಳಿದ್ದಾರೆ. ಶರಣೆ ಅಕ್ಕಮ್ಮ ಜಾತಿ ಕುಲವನ್ನು ವಿರೋಧಿಸಿ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಮೌಢ್ಯತೆಯನ್ನು ಅರ್ಥಹೀನ ಸಂಪ್ರದಾಯವನ್ನು ಕುರಿತು ಒಂದು ವಚನ ಹೀಗಿದೆ.

"ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲಾ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು? ಅರಿವೇ ಮುಖ್ಯವಯ್ಯ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ"೬೪

ಈ ವಚನ ಸಮಾಜದಲ್ಲಿ ಇರುವ ಜಾತಿ ಮೌಢ್ಯವನ್ನು ಉಗ್ರವಾಗಿ ತಿರಸ್ಕರಿಸಿ ಖಂಡಿಸಿರುವುದು ಕಾಣಸಿಗುತ್ತದೆ. ಇಲ್ಲಿ ಯಾರು ಯಾರು ಸಂತಾನವೆಂದು ಹೇಳುತ್ತಾ ಸಮಾಜ ಸುಧಾರಕಿಯಂತೆ ಕಂಡು ಬರುತ್ತಾಳೆ. ಇಲ್ಲಿ ಯಾರ ಯಾರ ಸಂತಾನವಾದಡೆ ಏನು? ಅವರ ಅರಿವು ಜ್ಞಾನ ನಮಗೆ ಆಗಬೇಕೆ ಹೊರತು ಕತ್ತೆಯ ಮಕ್ಕಳು, ಮುಂಡೆಯ ಮಕ್ಕಳು ಎನ್ನುವುದಲ್ಲ. ಈ ವಚನದಲ್ಲಿ ಜಾತಿ ಕುಲದ ಜೊತೆಗೆ ಲಿಂಗ, ಭೇದ, ವರ್ಣ ವರ್ಗಗಳ ಬೇಧವನ್ನು ವಿರೋಧಿಸಿದ್ದಾಳೆ. ಈ ರೀತಿಯಾಗಿ ಕಟುವಾದ ಸತ್ಯ ಸಾರಿದ್ದಾಳೆ. ಮಹಿಳಾ ಜಾಗೃತಿ ಮತ್ತು ಧಾರ್ಮಿಕ, ಸಾಮಾಜಿಕ, ಏಳಿಗೆಯ ಕಡೆಗೆ ಶ್ರಮಿಸಿದ್ದಾಳೆ. ಹೀಗೆ ಅಕ್ಕಮ್ಮ ತಮ್ಮ ವಚನದಲ್ಲಿ ಬತ್ತಲಾಗುವ-ಬೋಳಾಗುವ ಮೂಢ ಜನರನ್ನು ವಿಡಂಬಿಸಿ ಅರಿವು ನೀಡಿದ್ದರೆ ಈ ಜಾತಿ ಕುಲವನ್ನು ಹೆಸರಿನಲ್ಲಿ ಶೋಷಣೆ ಅನುಭವಿಸಿದ ನೋವು, ವೇದನೆ ಅಭಿವ್ಯಕ್ತಿ ಈ ಮೇಲ್ವರ್ಗದ ವಚನಕಾರ್ತಿಗಿಂತಲೂ ಕೆಳವರ್ಗದ ವಚನಕಾರ್ತಿಯರಲ್ಲಿ ಹೆಚ್ಚು ತೀವ್ರವಾಗಿ ಕಂಡು ಬರುತ್ತದೆ. ಏಕೆಂದರೆ ಜಾತಿ ಕುಲದ ಹೆಸರಿನಲ್ಲಿ ಮೇಲ್ವರ್ಗದವರಿಗಿಂತ ಕೆಳವರ್ಗದವರು ಹೆಚ್ಚು ಅನುಭವಿಸಿರುತ್ತಾರೆ. ಮತ್ತು ಅವರ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವನ್ನು ಬೀರಿರುತ್ತವೆ.

ಈ ಕುಲದ ವಿಷಯ ಕುರಿತು ತೀವ್ರವಾಗ ವಿರೋಧಿಸಿ ಬರೆದ ವಚನಕಾರ್ತಿಯರಲ್ಲಿ ಕೆಳವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಲ್ಲಿ ಉರಿಲಿಂಗ ಪೆದ್ದಿಗಳು ಪುಣ್ಯಸ್ತ್ರೀ ಕಾಳವ್ವೆಯು ಒಬ್ಬಳು.

"ಕುರಿ ಕೋಳಿ ಕಿರಿ ಮೀನು ತಿಂಬವರಿಗೆಲ್ಲಾ ಕುಲಜ ಕುಲಜರೆಂಬದೆಂಬರು

ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು

ಅವರೆಂತು ಕೀಳು ಜಾತಿಯಾದರೂ, ಜಾತಿಗಳು ನೀವೇಕೆ ಕೀಳಾಗಿರೋ?

ಮಾದಿಗರುಂಡದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಗಿ

....

ಆದಂತೆಂದಡೆ.

ಸಿದ್ದಲಿಕೆಯಾಯಿತು ಸಗ್ಗಳೆಯಾಯಿತು

ಸಿದ್ದಲಿಕೆಯ ತುಪ್ಪವುನ್ನು ಸಗ್ಗಳೆಯು ನೀರನ್ನು

ಶುದ್ಧವೆಂದು ಕುಡಿದು ಬುದ್ಧಿಗೇಡಿ ವಿಪ್ರರಿಗೆ

ನಾಯಕ, ನರಕ ತಪ್ಪದಯ್ಯ

ಉರಿಲಿಂಗ ಪೆದ್ದಿಗಳರಸು ಬಲ್ಲಿನವ್ವಾ?"[೬೩]

ಈ ವಚನದಲ್ಲಿ ಉತ್ತಮರು ಸಾಮಾಜಿಕ ನೆಲೆಯಲ್ಲಿ ಗೌರವಾದರಗಳಿಗೆ ಸಾಮಾಜಿಕವಾಗಿ ಮಾನ್ಯರಲ್ಲದ ಕೆಳವರ್ಗದವರಿಗಿಂತಲೂ ಅವರು ಹೇಗೆ ಶ್ರೇಷ್ಠರು? ಎಂದು ಪ್ರಶ್ನಿಸುವಳು. ಬಹಳ ಮುಖ್ಯವೆನಿಸುವ ಸಾಮಾಜಿಕ ಅಸಮಾನತೆಯನ್ನು ಈ ಪ್ರಶ್ನಾವಳಿಯಲ್ಲಿ ಎತ್ತಿದ್ದಾಳೆ. ಕುರಿ, ಕೋಳಿ, ಕಿರು ಮೀನು ತಿನ್ನದವಳು ಕುಲಜರು; ಸತ್ತ ಹಸುವಿನ ಮಾಂಸ ತಿನ್ನುವ ಮಾದಿಗರು ಕೀಳು ಜಾತಿ ಮಾಂಸ ತಿನ್ನುವ ಇಬ್ಬರು ಮನುಷ್ಯರೇ. ಆದರೆ ಅವರಲ್ಲಿ ಒಬ್ಬ ಕುಲಜ ಇನ್ನೊಬ್ಬ ಕೀಳೂ ಜಾತಿ ಹೇಗಾದ? ಎನ್ನುವ ಪ್ರಶ್ನೆ ತುಂಬಾ ಮಾರ್ಮಿಕವಾಗಿ ಕೇಳಿದ್ದಾಳೆ.

ಕುಲಜರೆನಿಸಿಕೊಂಡವರು ಕೀಳು ಜಾತಿಯವರು ದನದ ಮಾಂಸ ತಿಂದು ಎಂಜಲನ್ನು ಆ ದನದ ಹನಿಯ ಚರ್ಮವನ್ನು ಒಣಗಿಸಿ, ಸಿದ್ಧಲಿಕೆ, ಬುದ್ಧಲಿಕೆ, ಸಗ್ಗುಳೆಗಳನ್ನು ಮಾಡುವರು. ಉತ್ತಮರು ಅದನ್ನು ಎಣ್ಣೆ, ತುಪ್ಪ, ನೀರು ತುಂಬಿಡಲು ಬಳಸುವರು. ಕೀಳು ಜಾತಿಯವರು ತಿಂದು ಎಸೆದ ದನದ ಚರ್ಮದಿಂದ ಸಿದ್ಧಪಡಿಸಿದ ವಸ್ತುಗಳನ್ನು ಉತ್ತಮರ ನಿತ್ಯ ಬಳಕೆಗೆ ಯೋಗ್ಯವಾದವು, ಶುದ್ಧವಾದವು, ಹೀಗಾಗಿ ಉತ್ತಮರು ಕೀಳು ಜಾತಿಯವರಿಗಿಂತ ಹೇಗೆ ಮೇಲಾದರು? ಎನ್ನುವ ಪ್ರಶ್ನೆಗೆ ಉತ್ತರಿಸುವುದು ಕೀಳು ಜಾತಿಯವರಿಗಿಂತ ಹೇಗೆ ಮೇಲಾದರು? ಎನ್ನುವ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಜಾತಿಯಲ್ಲಿ ಉತ್ತಮರಲ್ಲಿದ್ದವರ ಎಂಜಲನ್ನು ಶುದ್ಧವೆಂದು ವೈಭವಿಕರಿಸುವವರಿಗೆ ಅವರಿಗೆ ನಾಯಕ ನರಕ ತಪ್ಪದು ಎಂದು ಕಾಳವ್ವೆ ಕೆಲಜನರ ವಿರುದ್ಧ ಮಾತನಾಡುವರಿಗೆ ನರಕ ತಪ್ಪದು ಎಂದು ಎಚ್ಚರಿಸುತ್ತಾಳೆ. ಕುಲದ ಬಗ್ಗೆ ಅಭಿಮಾನ ತೋರಿಸುತ್ತಾ ನೇರವಾಗಿ ವೈದಿಕರನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ ಇನ್ನೊಬ್ಬ ಶರಣೆ ಬೊಂತಾದೇವಿ ನೆಲ, ಜಲ, ಗಾಳಿ ಎಲ್ಲರಿಗೂ ಒಂದೇ ರೀತಿಯದು. ಈ ಬಯಲು ಕುಲ, ಜಾತಿಗಳಿಗೆ ಸೀಮಿತಗೊಳಿಸುವುದು ಸೇರಿಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾಳೆ? ಆ ವಚನ ಹೀಗಿದೆ.

"ಊರ ಒಳಗಣ ಬಯಲು
ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು
ಊರ ಹೊರಗೆ ಹೊಲೆ ಬಯಲೆಂದುಂಟೆ
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬೀಡಾಡಿ"[೬೬]

ಈ ವಚನದಲ್ಲಿ ಬಯಲು ಎಂಬ ಪ್ರದೇಶ ಸ್ಥಳ ಎಂಬ ಅರ್ಥಗಳೊಂದಿಗೆ ನೋಡಿದಾಗ ಊರು ಆ ಇರುವ ಸ್ಥಳಕ್ಕೂ ಊರ ಹೊರಗಡೆ ಇರುವ ಸ್ಥಳಕ್ಕೂ ಅಲ್ಲಿರುವ ವ್ಯತ್ಯಾಸವು ಇಲ್ಲ. ಊರ ಒಳಗೆ ಬ್ರಾಹ್ಮಣರ ಪ್ರವೇಶಕ್ಕೂ ಊರಾಚೆ ಇರುವ ಹೊಲೆಯರ ಪ್ರದೇಶಕ್ಕೂ ವ್ಯತ್ಯಾಸ ಉಂಟೆ. ಹಾಗೆ ನೋಡಿದರೆ ಹೀಗೆ ಬೇರೆ ಬೇರೆ ಪ್ರದೇಶಗಳ ಮಾಡಿಕೊಂಡಿರುವರು ನಮ್ಮ ಒಳಗಿನ ಮಾನಸಿಕ ಸ್ಥಿತಿ ಭಿನ್ನವಾದ ಸ್ಥಿತಿಯಿಂದ ಹೊರಬಂದು ನೋಡಿದಾಗ ಇಲ್ಲಿ ಯಾವ ಜಾತಿ, ಕುಲ, ಎನ್ನುವುದಿಲ್ಲ ಎಂದು ತಿಳಿದು ಬರುತ್ತದೆ. ಎನ್ನುವ ನನ್ನ ಈ ವಚನದ ಮೂಲಕ ಸಾರಿದ್ದಾಳೆ.

ಆಯ್ದಕ್ಕಿ ಲಕ್ಕಮ್ಮನಂತೂ ಕುಟುಂಬ ಒಡ್ಡಿದ ನಿರ್ಭಂದನೆಗಳನ್ನು ಕುರಿತು ಪ್ರಶ್ನಿಸುತ್ತಾಳೆ ಆವಚನ ಹೀಗಿದೆ.

"ಆವ ಬೀಜವು ಬೀಳುವಲ್ಲಿ
ಮೊಳೆ ಮುಖ ಹಿಂಚು ಮುಂಚುಂಟೆ
ನೀ ಮರೆಯಲ್ಲಿ ನಾನರಿಯದಲ್ಲಿ ಬೇರೊಂದೊಡಲುಂಟೆ?
ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.
ಕೂಟಕ್ಕೆ ಸತಿ ಪತಿ ಎಂಬ ನಾವವಲ್ಲದೆ
ಅರಿವಿಂಗೆ ಬೇರೊಂದೊಡಲುಂಟೆ
ಬೇರೊಂದಡಿಯಿಡದಿರು
ಮಾರಯ್ಯ ಪ್ರಿಯ ಅಮರೇಶ್ವರಲಿಂಗವನರಿಯಬಲ್ಲಡೆ"[೬೭]

ಈ ವಚನ ತುಂಬಾ ಸ್ಪಷ್ಟವಾಗಿ ಗಂಡ–ಹೆಂಡತಿಯರ ದಾಂಪತ್ಯ ಸಂಬಂಧದ ವ್ಯಾಪ್ತಿಯನ್ನು ಕುರಿತು ಮಾತನಾಡುತ್ತದೆ. ಬೀಜ ಮೊಳೆಯಬೇಕಾದರೆ ಬೀಜದ ಮೇಲ್ಭಾಗ ಮೊದಲು ಬೀಜದ ಕೆಳಭಾಗ ಹಿಂದೆ ಇರುತ್ತದೆ. ಹೀಗಿರುವುದು ನಿಸರ್ಗದ ನಿಯಮ, ಪುರುಷ–ಸ್ತ್ರೀ ಪರಸ್ಪರ ಮಿಲನದಲ್ಲಿ ಸಂತಾನ ಅಂಕುರಿಸುತ್ತದೆ. ಪುರುಷನಿಂದ ಪಡೆದು ಸ್ತ್ರೀ ಗರ್ಭ ಧರಿಸುತ್ತಾಳೆ. ಇದೇ ಗರ್ಭ ಬೆಳೆದು ಮಗುವಾಗಿ ಭೂಮಿಗೆ ಬರುತ್ತದೆ ಇದೊಂದು ನೈಸರ್ಗಿಕ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಸ್ತ್ರೀ–ಪುರುಷರಿಬರಿಗೂ ಪ್ರಕೃತಿ ಸಹಜ ಮತ್ತು ಸಮಾನ. ಇದರಲ್ಲಿ ಯಾರು ಮೇಲಲ್ಲ, ಯಾರು ಕೀಳಲ್ಲ. ಯಾರ ಪಾತ್ರ ಕಡಿಮೆ , ಹೆಚ್ಚು ಇಲ್ಲ. ಸಂತಾನ ಸೃಷ್ಠಿಯಲ್ಲಿ ಪುರುಷನು ಮಾತ್ರ ಗೌಣ ಎಂದಾಗಲಿ ಅಥವಾ ಅದು ಸ್ತ್ರೀಯರ ಕರ್ಮ

ಎಂಬಾಗಲಿ ಇಲ್ಲ. ಸಂತಾನಕ್ಕಾಗಿ ಅವರು ಸತಿಪತಿಗಳೆಂಬ ಅಭಿದಾನ ಕರ್ತವ್ಯ ಪಾಲಿಸುತ್ತಿರಬೇಕು. ಹೊರತು ಪ್ರತಿ ಪುರುಷ ಶ್ರೇಷ್ಠ ಅವನು ಮನಬಂದಂತೆ ನಡೆದುಕೊಳ್ಳಬಹುದು ಎಂದು ಪುರುಷ ಎಂಬ ಕಾರಣಕ್ಕಾಗಿಯೇ ಅವನು ಸ್ತ್ರೀಯನ್ನು ಯಾವುದೇ ರೀತಿಯಿಂದಲೂ ಶೋಷಿಸಲಾಗದು ಹೀಗೆ ಶೋಷಿಸುವುದನ್ನು ಸ್ತ್ರೀಯರು ಒಪ್ಪಿಕೊಳ್ಳಲಾರರು ಎಂದು ಆಯ್ದಕ್ಕಿ ಲಕ್ಕಮ್ಮ ಪ್ರತಿಭಟಿಸುತ್ತಾಳೆ.

ಮಾನವ ಸಂಬಂಧ ತುಂಬಾ ಸೂಕ್ಷ್ಮವಾದದ್ದು. ಈ ಸಂಬಂಧ ಜೋಡಣೆಗಳು ಅಷ್ಟೇ ವಿಶಿಷ್ಟವಾದದ್ದು ಈ ಜೋಡಣೆಯ ಕುರಿತು ಸಮಾಜ ಮಾಡಿರುವ ನಿಯಮವನ್ನು ಕುರಿತು ಕೇಳಿದ ಪ್ರಶ್ನೆ ತುಂಬಾ ವಿಚಾರ್ಹವಾಗಿದೆ. ಆ ವಚನವು ಹೀಗಿದೆ.

"ತಂದೆಯು ಒಂದಾಗಿ ಬಂದ
ಸಹೋದರ ಗಂಡೆಲ್ಲ ತಂದೆಯಾದ ಕಾರಣ
ಆ ತಂದೆಯ ಒಡಹುಟ್ಟಿದ ಹೆಣ್ಣೆಲ್ಲ ತನಗೆ ತಾಯಲ್ಲವೆ?
ಆಕೆಯ ನತ್ತೆಯೆಂಬ ಜಗವ ತೆತ್ತು ಮತ್ತರ ನಾರರಿಯವಯ್ಯಾ
ಮತ್ತೆ, ತಾವು ಬಳಸುವುದಕ್ಕೆ ಗೊತ್ತಿಲ್ಲವೆಂದಾಕೆಯ ಮಗಳನ್ನು
ಸತಿಯೆನ ಮಾಡಿಕೊಳ್ಳಬಹುದೆ?
ಹೆತ್ತ ತಾಯಿ ಮಗಳ ಮಗಳು ಒಡಹುಟ್ಟಿದವಳಲ್ಲವೆ?
ಸೊಸೆ ಮಾವನೆಂದು ಸತಿಯಂ ಮಾಡಿಕೊಂಬುದು ನೋಡಾ
ಸೊಸೆಗೂ ಮಾವಂಗೂ ಸಂಸರ್ಗ ನಿಲ್ಲುವುದೇ?
ಸತ್ಯಕ್ಕೆ ಸಮಯವಿಲ್ಲ, ಭಕ್ತಿಗೆ ಇದರಿಲ್ಲವೆಂದರಿದು ಮತ್ತೆ
ಇದು ಆಚಾರಕ್ಕೆ ನಿಶ್ಚಯ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ
ಕೊಳುಕೊಡೆಯೆಂಬ ಸೂತಕ ಸದಾಚಾರದಲ್ಲಿ ಅಡಗಿತು"[೬೮]

ಈ ವಚನ ತುಂಬಾ ವಿಶಿಷ್ಟವಾದ ವಚನಗಳಲ್ಲಿ ಒಂದು. ಅಕ್ಕಮ್ಮ ಇಲ್ಲಿ ಸಂಬಂಧಗಳು ಜೋಡಿಸಿದ ವಿಧಾನವನ್ನು ಕೇಳಿದ ಒಂದು ಕ್ಷಣ ಎಲ್ಲಿಯೂ ಮೌನವಾಗಿಸುವಂತಹದು ಚಿಂತನೆಯಲ್ಲಿ ತೊಡಗಿಸುವಂತಹದು.

ತಂದೆ ಜೊತೆ ಹುಟ್ಟಿದ ಒಡ ಹುಟ್ಟಿದ ಸಹೋದರರು ತಂದೆಗಳಾದರೆ ಸಹೋದರಿಯರು ತಾಯಿ ಯಾಕೆ ಆಗುವುದಿಲ್ಲ. ಅವಳನ್ನು ಅತ್ತೆ ಎಂದು ಯಾಕೆ ಕರೆಯುತ್ತಾರೆ. ಉತ್ತರನಾ ಅರಿಯೇನು? ಅವಳು ಹೆತ್ತಿರುವ ಮಗಳನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳಬಹುದೇ? ತಾ ಹೆತ್ತ ತಾಯಿ-ಮಗಳು ಒಡುಹುಟ್ಟಿದವಳು ಆಗುವುದಿಲ್ಲವೆ? ಅವಳನ್ನು ಇಲ್ಲಿ ಮೊಮ್ಮಗಳನ್ನು ಸೊಸೆಯನ್ನಾಗಿ ಸಂಸರ್ಗ ನಿಲ್ಲುವದೇ? ಇದು ಸಮರ್ಪಕವೆನಿಸುವದೇ ಆದರೆ ಈ ಜಗದಲ್ಲಿ ಸತ್ಯ ಎಲ್ಲರಿಗೂ ಸಮಯವಲ್ಲ.

ಈ ಭಕ್ತಿಗೆ ಇದಿರಲ್ಲವೆಂದಿರದು ಮತ್ತೆ ಜಗದಲ್ಲಿ ಹೊತ್ತು ಹೊರಬೇಕು? ಇದು ಆಚಾರಕ್ಕೆ ನಿಶ್ಚಯ ಓಗೆ ಮಗಳನ್ನು ಸಂಬಂಧವು ಭಿನ್ನವಾಗಿ ಹೋಗುವ ಕರೆಯುವ ಸಮಾಜದ ಪರಿಯನ್ನು ವಿಚಿತ್ರವನ್ನು

ಪ್ರಶ್ನಿಸುತ್ತಾಳೆ. ಇದು ಹೀಗಾಗಬೇಕೆಂದು ಕೊಳು ಕೊಡೆಯೆಂಬ ಸೂತಕಕ್ಕೆ ಮಾಡಿರುವುದು ಸಂಬಂಧವಾಗಿದೆ ಎಂದು ಹೇಳುತ್ತಾಳೆ.

ವಚನಕಾರ್ತಿಯರು ವಚನಗಳಲ್ಲಿ ಓದಿದಾಗ ಎಷ್ಟು ವೈಚಾರಿಕವಾಗಿ ಚಿಂತನೆ ಮಾಡುತ್ತಿದ್ದರು ಎಂದು ತಿಳಿದು ಬರುತ್ತದೆ. ಅವರು ಜನಪದರಂತೆ ಅತಿ ಹತ್ತಿರದ ಮತ್ತು ದಿನನಿತ್ಯ ಕಂಡು ಬರುವ ಸನ್ನಿವೇಶಗಳನ್ನು ಕಂಡು ಅವುಗಳನ್ನು ಅರಿತು, ತಿಳಿದು ಮಾತನಾಡಿದ್ದಾರೆ. ಅವರ ಗಮನವು ಅತಿ ಸೂಕ್ಷ್ಮ ಮತ್ತು ಸಣ್ಣ ಸಂಗತಿಗಳನ್ನು ಸಮಾಜದ ಅದಕ್ಕೆ ಹೊಂದಿಕೊಂಡು ನಡೆಯುತ್ತಿರುವ ವಾತಾವರಣವನ್ನು ಪ್ರಶ್ನಿಸುವ ಸಾಹಸ ಅವರ ವಚನಗಳ ಮೂಲಕ ಮಾಡಿದ್ದಾರೆ. ಅದು ಜಾತಿ, ಕುಲ, ಆಧಾರಿತ ವಿಷಯವೇ ಆಗಿರಬಹುದು ಇಲ್ಲವೇ ಇನ್ನಾವುದೇ ವಿಷಯವಾಗಿರಬಹುದು ಅವರು ಎಲ್ಲ ವಿಷಯಗಳ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ.

ಅಡಿ ಟಿಪ್ಪಣಿಗಳು:

೧) ೩೨೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೧೯

೨) ೩೦೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೧೭

೩) ೪೨೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೩೦-೮೩೧

೪) ೨೭೯ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೧೪

೫) ೩೬೭ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೨೪

೬) ೧೮೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೦೪

೭) ೨೮೮ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೧೫

೮) ೩೪೨ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೨೧

೯) ೩೩೬ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೨೦

೧೦) ೬೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೭೯೩-೭೯೪

೧೧) ೪೨೮ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೩೧

೧೨) ೧೦೮೩/೨೮೪ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೮

೧೩) ೧೦೭೯/೨೮೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ. ೮೯೮

೧೪) ೮೩೯/೪೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೯

೧೫) ೯೧೯/೧೨೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.ಸ೮೮೬

೧೬) ೧೦೨೩/೨೨೪ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೪

೧೭) ೯೩೯/೧೪೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೮೮

೧೮) ೧೦೭೭/೨೭೮ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೮

೧೯) ೧೦೭೮/೨೭೯ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೮

೨೦) ೮೨೬/೨೭ ಬ.ವ.ಮಾ-೧/ಶಿ.ಶ.ವ.-೫ ಪು.ಸಂ. ೮೭೮

೨೧) ೧೧೦೨/೭ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೯೦೦

೨೨) ೭೭೫/೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೩

೨೩) ೭೭೮/೬ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೩

೨೪) ೧೨೨೬/೨೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೧೫

೨೫) ೭೭೦/೧೦ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೩

೨೬) ೪೩೮/೨ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೩೧

೨೭) ೫೩೮/೧೦೬/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೪೬.

೨೮) ೧೦೮೭/೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೯

೨೯) ೧೦೮೮/೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೯

೩೦) ೧೦೮೯/೨/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೯

೩೧) ೧೩೪೭/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೩೨

೩೨) ೧೨೦೨/೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೧೨

೩೩) ೧೨೦೫/೨ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೦೩

೩೪) ೧೨೧೯/೧೬/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೧೪

೩೫) ೧೨೩೧/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೧೬.

೩೬) ೭೮೧/೩/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೪

೩೭) ೭೭೧/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೩

೩೮) ೭೪೦/೧೨ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೯

೩೯) ೭೩೯/೧೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೯

೪೦) ೭೪೧/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೯

೪೧) ೭೪೨/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೯

೪೨) ೭೪೮/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೦

೪೩) ೭೪೯/೧/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೦

೪೪) ೭೫೦/೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೭೦

೪೫) ೭೫೧/೧ ಬ.ವ.ಮಾ-೧/ಶಿ.ಶ.ವ.-೫ ಪು.ಸಂ ೮೭೦

೪೬) ಬ.ವ.ಮಾ-೧/ಶಿ.ಶ.ವ.-೫-ಪುಟ ಸಂ. ೨೮೪

೪೭) ೧೦೨೩/೨೨೪/ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೪

೪೮) ೧೦೨೨/೨೨೩/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೪

೪೯) ೮೪೩/೪೪ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೮೦

೫೦) ೧೧೩೪/೪ ಬ.ವ.ಮಾ-೧/ಶಿ.ಶ.ವ.-೫ ಪು.ಸಂ:೯೦೪

೫೧) ೭೧೧/೮ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೬

೫೨) ೭೨೩/೨೦ ಬ.ವ.ಮ ೧/ಶಿ.ಶ.ವ.೫ ಪು.ಸಂ೮೬೭

೫೩) ೭೨೭/೨೪ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೭-೮೬೮

೫೪) ೭೦೯/೬ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೬

೫೫) ೭೧೨/೬ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೬

೫೬) ೧೨೮೪/೫೨ ಬ.ವ.ಮಾ-೧/ಶಿ.ಶ.ವ.-೫ ಪು.ಸಂ. ೯೨೨

೫೭) ೬೮/೬೮/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೭೯೪

೫೮) ೫೯೨/೫/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೫೪

೫೯) ೬೨೧/೩೪/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೫೮

೬೦) ೬೭೧/೮೪/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೨

೬೧) ೬೭೨/೮೫/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೨

೬೨) ೧೧೪೪/೧೩/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೦೫

೬೩) ೧೧೭೭/೪೬/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೯೦೯

೬೪) ೪೨೪/೯೨/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೪೪

೬೫) ೭೩೨/೪, ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೮

೬೬) ೧೦೯೨/೩ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೯೯

೬೭) ೭೦೮/೫ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೬೬

೬೮) ೪೮೭/೫೫/ ಬ.ವ.ಮಾ-೧/ಶಿ.ಶ.ವ.-೫ ಪು.ಸಂ.೮೩೯

ಸಮಾರೋಪ :

ಭಾರತೀಯ ಸಮಾಜ ಹೆಣ್ಣನ್ನು "ಯತ್ರನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾ" ಎಲ್ಲಿ ಸ್ತ್ರೀಯರನ್ನು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ, ಎಂಬ ವಾಕ್ಯದಂತೆ ಅವಳನ್ನು ಪೂಜಿಸಿದೆ. ಆದರೆ ಹೆಣ್ಣನ್ನು ಹೆಣ್ಣೆಂದು ಅವಳನ್ನು ಗೌರವಿಸಲಿಲ್ಲ. ಅವಳು ಭಾವನಾಜೀವಿ, ಅವಳಿಗೂ ಮನಸ್ಸಿದೇ ಎಂದು ಸಮಾಜ ಪರಿಗಣಿಸಲಿಲ್ಲ. ಹಾಗಾಗಿ ಅವಳನ್ನು ತಲತಲಾಂತರಗಳಿಂದ ಶೋಷಿಸಿಕೊಂಡು ಬಂದಿದೆ. ಈ ವಾತಾವರಣಕ್ಕೆ ವಿರುದ್ಧವಾಗಿ ೧೨ನೇ ಶತಮಾನದ ಶರಣರು ಮಹಿಳೆಯರಿಗೆ ಮುಕ್ತ ಅವಕಾಶ ಮತ್ತು ಸ್ವಾತಂತ್ರ್ಯವನ್ನು ನೀಡಿದ್ದಾರೆ. ವಚನಕಾರ್ತಿಯರು ಈ ಮುಕ್ತ ಅವಕಾಶ ಮತ್ತು ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ನೀಡಿದ್ದಾರೆ. ವಚನಕಾರ್ತಿಯರು ಈ ಮುಕ್ತ ಅವಕಾಶ ಮತ್ತು ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಬಳಸಿಕೊಂಡು ವೈಚಾರಿಕವಾಗಿ, ಬೌದ್ಧಿಕವಾಗಿ, ದೈಹಿಕವಾಗಿ, ಸಮಾನಗಳು ಎಂದು ಸಾಬೀತು ಪಡಿಸಿರುವದು ಇದನ್ನು ನಾನು "ಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆ' ಎಂಬ ವಿಷಯವನ್ನು ಆರಿಸಿಕೊಂಡು ಅಧ್ಯಯನ ಅನುಕೂಲಕ್ಕಾಗಿ ಅದರಲ್ಲಿ ಮೇಲ್ವರ್ಗದ ವಚನಕಾರ್ತಿಯರು ಮತ್ತು ಕೆಳವರ್ಗದ ವಚನಕಾರ್ತಿಯರು ಎಂದು ದೊರೆತ್ತಿರುವ ವಚನಕಾರ್ತಿಯರನ್ನು ಪಟ್ಟಿಮಾಡಿದ್ದಾನೆ. ಇವರ ವಚನಗಳನ್ನು ಸಮಗ್ರವಾಗಿ ಅವಲೋಕಿಸಿ ಅವರ ವಚನಗಳನ್ನು ;

೧) ಹೆಣ್ತನದ ಸೀಮೆಯನ್ನು ದಾಟಿದ ವಚನಕಾರ್ತಿಯರು.

೨) ವ್ರತ, ನಿಯಮ ಆರಾಧನೆಗಳನ್ನು ಸಂಸ್ಕಾರ ನೀಡಿದ ವಚನಕಾರ್ತಿಯರು.

೩) ವಿಚಾರ ಪತ್ನಿಯರು.

೪) ವಚನಗಳಲ್ಲಿ ಮೌಢ್ಯ ಮತ್ತು ಡಾಂಭಿಕತೆಯ ನಿರಾಕರಣೆ

೫) ಜಾತಿ ಸೂಚಕಗಳನ್ನು ಜಾಲಾಡಿದ ವಚನಕಾರ್ತಿಯರು.

ಎಂದು ವಿಭಾಗಿಸಿಕೊಂಡು. ನನ್ನ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದೇನೆ.

ಸಮಾಜ ಹೆಣ್ಣನ್ನು ಅವಳ ಜೈವಿಕ ಭಿನ್ನತೆಯಿಂದಾಗಿ ಕೀಳಾಗಿ ಮತ್ತು ಕಾಮುಕ ದೃಷ್ಟಿಯಿಂದ ಕಾಣುತ್ತಿರುತ್ತದೆ. ಹೆಣ್ಣು ಸಂಪೂರ್ಣ ಪರಾವಲಂಬಿ ಜೀವಿ ತಂದೆ, ಗಂಡ, ಮಗನ ಆಶ್ರಯಲ್ಲಿಯೇ ಬೆಳೆಯಬೇಕು. ಈ ಎಲ್ಲಾ ವಿಚಾರಗಳಿಗೆ ನಿಯಮಗಳಿಗೆ ತತ್ವಕ್ಕೆ ಭಿನ್ನವಾಗಿ ಬದುಕಿ ತೋರಿಸುರುವುದು ಶರಣೆಯರ ವಚನಗಳ ಮೂಲಕ ಕಂಡುಕೊಳ್ಳಲಾಯಿತು. ಹಾಗಾಗಿ ಇವರು ಮಹಿಳೆ ಮತ್ತು ಸ್ತ್ರೀ ಕುಲದ ಮೊದಲ ಪ್ರತಿಭಟನಾಕಾರರಾಗಿದ್ದಾರೆ. ಸ್ತ್ರೀ ಮತ್ತು ಸ್ತ್ರೀ ತನದ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ, ಸಂಪೂರ್ಣ ಸಮಾಜವನ್ನು ಒಂಟಿಯಾಗಿ ಎದುರು ಹಾಕಿಕೊಂಡು ಸಮಾಜದ ನಿಯಮಕ್ಕೆ ವಿರುದ್ಧವಾಗಿ ಬದುಕುಸಾಗಿವುದನ್ನು ಅಕ್ಕಮಹಾದೇವಿಯಿಂದ ವಚನಗಳ ಮೂಲಕ ತಿಳಿದುಕೊಳ್ಳಲಾಯಿತು. ಇಳಿ ವಯಸ್ಸಿನಲ್ಲಿಯೇ ವೈರಾಗ್ಯ ಮಾನಸಿಕ ಗಟ್ಟಿತನ ಸಮಧಾನದ ಸಮಾಧಿ ಸ್ಥಿತಿಯ ಉತ್ತಂಗವನ್ನು ಅವಳ ವಚನಗಳಲ್ಲಿ ಕಾಣುತ್ತೇವೆ. ಹೆಣ್ಣು ಗಂಡು ಎನ್ನುವದನ್ನು ಕೇವಲ ಜೈವಿಕ ಭಿನ್ನತೆ ಅದನ್ನು ಸಮಾಜ

ಸಹಜವಾಗಿ ಪರಿಗಣಿಸಬೇಕು. ಈ ಭಿನ್ನತೆಯಿಂದ ಶೋಷಣೆಗೊಳಪಡಿಸುವ ಸಮಾಜಕ್ಕೆ ನೇರವಾಗಿ ಪ್ರತಿಭಟಿಸುವ ಛಲ ಎದೆಗಾರಿಕೆ ಮತ್ತು ಪ್ರಶ್ನಿಸುವ ಧೈರ್ಯವನ್ನು ಈ ಅಧ್ಯಯನದಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಿದ್ದಾನೆ.

ಭಾರತದಲ್ಲಿ ಸಾಮಾನ್ಯವಾಗಿ ೩೩೬ ಕೋಟಿ ದೇವತೆಗಳು ಇರುವರು ಎನ್ನುವ ಕಲ್ಪನೆ ಇದೆ. ಆ ದೇವತೆಗಳಿಗೆ ಅನುಸಾರವಾಗಿ ವ್ರತನಿಯಮ ಆಚರಣೆಗಳು ಭಿನ್ನ ಭಿನ್ನವಾಗಿವೆ. ಇವುಗಳನ್ನು ಹೋಗಲಾಡಿಸಿ 'ಏಕದೇವೋಪಾಸನೆ ನಿಯಮವು ಶರಣರಲ್ಲಿ ಕಾಣುತ್ತೇವೆ. ಈ ಏಕದೇವೊಪಸನೆಗೆ ಇರಬೇಕಾದ ವ್ರತನಿಯಮದ ಆಚರಣೆಗಳು ನಿಷ್ಠೆಯಿಂದ ಮಾಡಬೇಕು. ವ್ರತ ನಿಯಮಗಳನ್ನು ತಪ್ಪಬಾರದು. ವ್ರತ ಭಷ್ಟರ ಅಥವಾ ವ್ರತಹೀನರೊಂದಿಗೆ ವ್ರತನಿಷ್ಠೆರಾದವರು ಕೊಡಬಾರದು. ವ್ರತಹೀನರೊಂದಿಗೆ ಕೂಡಿದರೆ ಅವರಿಗೆ ನರಕ ಪ್ರಾಪ್ತಿ ಎಂದು ಹೇಳಿದ್ದಾರೆ. ಈ ರೀತಿಯ ವಚನಗಳನ್ನು ಗಮನಿಸಿದಾಗ ಶರಣೆಯರು ವ್ರತನಿಯಮಗಳನ್ನು ಕಟ್ಟುನಿಟ್ಟಾಗಿ ಶಿಸ್ತು ಬದ್ಧವಾಗಿ ಪಾಲಿಸುತ್ತಿದ್ದರು ಎಂದು ಒಂದೆಡೆ ಅರಿವಾಗುತ್ತದೆ. ಮತ್ತು ಅಂತರಂಗ ಬಹಿರಂಗದಲ್ಲೂ ನಿಷ್ಠೆ ನಡೆ-ನುಡಿಯಲ್ಲಿನ ಏಕತೆ ಹೊಂದಿದ ವ್ರತ ನಿಯಮಪಾಲನೆ ಮಾಡಬೇಕೆಂದು ಹೇಳಿ ಅದಕ್ಕೆ ಇಂದು ಸಂಸ್ಕಾರವನ್ನು ನೀಡಿದ್ದಾರೆ. ಇದನ್ನು ಕುರಿತು ವಚನಕಾರ್ತಿಯರು ತುಂಬಾ ವೈಚಾರಿಕವಾಗಿ ತಿಳಿಸಿರುವುದನ್ನು ಕಾಣಬಹುದು.

ವಿಚಾರ ಪತ್ನಿಯರು ಎಂಬ ಅರ್ಧಯ್ಯನದಲ್ಲಿ ಶರಣರ ಪತ್ನಿಯರು ಸಹಧರ್ಮಿಯಾಗಿ ಪತಿಯ ಸೇವೆಯಲ್ಲಿ ಸಮವಾಗಿ ಪಾಲುದಾರಿಕೆಯನ್ನು ಹಚ್ಚಿಕೊಂಡಿದ್ದಾರೆ. ಇವರು ಪತಿಯ ಸೇವೆ ಸ್ಫೂರ್ತಿ ನೀಡಿದ್ದಾರೆ. ಕಾಲಕಾಲಕ್ಕೆ ಎಚ್ಚರಿಸಿದ್ದಾರೆ. ಸುಖದುಃಖವನ್ನು ಸಮನವಾಗಿ ಹಚ್ಚಿಕೊಂಡು ಸರಳ ಜೀವನ ಸಾಗಿಸಿದ್ದಾರೆ. ಸತಿಪತಿಗಳೊಂದಾಗಿ ಮಾಡಿದ ಭಕ್ತಿ ಶಿವನಿಗೆ ಸಮರ್ಪಣೆಯಾಗುತ್ತದೆ ಎಂಬುದನ್ನು ಸಾಭೀತುಪಡಿಸಿದ್ದಾರೆ.

ಬೌದ್ಧಿಕವಾಗಿ ವೈಚಾರಿಕವಾಗಿ ಪುರಷನಷ್ಟೇ ಸಮರ್ಥವಾದ ಚಿಂತನೆ ಮಾಡಿ ಅವರಿಗೆ ಆಶ್ಚರ್ಯಗೊಳಿಸಿದ್ದಾರೆ. ಸತಿಪತಿಗಳಾದರೂ ವೈಚಾರಿಕ ಪತ್ನಿಯಾಗಿ ಇಬ್ಬರೂ ಶಿಶುಗಳಾಗಿ ಜೀವನ ಸಾಗಿಸಿದ್ದಾರೆ. ಕಾಯಕ ನಿಷ್ಠೆಯ ಬೋಧನೆ ನೀಡಿದ್ದಾರೆ. ಪತಿಯ ಸಮಸ್ಯೆ ಸಂದೇಹಗಳನ್ನು ನಿವಾರಿಸಿದ್ದಾರೆ ಮತ್ತು ತಮ್ಮ ಈ ಸರಳ ಜೀವನ ಸುಂದರವಾದದ್ದು ಎಂದು ಪತಿಕಾಯಕದಿಂದ ಬೇಸತ್ತಾಗ ತಿಳಿಹೇಳಿದ್ದಾರೆ ಇಂತಹ ಅನೇಕ ಅಂಶಗಳನ್ನು ಈ ಅಧ್ಯಯದಲ್ಲಿ ಕಾಣಿಸುತ್ತದೆ.

ಸಮಾಜವು ಮೌಢ್ಯ ಆಚರಣೆಗಳ ಮೂಟೆಗಳನ್ನು, ಹೋರಿಸಿದ ಭಾರವನ್ನು ಶರಣಿಯರು ಕಿತ್ತು ಬಗೆದಿದ್ದಾರೆ, ಇವರು ಡಾಂಭಿಕ ಭಕ್ತಿಯನ್ನು ಯಾವುದೇ ಮುಲಾಜು ಇಲ್ಲದೆ ನಿರಾಕರಿಸಿದ್ದಾರೆ. ಅವುಗಳ ಕುರಿತಾದ ಪ್ರಶ್ನೆ ಎತ್ತಿ ವಿರೋಧಿಸಿದ್ದಾರೆ ಡಾಂಭಿಕ ಭಕ್ತಿಯನ್ನು ತೋರಪಡಿಸುವ ವೇಷಧಾರಿಗಳ ವೇಷವನ್ನು ಕುರಿತು ವ್ಯಂಗ್ಯವಾಡಿದ್ದಾರೆ. ಅವರನ್ನು ನಾಯಿ ಕತ್ತೆಗಳೆಂದು ತರಾಟೆಗೆ ತೆಗೆದುಕೊಂಡು ಸಮಾಜದಲ್ಲಿನ ಡಾಂಭಿಕತೆ ಹೋಗಲಾಡಿಸಲು ಪ್ರಯತ್ನಿಸಿದ್ದಾರೆ. ಇಂತಹ ಅನೇಕ ಶರಣಿಯರ ವಚನಗಳು ಸಮಾಜ ಸುಧಾರಣೆಯ ಕಾರ್ಯದಲ್ಲಿ ತೊಡಗಿದ್ದರು ಎಂದು ತಿಳಿಸುತ್ತದೆ.

ಜಾತಿ ನಮ್ಮ ಸಮಾಜಕ್ಕೆ ಅಂಟಿಕೊಂಡು ರೋಗ, ಇದನ್ನು ಕುರಿತು ವಚನಕಾರ್ತಿಯರು ತಮ್ಮ ವಚನಗಳಲ್ಲಿ ಪ್ರಶ್ನಿಸಿದ್ದಾರೆ. ಅದನ್ನು ಹೋಗಲಾಡಿಸಲು ಯತ್ನಿಸಿರುವ ವಚನಗಳು ನಮಗೆ ೧೨ನೇ ಶತಮಾನದಲ್ಲಿ ಕಾಣುತ್ತೇವೆ. ಕೆಳವರ್ಗದವರು ಮಾಡಿದ ವಸ್ತುಗಳು ಮೇಲ್ವರ್ಗದವರು ಬಳಸಬಹುದು. ಮೇಲ್ವರ್ಗದವರು ತಿಂದು ಬಿಸಾಡಿದ ಮಾಂಸವನ್ನು ತಂದು ವಸ್ತುವಾಗಿ ಮಾರ್ಪಡಿಸಿದ ವಸ್ತುಗಳಿಗೆ ಸಮಾಜದಲ್ಲಿ ಬೆಲೆಯಿದೆ. ಅದನ್ನು ತಯಾರಿಸಿದ ವ್ಯಕ್ತಿಗಳಿಗೆ ಇಲ್ಲ. ಎನ್ನುವಂತಹ ಅನೇಕ ಅಂಶಗಳನ್ನು ಕುರಿತು ವಚನಕಾರ್ತಿಯರು ತರಾಟೆಗೆ ತೆಗೆದುಕೊಂಡು ಜಾತಿ ನಿವಾರಣೆಯ ಕಾರ್ಯವನ್ನು ಮಾಡಿರುವ ಅಂಶಗಳನ್ನು "ಜಾತಿಸೂಚಕಗಳನ್ನು ಜಾಲಾಡಿದ ವಚನಕಾರ್ತಿಯರು' ಎಂಬ ಅಧ್ಯಯದಲ್ಲಿ ಗಮನಿಸಬಹುದಾಗಿದೆ.

ಹೀಗೆ ಶರಣೆಯರು ಅನೇಕ ರೀತಿಯ ವಿಷಯಗಳ ಕುರಿತು ವಚನಗಳನ್ನು ರಚಿಸಿ ಆಧುನಿಕ ಸಮಾಜಕ್ಕೆ ಮಾದರಿಯಾಗಿರುವರು ಇಲ್ಲಿ ನಾನು ನನ್ನ ಎಮ್.ಫಿಲ್ ಪದವಿಗೆ ಅಧ್ಯಯನವನ್ನು ಸೀಮಿತಗೊಳಿಸಿಕೊಂಡಿದ್ದೇನೆ. ಈ ವಚನಕಾರ್ತಿಯರ ವಚನಗಳು ಇನ್ನು ಸಾಕಷ್ಟು ಅಂಶಗಳು ಒಳಗೊಂಡಿದ್ದು ಇದರ ಮೇಲೆ ಇನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡುವ ಅವಶ್ಯಕತೆಯಿದೆ ಎಂದು ನಾನು ಇಲ್ಲಿ ಹೇಳುವ ಇಚ್ಚಿಸುತ್ತೇನೆ.

ಗ್ರಂಥ ಋಣ:

೧) ಬಸವಯುಗದ ವಚನ ಮಹಾಸಂಪುಟ-೧ – ಕನ್ನಡ ಪ್ರಸ್ತಕ ಪ್ರಾಧಿಕಾರ

೨) ಸತಿ ಪತಿಗಳೊಂದಾದ ಬದುಕು- ಡಾ. ಸೋಮನಾಥ ಯಾಳವಾರ ಅಕ್ಕ, ಗಂಗಾಂಬಿಕೆ

೩) ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ- ತೇಜಸ್ವಿನಿ ನಿರಂಜನ ಸೀಮಂತಿನಿ ನಿರಂಜನ

೪) ಫಲದೊಳಗಣ ರುಚಿ- ಡಾ. ಜಯಶ್ರೀ ದಂಡೆ

೫) ಸ್ತ್ರೀವಾದ, ತಾತ್ವಿಕತೆ- ಶ್ರೀಮತಿ ಎಚ್.ಎಸ್

೬) ಶರಣರ ಬಂಡಾಯದ ವಚನಗಳು- ಡಾ. ಬಸವರಾಜ ಸಬರದ

೭) ಮಹಿಳೆ ಶೋಷಣೆ- ಸವಾಲುಗಳು- ಡಾ. ವಿಜಯಶ್ರೀ ಸಬರದ

೮) ಪರ್ಯಾಯ ಸಂಸ್ಕೃತಿ ವಚನ ಸಂಪುಟ – ಡಾ.ಸಿ.ವೀರಣ್ಣ

೯) ಶಬ್ದ ಸಂಪುಟ- ಡಾ.ಎಸ್.ವಿದ್ಯಾಶಂಕರ

೧೦) ಸಂವೇಧನೆ – ಶಶಿಕಲಾ ವೀರಯ್ಯಸ್ವಾಮಿ